|| ಶ್ರೀರಸ್ತು ||

ಶ್ರೀಗುರು ದಕ್ಷಿಣಾಮೂರ್ತಯೇ ನಮಃ

ಸಕಲನಿಗಮಾಗಮಸಾರ ಸಂಗ್ರಹಮಾಗಿಯೂ, ವೇದಾಂತರಹಸ್ಯ
ಪ್ರಕಾಶಮಾಗಿಯೂ, ಮುಮುಕ್ಷುಜನ ಹಿತಾರ್ಥಮಾಗಿ
ಶ್ರೀಮತ್ ಪರಮಹಂಸ, ಮಹಲಿಂಗರಂಗ ಯತಿವರೇಣ್ಯ ಪ್ರಿಯಶಿಷ್ಯ

ಶ್ರೀ ಶಂಕರಾನಂದ ಯೋಗೀಶ್ವರರಿಂದ

ವಿರಚಿತವಾದ

ಕೈವಲ್ಯ ನವನೀತವು

ಎಂಬೀ ಗ್ರಂಥವು
ಬ್ರಹ್ಮಶ್ರೀ ಶಿವರಾಮಶಾಸ್ತ್ರಿಗಳಿಂದ
ಪರಿಶೋಧಿಸಲ್ಪಟ್ಟು

ವಿಶಿಷ್ಟ ಸ್ವಾತಂತ್ರ್ಯವಂ ಪಡೆದಿರುವ

ವಿ. ಆರ್. ಪೊನ್ನುಸ್ವಾಮಿಶೆಟ್ಟಿ,

ಜೀವರತ್ನಾಕರ ಬುಕ್ ಡಿಪೋ ಮೈಸೂರು.

1961

ಕ್ರಯ 1-50ನ.ಪೈ. [ರಿಜಿಸ್ಟರ್ ಕಾಪೀರೈಟ್.]

॥ ಶ್ರೀರಸ್ತು ॥

ಶ್ರೀಗುರು ದಕ್ಷಿಣಾಮೂರ್ತಯೇ ನಮಃ

ಸಕಲನಿಗಮಾಗಮಸಾರ ಸಂಗ್ರಹವಾಗಿಯೂ, ವೇದಾಂತರಹಸ್ಯ ಪ್ರಕಾಶವಾಗಿಯೂ, ಮುಮುಕ್ಷುಜನ ಹಿತಾರ್ಥವಾಗಿ ಶ್ರೀಮತ್ ಪರಮಹಂಸ, ಮಹಲಿಂಗರಂಗ ಯತಿವರೇಣ್ಯ ಪ್ರಿಯಶಿಷ್ಯ

ಶ್ರೀ ಶಂಕರಾನಂದ ಯೋಗೀಶ್ವರರಿಂದ

ವಿರಚಿತವಾದ

ಕೈವಲ್ಯನವನೀತವು

ಎಂಬೀ ಗ್ರಂಥವು

ಬ್ರಹ್ಮಶ್ರೀ ಶಿವರಾಮಶಾಸ್ತ್ರಿಗಳಿಂದ

ಪರಿಶೋಧಿಸಲ್ಪಟ್ಟು

ಇದರ ವಿಶಿಷ್ಟ ಸ್ವಾತಂತ್ರ್ಯವಂ ಪಡೆದಿರುವ

ಮಿಸೆಸ್. ಬಿ. ಆರ್. ಪೊನ್ನುಸ್ವಾಮಿಶೆಟ್ಟಿ,

ಜೀವರತ್ನಾಕರ ಬುಕ್ ಡಿಪೋ ಮೈಸೂರು.

1961

ಕ್ರಯ 1—8—0 [ರಿಜಿಸ್ಟರ್ ಕಾಪೀರೈಟ್]

ಶ್ರೀ ಶಿವಾಯನಮಃ

ಕೈವಲ್ಯನವನೀತವೆಂಬ ಗ್ರಂಥದಲ್ಲಿ

ವಿಷಯಸೂಚಿಕೆಯು

ಶ್ಲೋ॥ ಭಸ್ಮವ್ಯಾಪಾಂಡುರಂಗಶ್ಯಶಿಕಲಧರೋಜ್ಞಾನಮುದ್ರಾಕ್ಷ ಮಾಲಾ ।
ವೀಣಾಪುಸ್ತಕರ್ವಿರಾಜತ್ಕರಕಮಲಧರೋಯೋಗಪಟ್ಟಾಭಿರಾಮಃ ॥
ವ್ಯಾಖ್ಯಾಪೀಠೆನಿಷಣ್ಣೋಮುನಿವರನಿಕರೈಸ್ಸೇವ್ಯಮಾನಃ ।
ಪ್ರಸನ್ನಸ್ಸವ್ಯಾಳಃಕೃತ್ತಿವಾಸಾಸ್ಸತತಮವತುನೊದಕ್ಷಿಣಾಮೂರ್ತಿರೀತಃ ॥

	ಆಕಾಶತತ್ವ	ವಾಯು	ಅಗ್ನಿ	ಅಪ್ಪು	ಪೃಥ್ವಿ	
ಜ್ಞಾತೃವು ಮೂಲ	ಪ್ರಕೃತಿ ಸಂಗದಿಂದ	ಸಮಾನ ವಾಯುಸೇರಿ	ಶ್ರೋತ್ರ ದ್ವಾರ	ಶಬ್ದವನ್ನು ತಿಳಿದು	ವಾಕ್ಕಿನಿಂದ	ವಚಿಸುತ್ತಾನೆ
ಅದೇಜ್ಞಾತೃ	ಮನಸ್ಸಿನಿಂದ	ವ್ಯಾನವಾಯು ಸೇರಿ	ತ್ವಗೀಂದ್ರಿಯ ದ್ವಾರ	ಸ್ಪರ್ಶನಂ ಗೈದು	ಹಸ್ತದಿಂದ	ಹಿಡಿಯುತ್ತಾನೆ
ಅದೇಜ್ಞಾತೃ	ಬುದ್ಧಿಯಿಂದ	ಉದಾನ ವಾಯುಸೇರಿ	ನೇತ್ರೇಂದ್ರಿಯದ್ವಾರ	ರೂಪುನೋಡಿ	ಪಾದದಿಂದ	ನಡೆಯುತ್ತಾನೆ
ಅದೇಜ್ಞಾತೃ	ಚಿತ್ತದಿಂದ	ಅಪಾನವಾಯುಸೇರಿ	ಜಿಹ್ವೆಯಿಂದ	ರಸವನ್ನು ಸವಿದು	ಮೇಢ್ರದಿಂದ	ಆನಂದಿಸುತ್ತಾನೆ
ಅದೇಜ್ಞಾತೃ	ಹಮ್ಮಿನಿಂದ	ಪ್ರಾಣ ವಾಯುಸೇರಿ	ಘ್ರಾಣೇಂದ್ರಿಯದಿಂದ	ಗಂಧವನ್ನು ಅರಿತು	ವಾಯುದ್ವಾರ	ಮಲವ ಬಿಡುತ್ತಾನೆ

೧ ನೇ ಜೀವನ ಸೂಕ್ಷ್ಮ ಶರೀರ ಪಂಚೀಕರಣ ಚಕ್ರ ಇದೆ (ಲಿಂಗಶರೀರವು-)

ಅಪಂಚೀಕೃತ ಪಂಚ ಸೂಕ್ಷ್ಮ ಭೂತಗಳು		ಆಕಾಶ	ವಾಯು	ಅಗ್ನಿ	ಜಲ	ಪೃಥ್ವಿ	ಸತ್ವರಜಸೂಕ್ಷ್ಮ ಭೂತಗಳು
ಸತ್ವ ಸೂಕ್ಷ್ಮ ಪಂಚ ಭೂತಗಳು	ಸತ್ಯಸಮಷ್ಟಿ ಸೂಕ್ಷ್ಮ ಪಂಚ ಭೂತಗಳು		ಮನಸ್ಸು ಚಂದ್ರನು	ಬುದ್ಧಿ ಬೃಹಸ್ಪತಿ	ಚಿತ್ತವು ಜೀವನು	ಅಹಂಕಾರವು ರುದ್ರನು	ಅಂತಃಕರಣಗಳು ಅಧಿದೇವತೆಗಳು
	ಸತ್ಯವ್ಯಷ್ಟಿ ಸೂಕ್ಷ್ಮ ಪಂಚ ಭೂತಗಳು	ಶ್ರೋತ್ರವು ದಿಕ್ಕು	ತ್ವಕ್ಕು ವಾಯುವು	ಚಕ್ಷುವು ಅರ್ಕನು	ಜಿಹ್ವೆ ವರುಣನು	ಘ್ರಾಣವು ಅಶ್ವಿನಿಗಳು	ಜ್ಞಾನೇಂದ್ರಿಯಗಳು ಅಧಿದೇವತೆಗಳು
ರಜೋ ಸೂಕ್ಷ್ಮ ಪಂಚ ಭೂತಗಳು	ರಜೋ ಸಮಷ್ಟಿ ಸೂಕ್ಷ್ಮಪಂಚ ಭೂತಗಳು	ಸಮಾನವು ಜಯನು	ವ್ಯಾನವು ವಿಶ್ವಯೋನಿ	ಉದಾನವು ಅಜನು	ಪ್ರಾಣವು ವಿಶಿಷ್ಟನು	ಅಪಾನವು ವಿಶ್ವಕರ್ಮ	ಪಂಚಪ್ರಾಣಗಳು ಅಧಿದೇವತೆಗಳು
	ರಜೋ ಸಮಷ್ಟಿ ಸೂಕ್ಷ್ಮಪಂಚ ಭೂತಗಳು	ವಾಕ್ಕು ವಹ್ನಿ	ಪಾಣಿ ಚಂದ್ರನು	ಉಪನದಿ ವಿಷ್ಣುವು	ಗುಹ್ಯ ಬ್ರಹ್ಮನು	ವಾಯು ಮೃತ್ಯುವು	ಕರ್ಮೇಂದ್ರಿಯಗಳು ಅಧಿದೇವತೆಗಳು

ಜೀವನ ಸೂಕ್ಷ್ಮ ದೇಹತತ್ವದಿ ದೇವತೆಗೆ ಈಶ್ವರನ ಸೂಕ್ಷ್ಮ ದೇಹತತ್ವಗಳು

॥ ಓಂ ॥

ಶ್ರೀ ಗುರಪರಬ್ರಹ್ಮಣೇನಮಃ.

ಕೈವಲ್ಯನವನೀತವು

ಶ್ಲೋ॥ ಗುರುಬ್ರಹ್ಮಾ ಗುರುರ್ವಿಷ್ಣು ಗುರುದೇವ ಮಹೇಶ್ವರಃ।
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇನಮಃ॥
ಶ್ಲೋ॥ ಗುರುವೇ ಸರ್ವಲೋಕಾನಾಂ ಬಿಷಜೆ ಭವರೋಗಿಣಾಂ।
ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇನಮಃ॥

ಮಂಗಳಾಚರಣಂ

೧. ಕಂದ॥ ಶ್ರೀ ಸುಖಪ್ರದಸೇವಕ ಭವ। ನಾಶನೆ ತವ ಪಾದಪದ್ಮ ನಂಬಿದೆ ಸತತಂ॥ ವಾಸವಮುಖ ಸುರಸೇವ್ಯನೆ। ಈಶನೆ ಮಾಳ್ಕೆನ್ನ ನುತಿಗೆ ವರಮಂಗಳವಂ॥

೨. ಶಾ॥ ವೃ॥ ಶ್ರೀಮನ್ಮಂಗಳಗೌರೀ ಚಿತ್ತನಿಲಯಂ ಶ್ರೀಸಚ್ಚಿದಾನಂದನಂ॥ ಶ್ರೀಮದ್ಭಕ್ತಕುಲಾಬ್ಧಿಸೋಮ ಸತತಂ ನಿಷ್ಕಾಮನಂ ಭೀಮನಂ। ಬ್ರಹ್ಮೇಂದ್ರಾ ಮರವಂದ್ಯ ಚಂದ್ರಧರನಂ ನಿತ್ಯಂ ಸ್ವಯಂಧಾಮನಂ। ಬ್ರಹ್ಮಾನಂದಮಾಳ್ಕೆನುತ್ತಿ ನುತಿಪೆಂ ಶ್ರೀ ದಕ್ಷಿಣಾಮೂರ್ತಿಯಂ॥

ಗುರುಸ್ತೋತ್ರವು

ರಾಗ—ಸುರಟಿ—ಆದಿತಾಳ

೩. ಶ್ರೀ ಗುರು ಮಾಂಪಾಹಿ। ಸಂತತ। ಶ್ರೀ ಗುರುಮಾಂಪಾಹಿ॥ ಪ॥ ರಾಗ ರಹಿತಮುನಿಹೃದಯಾಬ್ಧಿವರಸೋಮ। ಆಗಮವಂದ್ಯ ವಿರಾಜ ಸದ್ಗುಣಸ್ತೋಮ ಶ್ರೀಗುರು ಮಾಂಪಾಹಿ ॥ಅ-ಪ॥ ಪ್ರಣವಪರಾತ್ಪರನೇ। ಅನಘನೆ। ಅನುಪಮ। ಅದ್ವಯನೇ। ವನಜಭವಾಚ್ಯುತರುದ್ರವಂದಿತನೆ। ವನಜಭವಾಂಡಪಿಂಡಾಂಡ ಮಂಡಿತನೆ॥ ಶ್ರೀಗುರು ಮಾಂಪಾಹಿ ॥೧॥ ಮಿಥ್ಯಮಾಯರಹಿತ। ನಿರ್ಮಲ। ಸತ್ಯಜ್ಞಾನಭರಿತ। ಸತ್ತು ಚಿದಾನಂದ ನಿಜಪರಿಪೂರ್ಣನೆ। ಭಕ್ತರ ಭಾಗ್ಯದ ನಿಧಿ ಯೆನ್ನಿಸಿರುವನೆ॥ ಶ್ರೀ ॥೨॥ ಪರಮತತ್ವಸಾರ। ಬೋಧಿತ। ವರಗುಣ ಗಂಭೀರಾ। ಶರಣಶರಣ ನಿಮ್ಮ ಚರಣವ ನಂಬಿದೆ। ವರಗುರು ಮಹಲಿಂಗರಂಗದ ದಯಾನಿಧೆ॥ ಶ್ರೀಗುರುಮಾಂಪಾಹಿ ॥೩॥

ರಾಗ—ಕಲ್ಯಾಣಿ—ಅಟತಾಳ

೪. ಗುರುಮಹದೇವಗೆ । ವಂದಿಪೆ ಭವ ರೋಗವಿನಾಶಕಗೆ ॥ ಪ ॥ ಯೋಗ ಭೋಗವು ರಾಗ ತ್ಯಾಗ ವಿರಾಗಿಗೆ । ಯೋಗಯೋಗಾನಂದಪೂರ್ಣಸಾಗರನಿಗೆ ॥ ಶ್ರೀಗುರುಮಹದೇವಗೆ ॥ ಅ-ಪ ॥ ನೆರೆ ಭಕ್ತಜನರಬಂಧು । ಮುಕ್ತಿಯನೀವ । ಪರಮದಯಾಸಿಂಧು । ವರಹಸ್ತಮಸ್ತಕದಿಂದೆನ್ನ ಭವತಾಪ । ಹರಿಸಿ ನಿತ್ಯಾನಂದ ಪದವಿ ಪಾಲಿಸಿದಂಥ ॥ ಶ್ರೀ ॥ ೧ ॥ ನಿರುತ ಪರಂಧಾಮನು । ನಿರ್ಮಲನಿತ್ಯ । ನಿರುಪಮಾತ್ಮರಾಮನು । ಧರೆಯೊಳು ವಾಚಾಮಗೋಚರವೆನಿಸುವ । ಪರತತ್ವಶ್ರುತಿಯನುಭವದಿ ಗೋಚರಗೈದ ॥ ಶ್ರೀ ॥ ೨ ॥ ಮನುಜರೂಪಿನ ಭರ್ಗನು । ಬ್ರಹ್ಮಾತ್ಮೈಕ । ವಿನಯದಿಂ ಬೋಧಿತನು । ಅನವರತಮೃತಾಂಗನಾಮಣಿಪ್ರಿಯನಿತ್ಯ । ಘನಗುರುಮಹಲಿಂಗರಂಗನೆಂದೆನಿಸಿದ ॥ ಶ್ರೀಗುರುಮಹದೇವಗೆ ॥ ೩ ॥

ರಾಗ—ಮಧ್ಯಮಾವತಿ—ಅಟತಾಳ

೫. ಪೊರೆಯನ್ನ ಪ್ರಭುವೇ ಶ್ರೀಗುರುವೆಂಬ । ವರಕಲ್ಪತರುವೇ ॥ ಪ ॥ ಕರುಣಾಕಟಾಕ್ಷ ವೀಕ್ಷಣದಿಂದಲೆನ್ನಯ । ದುರಿತದುರ್ಗುಣವೆಣಿಸದೆ ಕೃಪೆಯಿಂದಲಿ । ಪೊರೆ ಯನ್ನ ಪ್ರಭುವೆ ॥ ಅ-ಪ ॥ ಗುರುಬಂಧುಮಿತ್ರ । ಗೋತ್ರವುಸೂತ್ರ । ಗುರುವೆ ಪವಿತ್ರ । ಗುರುಬ್ರಹ್ಮ ಗುರುವಿಷ್ಣು ಗುರುಪರಶಿವನೆಂದು । ವರಲುವ ಶ್ರುತಿ ನಂಬಿ ನಿಮ್ಮಡಿನಂಬಿದೆ ॥ ಪೊರೆ ॥ ೧ ॥ ತಂದೆತಾಯಿಗಳು । ನಂಬಿದ ಮಿತ್ರ । ಬಂಧುವರ್ಗಗಳು । ಯಂದಿದ್ದರೆನ್ನನು ಬಿಟ್ಟೋಗುವರು ನೀನು । ಯೆಂದೆಂದು ಬಿಡುವನಲ್ಲೆನುತ ನಂಬಿದೆನೈಯ್ಯ ॥ ಪೊರೆ ॥ ೨ ॥ ನಾರಿ ಮಕ್ಕಳನು । ತನುಮನವನ್ನು । ಭೂರಿಭಾಗ್ಯವನು ಮೀರಿದ ಮಾನಾಭಿಮಾನವೊಪ್ಪಿಸಿಕೊಟ್ಟೆ । ಹೇರನೊಪ್ಪಿಸಿದವನಿಗೆ ಸುಂಕವುಂಟೆ ॥ ಪೊರೆ ॥ ೩ ॥ ಸುಗುಣನಿರ್ಗುಣನೇ । ನಿರ್ಮಲನೇ ನಿಗಮವಂದಿತನೆ । ಅಗಣಿತಕಿಲ್ಬಿಷವಳಿದು ಪಾಲಿಸುವನೆ । ಸುಗುಣಮುಕ್ತಿಯುಗಣಿತ ವರಚಿಂತಾಮಣಿಯೇ ॥ ಪೊರೆ ॥ ೪ ॥ ಶಿರಿಸೊಬಗೆಂಬ । ಮೋಹವು ದುಃಖ । ದುರಿತವೆಂತೆಂಬ । ಶರಧಿಯದಾಂಟಿಸಿ ಮುಕ್ತಿಪಾಲಿಪೆನೆಂಬ । ಬಿರುದು ಪೊತ್ತಿಹ ಗುರುಮಹಲಿಂಗರಂಗನೆ ॥ ಪೊರೆಯನ್ನ ಪ್ರಭುವೇ ॥ ೫ ॥

ರಾಗ—ಕಲ್ಯಾಣಿ—ಅಟತಾಳ

೬ ಪರಮದಯಾನಿಧಿಯೇ । ಶ್ರೀಗುರುನಿತ್ಯ । ಪರಮಪಾವನಮೂರ್ತಿಯೇ ॥ ಪ ॥ ದುರಿತ ಅಜ್ಞಾನವನಳಿದು ಸುಜ್ಞಾನವ । ವರದೆ ನಿನ್ನಂಥ ದಯಾಳುಂಟೆ ಜಗದೊಳು । ಪರಮದಯಾನಿಧಿಯೇ ॥ ಅ-ಪ ॥ ಇಳೆಯ ಭೋಗಂಗಳೆಂಬ । ಆಶೆಯ ಮೋಹ । ಬಲುರಾಗದ್ವೇಷವೆಂಬ । ಸುಳಿಯ ಸಂಸಾರಸಾಗರದಿ ತಡಿಗಾಣದೆ । ಮುಳುಗಿ ಪೋಗುತಲಿರೆ ಕರವಿಡಿದೆತ್ತಿದೆ ॥ ಪರ ॥ ೧ ॥ ವರಪುಣ್ಯವನು ಗಳಿಸಿ । ಸ್ವರ್ಗವ

ನೇರಿ । ಉರುಭೋಗವನನುಭವಿಸಿ । ತಿರುಗಿ ಮರ್ತ್ಯಕೆ ಬಂದು ಬಳಲಿ ಬಾಯಾರದೆ । ಸ್ಥಿರಮುಕ್ತನಾಗೆಂದು ಕರೆದು ಬೋಧಿಸಿದಂಥ ॥ ಪರ ॥೨॥ ಹಟಯೋಗಾದಿಗಳಿಂದಲಿ । ಲೋಕಕೆ ಮೆಚ್ಚು ಚಟುಲಸಿದ್ಧಿಗಳಿಂದಲಿ । ಸಟೆಯು ಜೀವನ್ಮುಕ್ತಿಯದರಿಂದ ಲೆನ್ನುತ । ಘಟಿತವಾಗಿಹ ರಾಜಯೋಗ ಬೋಧಿಸಿದಂಥ ॥ ಪರ ॥೩॥ ಚಲುವಾಭರಣ ವಾಗಿ । ತೋರುವಪರಿ । ಯುನ್ನತಜಗವಿದಾಗಿ । ನನ್ನಿಯಿಂಪರಮಾತ್ಮನೊಬ್ಬ ತೋರುವನೆಂಬ । ಸನ್ನುತಸುಜ್ಞಾನವನ್ನು ಬೋಧಿಸಿದಂಥ ॥ ಪರ ॥೪॥ ಸರ್ವತತ್ವಂ ಗಳನ್ನು । ವೇದಾಂತದ । ಸರ್ವರಹಸ್ಯವನ್ನು । ಸರ್ವಕ್ಕಧಿಕವಾದ ಅಪರೋಕ್ಷಜ್ಞಾನವ। ಸರ್ವ ಶ್ರೀ ಗುರುರಂಗನಾಗಿ ಬೋಧಿಸಿದಂಥ ॥ ಪರಮುದಯಾ ॥ ೫ ॥

ರಾಗ—ಮಧ್ಯಮಾವತಿ—ಅಟತಾಳ

೭. ಗುರುಪರಬ್ರಹ್ಮಾ । ಸರ್ವರಿಗು ಶ್ರೀ ಗುರುಪರಬ್ರಹ್ಮಾ ॥ಪ॥ ಗುರುವೆ ಸಾಕ್ಷಾತ್ ಬ್ರಹ್ಮನಲ್ಲದೆ ಬೇರಿಲ್ಲ । ಪರತತ್ವವೆಲ್ಲ ಪ್ರಕಾಶಮಾಡುವನಾಗಿ ಗುರುಪರ ಬ್ರಹ್ಮ ॥ ಅ-ಪ ॥ ಭವಬೀಜಸುಡುವ । ಇಷ್ಟಾರ್ಥವ । ಜವದಿ ಪಾಲಿಸುವ । ಶಿವ ಪಂಚಾಕ್ಷರಿಮಂತ್ರ ಗೋಪ್ಯದಿಂದರುಹುತೆ । ನವವಿಧಭಕ್ತಿಯರಸದಿ ಮುಳುಗೆಂಬುವ ॥ ಗುರು ॥೧॥ ನರಲೋಕಸುಖವು । ಭೋಗವು ರೋಗ । ದುರಿತಭಯವು । ವರ ಇಂದ್ರ ಪದವಿಯು ಪರಶತೃಗಳಭಯ । ಉರುವೈರಾಗ್ಯೊಂದೆ ನಿರ್ಭಯವೆಂದು ಬೋಧಿಪ ॥ ಗುರು ॥೨॥ ಆಲೆಯನಿಲಿಸಿ । ಅಜ್ಞಾನದ । ಮೂಲವ ಕೆಡಿಸಿ । ನೀಲತೋಯದಮಧ್ಯೆ ಆಪೋಜ್ಯೋತಿಯನು । ಲೀಲೆಯಿಂತಾರಕತ್ರಯದಿ ಸೂಚಿಸುವಂಥ ॥ ಗುರು ॥ ೩ ॥ ಧರೆಮೊದಲಾದ । ಭೂತಳಿಂದ । ವಿರಚಿತವಾದ । ನೆರೆ ಪಂಚವಿಂಶತಿ ತತ್ವಸಂಕುಳ ವೆಲ್ಲ । ವರಸಾಂಖ್ಯಯೋಗದಿ ವಿವರಿಸಿಹೇಳುವ ॥ ಗುರು ॥ ೪ ॥ ಮರವೆಯತೆಗೆಸಿ । ಬ್ರಹ್ಮಜ್ಞಾನ । ದುರುವಿನೊಳಿರಿಸಿ । ಗುರುಮಹಲಿಂಗರಂಗನೆ ನೀನೆಂದರುವಿತ್ತು । ಉರುತರದಮನಸ್ಕಮುದ್ರೆ ಸೂಚಿಸುವಂಥ ॥ ಗುರುಪರಬ್ರಹ ॥ ೫ ॥

ಇಷ್ಟದೇವತಾಸ್ತೋತ್ರವು

ರಾಗ—ಶಂಕರಾಭರಣ—ಅಟತಾಳ

೮. ಶ್ರೀಗುರುದಕ್ಷಿಣಾಮೂರ್ತಿ । ಭವ । ರೋಗಕೌಷಧನೆಂಬಕೀರ್ತಿ ॥ ಪ ॥ ನೀಗುಣತ್ರಯದೂರಭಕ್ತರಿ । ಗಾಗಿ । ಯೋಗೀಶ್ವರನಪರಿಯಲಿ । ಯೋಗ । ದೀಕ್ಷಾಬದ್ಧನೆನಿಸಿದೆ । ಯೋಗಮುದ್ರಾನ್ವಿತನೆ ಪಾಲಿಸು ॥ ಶ್ರೀಗುರುದಕ್ಷಿಣಾಮೂರ್ತಿ ॥ ಅ-ಪ ॥ ಮಂದಸ್ಮಿತದ ಏಕಮುಖವು । ಕೋಟಿ । ಚಂದ್ರಕಳೆಯುಪೋಲ್ವರೂಪವು ಕುಂದಣದವೋಗ್ಗೊಳಿವಜಡೆಯು । ಚಂದಿರನ ಬಿಗಿದಿರುವ ಮುಡಿಯು । ನಿಂದು ಕರಗಳಮುಗಿದ ಸನಕಸ । ನಂದನಾದಿಯೆ ಬೃಂದವಂದಿತ ॥ ಶ್ರೀ ॥ ೧ ॥ ವರಸ್ಪ

ರುದ್ರಾಕ್ಷಿಸರವು । ನಿತ್ಯ । ಧರಿಸಿದ ದಿವ್ಯತ್ರಿಪುಂಡ್ರವು ॥ ಶಿರದಿ ಗಂಗೆಯು ಕೊರಳ ಉರುಗನ । ಕರದಿ ಜಪಸರ ದಂಡ ಪುಸ್ತಕ । ಧರಿಸಿ ಚಿನ್ಮುದ್ರೆಯನು ಮೌನಿಯು । ಪರಿಚಯುತುರ್ಥಹಸ್ತದಿ ವಿರಾಜಿಪ ॥ ಶ್ರೀ ॥ ೨ ॥ ವಟ ತರು ಮೂಲದಾಶ್ರಿತನೆ ।ಮುದ್ದು ವಟುರೂಪಿನಲ್ಲಿ ಶೋಭಿಸುವನೆ ॥ ನಿಟಲನಯನನೆ ನಿತ್ಯತೃಪ್ತನೆ । ಘಟಿತ ಬ್ರಹ್ಮಾತ್ಮೈಕಂ ಬೋಧ್ಯನೆ । ಕುಟಿಲಮಾಯಾಕೃತಕೆ ದೂರನೆ । ಚಟುಲ ಗುರುಮಹಲಿಂಗ ರಂಗನೆ ॥ ಶ್ರೀಗುರು ॥ ೩ ॥

ರಾಗ—ಸುರಟಿ—ಆದಿತಾಳ

೯. ಭಂಗಾರಗಿರಿವಾಸಾ । ಸಲಹೆನ್ನ । ಹಿಂಗದೆ ಜಗದೀಶಾ ॥ ಪ ॥ ಅಂಗ ಜಹರಧವಳಾಂಗ ಚಿದಂಬರ । ಮಂಗಳಗೌರಿ ಹೃದಯಾಬ್ಧಿ ಚಂದಿರ ॥ ಭಂಗಾರಗಿರಿ ವಾಸ ॥ ಅ-ಪ ॥ ವರನಂದಿವಾಹನನೆ । ಗಂಗೆಯ । ಶಿರದೊಳುಧರಿಸಿದನೆ । ಶರವಣ ಭವಕರಿಮುಖನಿಗೆತಾತನೆ । ಗರಳವ ಸೇವಿಸಿ ಸುರಗಣಪೊರೆವನೆ ॥ ಭಂ ॥ ೧ ॥ ಮನುಮುನೀಂದ್ರ ಚಂದ್ರ । ಫಣಿಗತಿ । ದನುಜಾದಿಗಳಿಂದ । ವಿನಮಿತ ಮಕುಟದ ಮಣಿಗಣರುಚಿಯೊಳು । ಅನುದಿನ ಶೋಭಿಪ ಚರಣವನಂಬಿದೆ ॥ ಭಂ ॥ ೨ ॥ ಲೋಕತ್ರಯವ ಪೊರೆದು । ಮುಕ್ತಿಯು । ಬೇಕೆಂಬರ ಕರೆದು । ನೀಕರುಣಾಮೃತ ಸ್ಫುರಿತ । ಮಂದಸ್ಮಿತ । ಏಕಮುಖಾರವಿಂದದಿ ಜ್ಞಾನ ಪೊರೆದೆ ॥ ಭಂ ॥ ೩ ॥ ಸಾಮ ಗಾನಪ್ರೇಮ । ಸಾಸಿರ । ನಾಮಪೂರ್ಣಕಾಮ । ಕಾಮಹರನೆನತಹೃದಯಾಬ್ಧಿ ಸೋಮನೆ । ವಾಮದೇವನೆ ತ್ರೈಲೋಕ್ಯಾಭಿರಾಮನೆ ॥ ಭಂ ॥ ೪ ॥ ಕಾಮಿತಫಲ ವೀವ ಭಕ್ತರ । ನೇಮದಿ ಪಾಲಿಸುವ । ಸ್ವಾಮಿದಕ್ಷಿಣವಕ್ತ್ರ ಚಿನ್ಮುದ್ರಧರನೆ । ಪ್ರೇಮದಿ ಸಲಹೈಯ್ಯ ಗುರುರಂಗರೂಪನೆ ॥ ಭಂಗಾರಗಿರಿವಾಸ । ಸಲಹೆನ್ನ ಹಿಂಗದೆ ಜಗದೀಶ ॥ ೫ ॥

ಲಿಂಗಾಷ್ಟಕವು.

ರಾಗ—ಕೇತಾರಗೌಳ—ದ್ವಿಪದೆ

೧೦. ಅಭಿವಂದಿಸುವೆನಷ್ಟತನುವಾಗಿ ತ್ರೈಜಗಕೆ । ಪ್ರಭುವಾಗಿರಾಜಿಪ ಪರ ಬ್ರಹ್ಮಲಿಂಗಕೆ ॥ ಪ ॥ ಧರೆಯುಗಿರಿತೃಣಅಗಿಲು ಚಂದನದವೃಕ್ಷ । ಪುರುಷರತ್ನವು ರಜಿತಸ್ವರ್ಣಪಾಷಾ । ವರತ್ವಕ್ಕು ನಖ ರೋಮ ಮಾಂಸಾಸ್ಥಿಗಳುಯೆನಿಸಿ । ಪರಿ ಪರಿಯ ಪೆಸರ್ವೊಡೆದಪೃಥ್ವಿಲಿಂಗಕ್ಕೆ ॥ ಅಭಿ ॥ ೧ ॥ ವಾರಿನಿಧಿನದಿನದಗಳಮೃತ ಮೊಲೆ ಹಾಲು । ಕ್ಷೀರದಧಿಘೃತತೈಲಮಧುವಿಷವುಮದ್ಯ । ವೀರ್ಯಶೋಣಿತಮಜ್ಜೆ ಪಾದರಸ ವೆನಿಸಿ । ತೋರಿ ದ್ರವಿಸುತ್ತಿರ್ಪಅಪ್ಪುಲಿಂಗಕ್ಕೆ ॥ ಅಭಿ ॥ ೨ ॥ ಕಡಲೊಳಗೆ ಕಲ್ಲೊಳಗೆ ಉದರದೊಳಗೆಮಾನವರ । ಒಡಲೊಳಗೆ ಕಾಮಿಗಳಮನದೊಳಗೆ ಜ್ಞಾನಿಗಳ । ನುಡಿ ಯೊಳಗೆ ರೋಗಿಗಳ ಕಣ್ಣೊಳಗೆ ರಾಜಿಸುತ । ಉಡಗಿಕೊಂಡಿರ್ಪಮಲತರ ಜ್ಯೋತಿ [illegible]ಗಕ್ಕೆ ॥ ಅಭಿ ॥ ೩ ॥ ಶರಧಿಸಪ್ತಕಮೇಘಚಯ ಜೀವಕೋಟಿಗಳ । ವರನಾಸಿಕವು

ಜನನಿಯುರಗರ್ಭಪಿಂಡದಲಿ । ನಿರುತಷ್ಟದಿಕ್ಕನ್ಮೃತವಿಷ ಕೊಳಂಗಳಲಿ । ತೆರಪುಯಿಲ್ಲದೆ ಚರಿಸುತಿಹ ವಾಯುಲಿಂಗಕ್ಕೆ ॥ ಅಭಿ ॥ ೪ ॥ ಕಲಶಘಟವುಠಮೇಘ ಕುಟಿಬಿಡಾರ ದೊಳು । ಸಲೆ ಸ್ವರ್ಗಮರ್ತ್ಯಪಾತಾಳಲೋಕದೊಳು।ನೆಲೆಯಾಗಿ ಗ್ರಹಗಳಿಗೆ ಬೀಡಾಗಿ ಕಿಕ್ಕಿರಿದು । ಚರಿಸದಾವಾಗ ತುಂಬಿದಾಕಾಶಾಲಿಂಗಕ್ಕೆ ॥ ಅಭಿ ॥ ೫ ॥ ಬಲನೇತ್ರ ಬಲಶ್ವಾಸದ್ವಾದಶಾದಿತ್ಯನೆನಿಸಿ । ಸಲೆಕರ್ಮಸಾಕ್ಷಿ ಜೀವಿಗಳಾಯುವಳಿಯುವ । ಕೊಳಗತ್ರೈಮೂರ್ತ್ಯಾತ್ಮನೆನಿಸಿ ಜಗವ । ಬೆಳಗುವ ಹಿರಣ್ಮಯನೆನಿಸುವಾದಿತ್ಯ ಲಿಂಗಕ್ಕೆ ॥ ಅಭಿ ॥ ೬ ॥ ಎಡನೇತ್ರ ಎಡಶ್ವಾಸಗಗನಮಣಿಯೆನಿಸಿ । ಬಿಡದೆವೃದ್ಧಿಕ್ಷ ಯದಿಸಸ್ಯಾಧಿಪತಿಯೆನಿಸಿ । ಉಡುಪತಿಕಳಾನಿಧಿಯು ಅಮೃತಕರನೆನಿಸಿ । ಪೊಡವಿ ಯೊಳು ರಾಜಿಸುತ್ತಿಹಸೋಮಲಿಂಗಕ್ಕೆ ॥ ಅಭಿ ॥ ೭ ॥ ನೆರೆ ಸುಗುಣ ನಿರ್ಗುಣನು ತತ್ಸಾಕ್ಷಿಯೆನಿಸಿ । ಗುರುಮಹಾಲಿಂಗನೆಂದೆನಿಸಿ ಭಕ್ತರಂ । ಪೊರೆವದಕ್ಷಿಣಾಮೂರ್ತ್ಯೆ ನಿಸಿ ಸೂಕ್ಷ್ಮದಿಂ । ದಿರುವಷ್ಟದಳ ಕಮಲಸ್ಥಿತಾತ್ಮಲಿಂಗಕ್ಕೆ ॥ ಅಭಿ ॥೮॥

ಗ್ರಂಥಾರಂಭವು.

ಪ್ರಥಮ ಪ್ರಕರಣ ಭಕ್ತಿಯೋಗವು

ಮಾನಸರಾಜನ ಬಿನ್ನಪವು.

ಶ್ಲೋ ॥ ವಂದೇಗುರು ಗದದ್ವಂದ್ವಮವಾಂಗ್ಮಾನಸ ಗೋಚರಂ । ರಕ್ತಶುಕ್ಲ ಪ್ರಭಾಮಿಶ್ರಮತರ್ಕ್ಯಂತ್ರೈಪುರಂಮಹಃ ॥

೧೧. ಕಂದ ॥ ಜನನಮರಣಾದಿದೂರನೆ । ಮನಪ್ರಾಣೇಂದ್ರಿಯಕೆ ಸಾಕ್ಷಿ ಯೆನಿಸಿರುವಾತನೆ ॥ ಅನುಪಮತತ್ವಪ್ರಬೋಧ್ಯನೆ । ಪ್ರಣುತ ಜನಾಶ್ರಿತನೆಯನ್ನಂ ಪಾಲಿಸು ಮುದದಿಂ ॥

ಸೀಸಪದ್ಯವು ॥ ಶ್ರೀದೇಶಿಕೇಂದ್ರ ಶ್ರೀಕಲ್ಯಾಣಗುಣಸಾಂದ್ರ ಪರತತ್ತ ಸಾರ ಕ್ಷೀರಾಬ್ಧಿಚಂದ್ರ । ಓ ದಯಾನಿಧೆ ಕೇಳು ಸಂಸಾರಶರಧಿಯೊಳ್ ಅಜ್ಞಾನವೆಂಬೊಂದು ಮಕರಿ ಪಿಡಿದು ॥ ಬಾಧಿಸುತ್ತಿಹುದೈ ಶತಕೋಟಿಕಲ್ಪದಿಂ ತ್ವತ್ಕೃಪಾದಿಷ್ಟಿಯಿಂ ನೋಡಿ ಬ್ರಹ । ಬೋಧೆಯೆಂಬುವ ಚಕ್ರದಿಂದ ಛೇದಿಸಿ ಯನ್ನ ಘೋರಭವದುಃಖವಂ ಶಾಂತಿಗೈದು ॥

೧೨. ಗೀತೆ ॥ ಆದರದಿ ಆನಂದಶರಧಿಯೊಳ್।ಮುಳುಗಿಸಲ್ ಬೇಹುದೆಂಬುದರಿಲ್ಲ ದಿಂನೊಂದನರಿಯೇ । ವೇದಮೂರುತಿ ಪಾಹಿಮಾಂ ಯನುತ ಶ್ರೀಗುರು । ಪಾದಪಲ್ಲವ ಕೆರಗಿದಂ ಮಾನಸೇಂದ್ರಂ ॥

೧೩. ಕಂದ ॥ ಮೋಕ್ಷದರಾಜ್ಯಾಧೀಶ್ವರಂ । ಮೋಕ್ಷದಸುಖವರಿದ ಗುರುವೆ ಯನ್ನಯ ತಾಪವ ॥ ಈಕ್ಷಿಸಿ ಕರುಣಾಕಟಾಕ್ಷ । ಮೊಕ್ಷವಪಾಲಿಸುವುದೆಂದುಪುನರಪ್ಪಿ

ಮುದದಿಂದ ‖ ೧೪. ಕಂದ ‖ ವರಶಿಷ್ಯನ ಬಿನ್ನಪವಂ । ಗುರುವರಚಿತ್ತದಲಿ ಲಾಲಿಸಿ ಮೋಕ್ಷದಪರಿಯಂ ‖ ಕರುಣಿಸಿದರ್ಥವವಿವರದಿ । ವರಿಯುವೆನೀ ಗ್ರಂಥದಲ್ಲಿ ಲಾಲಿ ಪುದೆಲ್ಲರ್ ‖ ೧೫. ಕಂದ ‖ ಹಿರಿಯರಿಗಭಿವಂದಿಸಿನಾ । ನುರುತರ ಕೈವಲ್ಯನವನೀ ತೆಂಬುವ ಗ್ರಂಥವ ‖ ಗುರುವಿನ ಕೃಪೆಯಿಂದುಸುರ್ವೆಂ । ಕರತಲಕನ್ನಡಿಯಂತಿಹ ಕನ್ನಡನುಡಿಯಂ ‖ ೧೬. ಕಂದ ‖ ಕೆನೆವಾಲು ದ್ರಾಕ್ಷಿ ಶರ್ಕರೆ । ತನಿಮಾವಿನಪಣ್ಣು ಮೋದವನೀಯುವತೆರದಿಂ ‖ ಮನಕಾನಂದವನೀವುದು । ಕ್ಷಣಮಾತ್ರಂ ಮೋಕ್ಷ ಕಾಮಿಗೆ ಕೇಳಲು ಮುದದಿಂ ‖ ೧೭. ಕಂದ‖ಭಕ್ತಿಯು ವಿರತಿಯು ತಾರಕ । ಉತ್ತಮ ಸಾಂಖ್ಯಾಮನಸ್ಕವೆಂಬೈದಂಶದಿ ‖ ವರ್ತಿಸುತಿಹುದೀಕಾವ್ಯಂ । ವಿಸ್ತರದಿಂ ಶಿವನೈದು ಮುಖದಿಂದೊಪ್ಪುವತೆರದಿಂ ‖ ೧೮. ಕಂದ ‖ ಗುರುಪದ ಭಕ್ತಿಯು ವಿಷಯದಿ । ವಿರತಿಯುತನ ಚಿತ್ತಶುದ್ಧಿಗೋಸುಗ ತಾರಕ ‖ ವರ ಸಂಖ್ಯಾತ್ಮ ವಿಚಾರ । ಕ್ಕುರುತರ ದಮನಸ್ಕಜ್ಞಾನಕ್ಕೆನಿಸಿರುತಿರ್ಕುಂ ‖ ೧೯. ಕಂದ ‖ ಅದರಿಂ ಪಂಚಪ್ರಕರಣ ವಿಧಿಸಿ ಹುದಭ್ಯಾಸಗೈವ ಪುರುಷಗೆ ತಕ್ಷಣ ‖ ಹೃದಯದಿ ಕಾಣುವನಾತ್ಮಂ । ಮುದದಿಂ ಕರ ತಲದ ರತ್ನದಪರಿ ಪ್ರತ್ಯಕ್ಷಂ ‖ ೨೦. ಕಂದ ‖ ಗುರುಕರುಣಾಂಮೃತಸಾರಂ।ಉರುತರ ಕೈವಲ್ಯನವನೀತೆಂಬುವ ಗ್ರಂಥ ‖ ಗುರುಮುಖದಿಂದರಿತಾತಂ । ಗುರುವೇತಾನಾಗಿ ಜಗದೊಳ್ಪೂಜಿತನಪ್ಪಂ ‖

ಗ್ರಂಥವಿಚಾರ

ರಾಗ—ಕೇತಾರಗೌಳ—ದ್ವಿಪದೆ

೨೧. ಕೈವಲ್ಯನವನೀತವೆಂಬತುಲ ಪೆಸರಿದಕೆ । ಓವಿಬಂದರ್ಥವುಂ ಲಾಲಿ ಪುದಭಿಜ್ಞರ್ ‖ ಪ ‖ ಉರುತರಾಮ್ನಾಯವೆಂಬ ಮೊಲೆನಾಲ್ಕುಳ್ಳ । ಪರಬೊಮ್ಮ ವೆಂಬೊಂದು ಕಾಮಧೇನಿರಲು । ಸುರುಸಿತಷ್ಟೋತ್ತರದಶತಸಾಸಿರುಪನಿಷತ್ । ವರ ಕ್ಷೀರಶರಧಿ ಪರಿಜಗ ಭರಿತಮಾಗಿತ್ತು ‖ ಕೈವಲ್ಯ ‖ ೧ ‖ ಅದರೊಳು ಮಹಾವಾಕ್ಯೆಂಬ ಸವಿಪಾಲ್ತೆಗೆದು । ಬುಧಜನರು ಅಧ್ಯಾತ್ಮಶಾಸ್ತ್ರವೆಂದೆಂಬ । ಸದಮಲದ ಭಾಂಡ ದೋಳ್ತುಂಬಿ ಮಥನಾಗ್ನಿಯಿಂ । ಹದವಾಗಿ ಕಾಸಿರಲವಕ್ಕುಡಿತೆ ಗ್ರಹಿಸಿದೆನು ‖ ಕೈವಲ್ಯ ‖ ೨ ‖ ಮೂಲ ಶ್ರೀಗುರು ಬೋಧೆಯೆಂಬ ಹೆಪ್ಪನು ಕೊಡಲು । ಪೇಳಲೇನ್ ದಿವ್ಯ ಕೆನೆಮೊಸರಾಯಿತದಕೆ । ಕೇಲಿಸುತ ಸುಜ್ಞಾನವೆಂಬ ಮಂತನು ಭಕ್ತಿ । ತಾಳಿ ಸೋಹಂ ಹಗ್ಗ ಸುತ್ತಿ ಕಡೆಯಲ್ಕೆ ‖ ಕೈವಲ್ಯ ‖ ಕರಗಿ ಅಜ್ಞಾನ ಅವರಣೆಂಬ ಗಡ್ಡೆಗಳ್ನಿರುಪಮದ ಅಪರೋಕ್ಷಜ್ಞಾನವೆಂತೆಂಬ । ಉರುತರನ ನವನೀತಬಂತೆನ್ನ ಕರತಲಕ್ಕೆ ದುರಿತಕರ್ಮವುಯೆಂಬ ತಕ್ರಕೆಳಗಿಳಿದು ‖ ಕೈವಲ್ಯ ‖ ೪ ‖ ಘನದ ಆ ನವನೀತ ತೆಗದು ಮೂಜಗದೊಳಗೆ । ತನಗನ್ಯವಹ ವಸ್ತುಯಿಲ್ಲವೆಂಬುವ ನಿಜದ। ಅನುಭೂತಿಯಿಂ ಕಾಸಿದಮಲ ಘೃತವನ್ನು । ಅನಘ ಗುರುಮಹಲಿಂಗರಂಗನಿಗೆ ಒಪ್ಪಿಸಿದೆ ‖ ಕೈವಲ್ಯನವನೀತವೆಂಬತುಲ ಪೆಸರಿದಕೆ ‖ ೫ ‖

ನಿಜಬೋಧಾಕ್ರಮ

೨೨. ಶಾ ॥ ವೃ ॥ ಶ್ರೀಮಚ್ಛಂಕರಚಂದ್ರಮೌಳಿಗಿರಿಜಾ । ವಾಮಾರ್ಧ ದೇಹಾಂಚಿತಂ । ಸೋಮಾರ್ಕಾನಲನೇತ್ರಪಂಚವದನಂ । ಮಾಯಾತಮಚ್ಛೇದನಂ ॥ ವ್ಯೋಮಾತೀತನಿರಂಜನಂಯತಿಸುಹೃ । ನ್ನೀರೇಜಮಾರ್ತಾಂಡಮೇಶ್ । ಶ್ರೀಮದ್ಭಕ್ತ ಚಕೋರಚಂದ್ರಸಲಹೈ । ಶ್ರೀದಕ್ಷಿಣಾಮೂರ್ತಿಯೇ ॥

23. ಕಂದ ॥ ಆನೆಯನೇರಿದ ಪುರುಷರಿಗೆ । ಶ್ವಾನನ ಭಯವಿಲ್ಲದಂತೆ ಪರಶಿವನಡಿಯಂ ॥ ಧ್ಯಾನಿಸುವಾತಗೆ ಭವಭಯ । ಕ್ಷೋಣಿಯಾಳೆಂದೆಂದಿತಲ್ಲವು ಸತ್ಯಂ ಸತ್ಯಂ ॥

ರಾಗ—ಕಲ್ಯಾಣಿ—ಅಟತಾಳ

೨೪. ಭಜನೆಮಾಡುವ ಬನ್ನಿರೋ । ಸದಾಶಿವನ ಭಜನೆಮಾಡುವ ಬನ್ನಿರೋ ॥ಪ॥ ಭಜನೆ ಮಾಡುವ ನಿತ್ಯ । ಸುಜನರೆಲ್ಲರು ಕೂಡಿ । ಕುಜನಸಂಗವದೂರಮಾಡಿ । ಸದ್ಭಕ್ತಿಯಿಂ ॥ ಭಜನೆ ॥ಅ-ಪ॥ ಶತಕೋಟಿಪಾಪವನು । ಮಾಡಿದ ಮಹ । ಪತಿತರು ನಾವು ನೀನು । ಪತಿತಪಾವನನೆಂಬ ಬಿರುದುಳ್ಳ ದೇವನು । ಕ್ಷಿತಿಯೊಳುತ್ತಮಗತಿ ತೋರೆಂದು ಶಿವನ । ಭಜನೆ ॥೧॥ ಘುಡುಘುಡಿಸುತ ಬರುವ ಯಮನಾಳ್ಗಳಂ ಕಡಿದು ಮಾಡುತ ಕೋಪವ । ಝಡಿದು ಶೂಲದಿ ಭಕ್ತರನು ಕೈಯ್ಯ ಪಿಡಿದು । ಕಡುಕರುಣದಿ ಪೊರೆಯುವ ಮೃತ್ಯುಂಜಯನ ॥ ಭಜನೆ ಮಾಡುವ ಬನ್ನಿರೋ ॥೨॥ ಪಂಚವಿಂಶತಿ ತತ್ವದಿ । ತಾನಿರ್ದು ಪ್ರ । ಪಂಚದೊಳಾನಂದದಿ । ಪಂಚವಿಂಶತಿ ಲೀಲೆ ತೋರಿ ತನಭಕ್ತರ । ಸಂಚಿತ ಕರ್ಮವನುರುಹಿದ ಶಿವನ ॥ ಭಜನೆ ॥೩॥ ಕಷ್ಟಕರ್ಮಗಳ ನೋಡಿ ನಿಮಿಷಾರ್ಧದಿ । ಸುಟ್ಟು ನಿರ್ಮಲವ ಮಾಡಿ । ಇಷ್ಟಾರ್ಥಗಳನಿತ್ತು ಕರುಣದಿ ಪಾಲಿಪ । ಅಷ್ಟದಳದ ಪದ್ಮದಲ್ಲಿರುವ ಶಿವನ ॥ ಭಜನೆ ॥೪॥ ಕರುಣಾರಸವನೆ ಬೀರಿ । ಯೋಗವು ತತ್ವ । ನೆರೆಶಾಂತಿ ವಿರತಿ ತೋರಿ । ಧರೆಯೊಳಧಿಕ । ಜ್ಞಾನ ಬೋಧಿಸಿ ಪೊರೆಯುವ । ಗುರುಮಹಾಲಿಂಗನೆ ನೀನೆಂದು ಶಿವನ ॥ ಭಜನೆ ॥ ೫ ॥

ರಾಗ—ಕಲ್ಯಾಣಿ—ಅಟತಾಳ

೨೫. ರತ್ನಗರ್ಭದ ಗಣೇಶ । ಪಾಲಿಸೊ ನಿನ್ನ । ಭೃತ್ಯನಾದೆನು ಸರ್ವೇಶ ॥ಪ॥ ನಿತ್ಯ ನಿರ್ಮಲ ನಿರಂಜನ ಸ್ವಪ್ರಕಾಶ ಸತ್ಯಜ್ಞಾನಾನಂದ ಬ್ರಹ್ಮ ವಿಲಾಸ ॥ಅ-ಪ॥ ನೀರಜವೈರಿಜಟಾ । ಜೂಟಾ ಶ್ರೀರ್ಮನಾರಾಯಣಜ । ಪೂಜಿತ ನಾರದಮುನಿ ದಿವ್ಯ ಗಾನಸಂಪ್ರೀತ । ವಾರಣಾನನ ಪಾರ್ವತೀದೇವಿ ಪ್ರಿಯಸುತ ॥ ರತ್ನ ॥೧॥ ವರಗುಣ ಫಣಿ ಬಂಧದ । ಪೇರುರ ವೈರಾಗ್ಯರುವಜ್ರಕಟ ಸೂತ್ರನೆ । ಪರತತ್ವಬೋಧಲಾಂಛಿತ ಮುದ್ರಹಸ್ತನೆ । ಉರುಜೀವಮೂಷಕರಾಜವಾಹನೆ ॥ ರತ್ನ ॥೨॥ ನವ ಭಕ್ತಿ ಕಡುಬು ರಾಶಿ । ಚಿತ್ರಾನ್ನಮೇಲ್ । ಸುವಿಚಾರಘೃತಸುರಿವೆ । ನವದಳರನ್ನಭೋಜನದಲ್ಲಿ ಕಲಿಸುವೆ । ಸವಿಮಾಡಿಭಾವಕರಾಬ್ಜದಿಂದುಣಿಸುವೆ ॥ ರತ್ನ ॥೩॥ ಆಶೆಯಳಿದಕರ್ಪೂರ।

ಆತಿ

ವೀಳ್ಯವು ಪಂಚ । ಕ್ಲೇಶಖಂಡನ ಕಜ್ಜಾಯ । ವಾಸನತ್ರಯಹರಗಂಧಲೇಪಿಸುವೆ । ವಿಮಾಸಲಿಂದೀಪರಿಯರ್ಪಿಸಿನಮಿಸುವೆ ॥ ರತ್ನ ॥ ೪ ॥ ಪರಬ್ರಹ್ಮಾ ವಿದ್ಯಾಸಿಧಿ । ನಿರ್ವಿಘ್ನದಿ । ಕರುಣಿಸೋ ಸರ್ವಜ್ಞನೇ । ಪರತತ್ವವಿದ್ಯಾರ್ಥಿಯಾಗಿಹ ದೇವನೆ । ಗುರುವುಹಲಿಂಗರಂಗಭಿದಾನಿನೇ ॥ ರತ್ನ ॥ ೫ ॥

ಅಂಬಾಸ್ತುತಿ

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೨೬. ರಾಜರಾಜೇಶ್ವರಿಯೇ ಪಾಲಿಸು ರಾಜಶೇಖರ ಪಾಲಿಸು ರಾಜಮುಖಿ ಮೂಲೋಕಪೂಜಿತೆ । ರಾಜತೇಜವಿರಾಜಿತೆ ॥ ರಾಜ ॥ ಪ ॥ ಗಿರಿಜೆ ಲಕ್ಷ್ಮಿಯು ವಾಣಿ ಯೆನಿಸುತ । ಚರಣ ಭಕ್ತರ ಪೊರೆಯುತ । ಪರಮ ಭೋಗವು ಮೋಕ್ಷ ಪದವಂ । ಸುರತರುವಿನಂತೀಯುವ ॥ ರಾಜ ॥ ೧ ॥ ನಾದಬಿಂದುಕಳಾಸ್ವರೂಪಿಣಿ । ಮೋದ ಸಚ್ಚಿ ದ್ರೂಪಿಣಿ । ವೇದಗಾಯತ್ರೀಸ್ವರೂಪಿಣಿ । ಆದಿಬ್ರಹ್ಮಪರಾಯಣಿ ॥ ರಾಜ ॥ ಬುಗುರಿ ಯಂತಾಡಿಸುವೆ ನೀನು । ನಗುತ ಮುಮ್ಮೂರ್ತಿಗಳನು । ನಿಗಮವಂದಿತೆ ರಂಗಗುರು ವಿನ । ಅಗಲದಿರುತಿಹೆ ಅನುದಿನ ॥ ರಾಜ ॥ ೩ ॥

ರಾಗ—ನಾದನಾಮಕ್ರಿಯೆ—ರೂಪಕತಾಳ

೨೭. ಪಾಲಿಸೆನ್ನ ಕರುಣದಿಂದ ತ್ರಿಪುರಸುಂದರೀ । ನಿನ್ನ । ಬಾಲನೆಂದುಯನ್ನ ಕೈಯ್ಯ ಬಿಡದೆ ಶಂಕರೀ ॥ ಪಾಲಿಸು ॥ ಪ ॥ ಹರನ ಶಕ್ತಿ ಹರಿಯಶಕ್ತಿ ಅಜನಶಕ್ತಿಯೆ । ವ್ಯೋಮ । ಧರಣಿಶಕ್ತಿ ಸಲಿಲಶಕ್ತಿ ಜ್ವಲನ ಶಕ್ತಿಯೆ ॥ ಕರಣ ಶಕ್ತಿ ಪ್ರಾಣಶಕ್ತಿ ಬೀಜ ಶಕ್ತಿಯೂ । ಎನಿಸಿ ಧರೆಯ ಜೀವಿಗಳನುಪೊರೆವ ಲೋಕಜನನಿಯೆ । ಪಾಲಿಸು ॥ ೧ ॥ ಆದಿಶಕ್ತಿ ಭೋಗಶಕ್ತಿ ಭಾಗ್ಯಶಕ್ತಿಯೆ । ತರ್ಕ । ವಾದಶಕ್ತಿ ಕ್ರೋಧಶಕ್ತಿ ಶಾಂತಿ ಶಕ್ತಿಯೆ । ವೇದಶಕ್ತಿ ಮಂತ್ರಶಕ್ತಿ ತಂತ್ರಶಕ್ತಿಯೂ । ಎನಿಸಿ । ಮೋದದಿಂದಲೆಮ್ಮ ಪೊರೆವ ಲೋಕಜನನಿಯೆ । ಪಾಲಿಸು ॥ ೨ ॥ ಧ್ಯಾನಶಕ್ತಿ ಧಾತೃಶಕ್ತಿ ಧೈರ್ಯ ಶಕ್ತಿಯೆ । ಶ್ರವಣ । ಘ್ರಾಣಶಕ್ತಿ ಸ್ಪರ್ಶಶಕ್ತಿ ಈಕ್ಷಶಕ್ತಿಯೆ ॥ ಜ್ಞಾನಶಕ್ತಿ ಕ್ರಿಯಾ ಶಕ್ತಿ ಇಚ್ಛಾಶಕ್ತಿಯೂ । ಎನಿಸಿ । ಸಾನುರಾಗದಿಂದ ಪೊರೆವ ಸರ್ವಲೋಕ ಜನನಿಯೆ ॥ ಪಾಲಿಸು ॥ ಮನನಶಕ್ತಿ ಶ್ರವಣಶಕ್ತಿ ಬೋಧಶಕ್ತಿಯೆ ದೇವಿ । ಗಣದಶಕ್ತಿ ಮಹಿಮೆ ಶಕ್ತಿ ಯೋಗಶಕ್ತಿಯೆ ॥ ಪ್ರಣವಶಕ್ತಿ ಬಿಂದುಶಕ್ತಿ ನಾದಶಕ್ತಿಯೂ । ಎನಿಸಿ । ಜನ ಗಳೀಪ್ಸಿತಾರ್ಥವೀವ ಲೋಕಜನನಿಯೆ ॥ ಪಾಲಿಸು ॥ ೪ ॥ ಸರ್ವಕರ್ತ್ರೀ ಸರ್ವ ಭೋಕ್ತ್ರಿ ಸರ್ವನಿಯಾಮಕೂ । ಎನಿಸಿ । ಸರ್ವಕಾಲದಲ್ಲಿ ಚಂದ್ರಚಂದ್ರಿಕೆ ಚಂದದಿಂ । ಸರ್ವ ಶ್ರೀಗುರುರಂಗಲಿಂಗನನ್ನು ಅಗಲದೆ । ಇರುತ । ಸರ್ವಭಕ್ತರನ್ನು ಪೊರೆವ ಲೋಕ ಜನನಿಯೆ ॥ ಪಾಲಿಸೆನ್ನ ಕರುಣದಿಂದ ॥ ೫ ॥

ರಾಗ—ಸುವ್ವಾಲಿವರ್ನ—ರೂಪಕತಾಳ.

೨೮. ಸ್ಮರಣೆಮಾಡೆಲೊ । ನಾವು । ಸ್ಮರಣೆಮಾಡೆಲೊ ॥ ಪ ॥ ಸ್ಮರಣೆ ಮಾಡುತ ಭವದಬಲೆಯ।ಹರಿಯೊ ಶಿವನೆಶಿವನೆ ಯೆನುತಾ ॥ ಸ್ಮ ॥ ಅ–ಪ– ॥ ಮನದಿ ರಾಗದ್ವೇಷಗೈಯ್ಯ । ದನೃತವಚನನುದಿಯದಿನಿತು । ತನುವಿನಿಂ ಅಹಿಂಸನಾಗಿ । ದಿನವು ಕರುಣಶುದ್ಧಿಯಿಂದ ॥ ಸ್ಮ ॥ ೧ ॥ ಇಳೆಯುಭೋಗಕ್ಕೆಳೆವಮನವ । ಶಳೆದುಆತ್ಮ ನಲ್ಲಿ ನಿಲಿಸೆ ಕಲಿಯಕಲ್ಮಷವಳಿವುದಿದನು । ತಿಳಿದು ಮನದ ಭಕ್ತಿಯಿಂದ ॥ ಸ್ಮ ॥ ಭಕ್ತಪಾಲಕನೆಂಬ ಬಿರುದು । ಪೊತ್ತು ಇಹನ ನಂಬಿ ನಿತ್ಯ।ಮುಕ್ತಿಭಾಗ್ಯಸೂರೆಗೊಂಬ। ಯುಕ್ತಿಯಿದನು ಅರಿತು ಮನದಿ ॥ ಸ್ಮ ॥ ೩ ॥ ಭೃಂಗಸಂಗದಿಂದ ಕೀಟ । ಅಂಗ ಭಾವವಳಿದು ಅಂತರಂಗದಲ್ಲಿ ನೆನೆದು ಸಾಕ್ಷಾ । ದ್ಭೃಂಗವಾದಪರಿಯ ಮನದಿ ॥ ಸ್ಮ ॥ ಕಂಗಳೂರಿನಲ್ಲಿ ಪೊರೆವ । ಮಂಗಳಪ್ರಭಾವನಾದ । ತುಂಗಶ್ರೀಗುರುರಂಗಲಿಂಗಗೆ । ಅಂಗವೂರನಿತ್ತುನಿತ್ಯ ॥ ಸ್ಮರಣೆ ॥ ॥ ೫ ॥

ಅಪರಾಧಸ್ತೋತ್ರವು.

ರಾಗ—ಆನಂದಭೈರವಿ.

೨೯. ಪೊರೆಯುನ್ನ ಶಂಕರನೇ । ಲೋಕಶಂಕರನೇ । ಚರಣಕಿಂಕರರಕಿಂಕರ ನಾನು ಶಿವನೇ ॥ ಪ ॥ ಗುರುಬ್ರಹ್ಮಗೋಶಿಶುವುಭ್ರೂಣಹತ್ಯಗಳು । ವರಸ್ವರ್ಣ ಚೋರತ್ವ ವಿವಿಧ ಪಾಪಗಳು । ಪರಧನವು ಪರಸತಿಯುಂಕೆಡಿಸಿ ಮೋಸಗಳು । ಅರಿಸಿ ಮಾಡಿದ ಪಾಪ ಕ್ಷಮಿಸಿ ಚಿತ್ತದೊಳು ॥ ಪೊರೆ ॥ ೧ ॥ ದುರಿತವಲ್ಲದೆ ಪುಣ್ಯವಣು ಮಾತ್ರವಿಲ್ಲ । ವರಸೊಡರಿನಿಂದುಡುಕಿನೋಡೆಯಿದೆಯಲ್ಲಾ । ಸ್ಮರಣೆಮಾತ್ರದಿಕೈಯ್ಯ ಬಿಡುವಶಿವನಲ್ಲ । ಪೊರೆವನೆಂಬುವ ಶೃತಿಯ ನಂಬಿಯಿಹೆನಲ್ಲ ॥ ಪೊರೆ ॥ ೨ ॥ ನಿನ್ನ ಸತಿಮಕ್ಕಳನು ನಿನ್ನ ಭಕ್ತರನು । ನಿನ್ನ ಮಂತ್ರಾಗಮವು ಗುರುಪ್ರಸಾದವನು । ನಿನ್ನರಿ ಜ್ಞಾನಿಗಳಾದೂಷಣೆಯ ನಾನು । ಮುನ್ನೆಷ್ಟುಮಾಡಿಪೆನೋ ಅದ ಕ್ಷಮಿಸಿ ನೀನು ॥ ಪೊರೆ ॥ ೩ ॥ ಎನ್ನಂಥ ಪತಿತ ಮೂಲೋಕದೊಳಗಿಲ್ಲ ॥ ನಿನ್ನಂಥ ಪತಿತಪಾವನನು ಮುನ್ನಿಲ್ಲ । ವೆನ್ನುತಲಿ ನಿಮ್ಮಡಿಯಾಪಿಡಿದುಇಹೆನಲ್ಲ । ಯನ್ನ ಬಿಡಲಪಕೀರ್ತಿ ತಪ್ಪುವದೆಯಿಲ್ಲ ॥ ಪೊರೆ ॥ ೪ ॥ ಒಂದುಬಿನ್ನಪವನ್ನು ಲಾಲಿಪುದು ಮುನ್ನ । ಮುಂದ ಮತಿಯಾದೆನ್ನಾ ಅಪರಾಧ ನಿನ್ನ । ಕಂದನೆನ್ನುತ ಕ್ಷಮಿಸಿ ಪರಿಪಾಲಿಸೆನ್ನ । ತಂದೆ ಗುರುಮಹಲಿಂಗವರಸುಪ್ರಸನ್ನ ॥ ಪೊರೆ ॥ ೫ ॥

ರಾಗ—ಕಲ್ಯಾಣಿ—ಅಟತಾಳ

೩೦. ಸರ್ವಜ್ಞಮೂರ್ತಿನೀನು ! ಈಜಗದೊಳು । ಸರ್ವಪಾತಕಿಯುನಾನು ॥ ಪ ॥ ಸರ್ವಜ್ಞಮೂರ್ತಿ ನಿಮ್ಮಡಿದಾವರೆಗಳನು । ಸರ್ವಕಾಲದಿ ನಂಬಿದೆನು ಪಾಲಿಸೆನ್ನನು ಸರ್ವಜ್ಞ ॥ ಅ-ಪ ॥ ನಿನ್ನ ವಿಲಾಸವಿದು । ದೃಷ್ಟಿಸಿ ಜಗವನ್ನು । ಆಡಿಸುತಿ

ಹುದು ಉನ್ನಾಂತಲೂರ್ಣಸಾಭಿಯಪರಿಯಂತ್ಯಕ್ಕೆ । ಸಿನ್ನೊಳಿಲ್ಲವನುಂಗಿ ನೀನೊಬ್ಬ ನುಳಿಯುವೆ ॥ ಸರ್ವಜ್ಞ ॥ ೧ ॥ ಸರ್ವಶಿರನಯನಂಗಳು ಪಾದವು ಹಸ್ತ । ಕಂಠ ಕಿವಿ ತೋಳುಗಳು ಸರ್ವಭೋಗವ ಸರ್ವರೂಪು ನೀನೆನಿಸಿಸುತ್ತ । ಸರ್ವಸಾಕ್ಷಿಕನಾದ ವಿಶ್ವಕುಟುಂಬಿಯೆ ॥ ಸರ್ವಜ್ಞ ॥ ೨ ॥ ಜನನದಾರಭ್ಯದಿಂದ ಸದ್ಗುಣಕ್ರಿಯ । ಮನ ದೊಳಗೆಣಿಸನೊಂದ । ವಿನಯಜ್ಞಾನವುಯಮ್ಮಸಾಡಿನೋಳ್ ಕಾಣೆನು । ವನಚರ ಚೇಷ್ಟೆಯಜ್ಞಾನಿಜೀವನುನಾನು ॥ ಸರ್ವಜ್ಞ ॥ ೩ ॥ ಸರ್ವಪಾತಕಿ ನೀಚನು । ಕೃತ ಘ್ನನು । ಸರ್ವದುರ್ಗುಣಜಾತನು । ಸರ್ವಘಾತಕಿ ಕೌಳಿಕಾರರವೊಡೆಯನು । ಸರ್ವ ದ್ರೋಹಿಗಳೊಳಗಗ್ರಗಣ್ಯನು ನಾನು ॥ ಸರ್ವಜ್ಞ ॥ ೪ ॥ ಸರ್ವ ದುರ್ಗುಣಗಳನ್ನು। ನೋಡದೆಯನ್ನ । ಸರ್ವತ್ರ ಪೊರೆಯುವನು । ಸರ್ವಕಲ್ಯಾಣ ಗುಣಂಗಳಿಂದೊಪ್ಪುವ। ಸರ್ವಸಾಕ್ಷಿಕಗುರುಮಹಲಿಂಗದೇವನೆ ॥ ಸರ್ವಜ್ಞ ॥ ॥ ೫ ॥

ರಾಗ—ಸಾರಂಗ—ಅಟತಾಳ

೩೧. ರಕ್ಷಿಸೊಯನ್ನನು । ಅಕ್ಷಯಗುಣಪೂರ್ಣ । ಭಕ್ತಬಂಧು । ನಿನ್ನ । ಕುಕ್ಷಿಯೊಳ್ ಹಿಂಬಿಟ್ಟು ಇಕ್ಷುಚಾಪಹರ ॥ ಭಕ್ತ ॥ ಪ ॥ ಅಘದ್ವಾರತರವಿಮೂರು । ಜಗಕಾದಿಒಡೆಯನೆ । ಭಕ್ತಬಂಧು । ನಿನ್ನ ಬಗೆಗಾಣದೊರಲ್ವಾವು । ನಿಗಮಜಾಲಂ ಗಳು ॥ ಭಕ್ತಬಂಧು ॥ ೧ ॥ ಶಶಿಮುಖಿಯರ ಮೋಹವ್ಯಸನದಿ ಮುಳುಗಿದೆ । ಭಕ್ತ ಬಂಧುವೋಹ । ವಿಷಯವಿಷವನಾಡೊ । ಶಶಿಕಲಾಧರಯನ್ನ ॥ ಭಕ್ತ ॥ ೨ ॥ ಮನದಿ ನಿಶ್ಚಯವಿಲ್ಲ । ಗುಣ ವೊದಲಿಗೆಯಿಲ್ಲ । ಭಕ್ತಬಂಧು । ಸತ್ಯ । ಗುಣಮಾರ್ಗ ತೋರಿಸೊ । ಮುನಿಕುಲಸೇವ್ಯನೇ ॥ ಭಕ್ತ ॥ ೩ ॥ ನರರಸೇವೆಯಗೈದು । ನರಕ ಭಾಜನನಾದೆ । ಭಕ್ತಬಂಧು । ಗುರುಹಿರಿಯಾರಡಿದಾವರೆ । ಕರುಣಾದಿ ತೋರಿಸೋ। ಭಕ್ತಬಂಧು ॥ ೪ ॥ ಹರಿದಾಡೊ ಇಂದ್ರಿಯ । ಕರಣಗಳ್ತುಳಿದುನೀ । ಭಕ್ತಬಂಧು ನಿನ್ನ । ಚರಣಾಬ್ಜಧ್ಯಾನದೊಳಿರಿಸೆನ್ನ ಗುರುಮಹಲಿಂಗಬಂಧು ॥ ರಕ್ಷಿಸು ॥ ೫ ॥

ರಾಗ—ಕೇತಾರಗೌಳ—ದ್ವಿಪದೆ

೩೨. ಯಾಕೆನ್ನ ಮರೆತಿರುವೆ ಕರುಣದಿಂದಪೊರೆಯದೆಲೆ । ಲೋಕನಾಯಕ ಸರ್ವಭಕ್ತಜನಬಂಧು ॥ ಪ ॥ ರವಿಯೋರ್ವಧರೆಗೆ ಗಗನಪಾತಾಳಲೋಕಕ್ಕೆ । ಕವಿದ ಕಾರ್ಗತ್ತಲೆಯನುರುಹಿನಿಮಿಷದಲ್ಲಿ । ತವೆಪಾಪಿಪುಣ್ಯಾತ್ಮ ಮೊದಲಾದಜೀವರ್ಗೆ । ಲವಲವಿಕೆಯಿಂಕಾಣಬರುತಿಹನುಪ್ರತಿದಿನದೀ ॥ ಯಾಕೆ ॥ ೧ ॥ ನೀಕೋಟಿರವಿ ಯಂತೆ ಬೆಳಗುತಿರೆ ಕಂಗಳಿಂ।ನಾಕಾಣದಂತಾಯ್ತು ಕರ್ಮದಿಂದಕಟ । ನೀಕರುಣಿಸಕ್ಕ ರ್ಮಹರಿಸುತ್ತೆತವಮೂರ್ತಿ । ಸಾಕಾರದರ್ಶನವನೀಯದಲೆಪುರಹರನೇ ॥ ಯಾಕೆ ॥ ೨ ॥ ಸುರರು ಅಮೃತವ ನರರು ಅನ್ನವ ಭ್ರಮರ ಪುಷ್ಪವ।ಉರಗಪವನವ ಕುಮುದ ಕಮಲಗಳ್ ಜಲವ । ನಿರುತಲಾಶ್ರೈಸಿ ಜೀವಿಸುವಾಪರಿಯಲಿ ನಿನ್ನ । ಚರಣಗಳ

ನಾಶ್ರಯದಿಜೀವಿಸುವದರಿತು ‖ ಯಾಕೆ ‖ ೩ ‖ ವರಹಂಸಪದ್ಮಗಳ ಚಾತಕವು ಮೇಘವನು । ನೆರೆಕಮಲಭಾಸ್ಕರನ ಚಂದ್ರನಚಕೋರಂ।ಅರಿವಲತೆವೃಕ್ಷವನು ಪತಿವ್ರತೆಯು ಪುರುಷನನು । ಮರೆಯದಾಶ್ರೈಸಿ ಇರುವಂತೆ ನಂಬಿರುವದರಿತು ‖ ಯಾಕೆ ‖ ೪ ‖ ನಿರುತನಿನ್ನಾಶ್ರಯಿಸಿದೆನ್ನ ಚಿತ್ತದನಿಜವ । ನರಿಯದವನೆನಲಿಕ್ಕೆಸರ್ವಜ್ಞಮೂರ್ತಿ । ಕರಣಸಾಕ್ಷಿಕವೇದಪ್ರತಿಪಾದ್ಯನೆನಿಸಿರುವ । ಪರಮಗುರುಮಹಲಿಂಗರಂಗ ಭವಭಂಗ ಯಾಕೆನ್ನ ‖ ೫ ‖

ರಾಗ—ಶ್ಯಾಮುಕಲ್ಯಾಣಿ—ದ್ವಿ ಜಾವಂತಿ.

೩೩. ರಕ್ಷಿಸೈಕಾರುಣ್ಯಸಿಂಧುವೆ । ರಕ್ಷಿಸೈಕುಲಬಂಧುವೆ ‖ ಪ ‖ ರಕ್ಷಿಸೆನ್ನಯ ಕೈಬಿಡದೇ । ಪಕ್ಷಪಾತವಮಾಡದೆ ‖ ಅ-ಪ ‖ ಮಾನಪ್ರಾಣವುಧನವು ನಿನ್ನದು । ಹಾನಿವೃದ್ಧಿಯು ನಿನ್ನದು । ಜ್ಞಾನಮೇಣಜ್ಞಾನ ನಿನ್ನದು। ದಾನಧರ್ಮವು ನಿನ್ನದು ‖ ರಕ್ಷಿ ‖ ೧ ‖ ಭೋಗಭಾಗ್ಯವು ಗುಣವು ನಿನ್ನದು।ರಾಗರಸರುಚಿ ನಿನ್ನದು । ರೋಗ ದುಃಖವ್ಯಸನ ನಿನ್ನದು।ತ್ಯಾಗಕೃಪಣತೆ ನಿನ್ನದು ‖ ರಕ್ಷಿ ‖ ೨ ‖ ಯನ್ನ ಭವರೋಗ ವನುಹರಿಸೊ । ಉನ್ನತದಸುಖ ತೋರಿಸೊ । ಚನ್ನಶ್ರೀಗುರುಲಿಂಗನೇ । ಯನ್ನ ದೇವರದೇವನೆ ‖ ರಕ್ಷಿ

ರಾಗ—ಭೈರವಿ.

೩೪. ಶಿವನೆ ಪಾಲಿಸು ಯನ್ನನೂ । ಜಗದೊಡೆಯ । ಶಿವಪದವಿಯಿತ್ತು ಮುದದೀ । ಘನದೀ ‖ ಪ ‖ ಶಿವಬ್ರಹ್ಮವಿಷ್ಣುರುದ್ರ ಇಂದ್ರಶಶಿ । ಶಿವಮಹಿಗೆ ಭೋಬೀಜವಾಗಿ । ಶಿವಭೋಜ್ಯಭೋಕ್ತನೆನಿಸಿ । ಸರ್ವದಲಿ । ಶಿವಶಕ್ತಿಯಾಗಿಪೊರೆವೆ । ಜಗವ ‖ ಶಿವ ‖ ೧ ‖ ಶಿವನಗರಿಗೊಡೆಯ ಮೃತ್ಯುಂ।ಜಯನಿರಲು । ಶಿವಶರಣಕಾಮಧೇನು । ನೀನು । ಶಿವಭವಾಂಭೋನಿಧಿಯಕುಡಿವ । ಬಡಬಾಗ್ನಿ । ಶಿವಸಚ್ಚಿದಾನಂದ ಮೂರ್ತಿ । ಕೀರ್ತಿ ‖ ಶಿವ ‖ ೨ ‖ ಶಿವ ನಿಮ್ಮ ಮೂರ್ತಿಧ್ಯಾನ ಮನದೊಳಗೆ । ಶಿವಮಂತ್ರಪಠಣೆ ಜಿಹ್ವೆ । ಯಲ್ಲಿ । ಶಿವಪೂಜೆ ಕರದಿಗೈವ ಭಕ್ತಿಯನು । ಶಿವಕರುಣಿಸೈ ಯನಗೆ ಇಂದುಬಂದು ‖ ಶಿವ ‖ ೩ ‖ ಶಿವಭಕ್ತಬಂಧುವೆನಿಸಿಜೀವರ್ಗೆ । ಶಿವಕ್ಷೇತ್ರ ವೆಂಬಕಾಶಿ । ಸ್ಥಲದಿ ಶಿವನೆ ತಾರಕಮಂತ್ರವಂ । ಬೋಧಿಸುತ । ಶಿವಲೋಕವೀವ ಪ್ರಭುವೆ । ಗುರುವೆ ‖ ಶಿವ ‖ ೪ ‖ ಶಿವಪದಾಂಭೋರುಹವನು ನೆನೆನೆನೆದು । ಶಿವ ಸುಖಾಮೃತವಸವಿನೀನೆಂದು । ಶಿವನೆ ಗುರುಮಹಲಿಂಗನೆಂದೆನಿಸಿ । ಶಿವಭಕ್ತಸುಧೆಯ ನೆರದು ಕರದು ‖ ಶಿವನೆ ‖ ೫ ‖

ಭಕ್ತಿಪಂಚರತ್ನ.

೩೫. ಕಂ ‖ ಶ್ರೀಕೈವಲ್ಯವಹರಿಂದಲು । ಲೋಕದೊಳಂ ಪಂಚರತ್ನವಪಠಿಸುವ ಭಕ್ತರ ‖ ಶೋಕವಹರಿಸುತಲನುದಿನ । ತಾಕರುಣದಲಿಪೊರೆವಂ ಗಿರಿಜಾನಾಥಂ ‖

ರಾಗ—ತೋಡಿ—ಅಟತಾಳ.

೩೬. ಭಜಮಾನಸದೇವಂ । ಭಜರೇ । ಭಜಮಾನಸದೇವಂ ॥ ಪ ॥ ರಜತಗಿರೀಶಂ । ಭುಜಗವಿಭೂಷಂ । ಕುಜನವಿನಾಶಂ । ಸುಜನೋಲ್ಲಾಸಂ । ಭಜಮಾನಸದೇವಂ । ಭಜಮುರಹರಮಿತ್ರಂ । ಪರಮಪವಿತ್ರಂ । ಉರುತೇಜಗಾತ್ರಂ । ಪರಶಿಖಿನೇತ್ರಂ ॥ ಭಜ ॥ ೧ ॥ ಸುಗುಣಸುಧಾಮಂ । ಜಗದಾಧಾರಂ । ಅಗಣಿತಮಹಿಮಂ । ಮಿಗೆಪೂರ್ಣಕಾಮಂ ॥ ಭಜ ॥ ೨ ॥ ಮಂತ್ರಪ್ರಭಾವಂ । ಮಂತ್ರಾರ್ಥದೇವಂ । ಯಂತ್ರೋದ್ಧಾರಂ । ತಂತ್ರವಿದೂರಂ ॥ ಭಜ ॥ ೩ ॥ ಜನನಕುಠಾರಂ । ಘನವೇದಸಾರಂ । ಮುನಿಕುಲಪಾಲಂ । ಅನುಪಮನೀಲಂ ॥ ಭಜ ॥ ೪ ॥ ವರಗೌರೀಸಂಗಂ । ಕರುಣಾಂತರಂಗಂ । ಶರಣಕೃಪಾಂಗಂ । ಗುರುಮಹಲಿಂಗಂ । ಭಜಮಾನಸದೇವಂ ॥ ಭಜರೆ ॥ ೫ ॥

ರಾಗ—ಕಲ್ಯಾಣಿ—ದ್ವಿಪದೆ.

೩೭. ಏನಹೇಳಲಿ ದಿವ್ಯಶಿವಮಂತ್ರಮಹಿಮೆಯನು । ಮಾನಸೇಂದ್ರನ ಭಜಿಸಿ ಭವನಾಶಿಯಾಗೈ ॥ ಗ ॥ ಗುರುಬ್ರಹ್ಮವಧೆಪಾಪವೆಂಬ ಕಾರ್ಗತ್ತಲೆಗೆ । ಉರಿವ ಮಧ್ಯಾಹ್ನಾರ್ಕಮಂಡಲವುಯೆನಿಸುತ ॥ ಸುರೆಯಸೇವನೆದೋಷವೆಂಬತುಲ ಮೇಘಕ್ಕೆ ಉರುತರಪ್ರಚಂಡಮಾರುತವುಯೆನಿಸಿಹುದು ॥ ಏನ ॥ ಕನಕತಸ್ಕರಪಾಪವೆಂಬತುಲಪರ್ವತವೆಂಬುವಜಗಕೆ । ಜನಜನಿತಪಂಚಾನನವುಯೆನಿಸಿರುವದು ॥ ಏನ । ೨ । ಅನೃತಭಾಷಾಲತೆಗೆಗಂಡುಗೊಡ್ಲೆನಿಸಿ । ಘನಪಾತಕಾರಣ್ಯಕಾಲಾಗ್ನಿಯೆನಿಸಿ । ಮುನಿವಿಪ್ರಗುರುಸೇವವೇದಾಂತದೂಷಣೆಯ । ನೆನಹೆಂಬ ಸರ್ಪಕ್ಕೆ ಹಸಿದ ಗರುಡನೆನಿಸಿರುವದು ॥ ಏನ ॥ ಪರಸತಿಸ್ವಮಾತೃ ತನ್ನ ಭಗಿನಿಸಂಗಮವು । ಪರಧನವು ಗೃಹಗ್ರಾಮ ಅನ್ನವಂಚನೆಯು ॥ ಉರುಭ್ರೂಣಗೋಹತ್ಯ ಮೊದಲಾದ ಅಘವೆಂಬ। ದುರುಳರಕ್ಕಸಕೋಟಿ ಶಿರಚಕ್ರವೆನಿಸಿರುವುದು ॥ ಏನ । ೪ । ಅಡಿಗಡಿಗೆ ನುಡಿನುಡಿಗೆ ಮನನೆನೆದರೆಸಾಕು । ಮಡಿಯಮೈಲಿಗೆಯೆಂಬ ತಡೆಬಡೆಗಳಿಲ್ಲ । ಕಡುಸುಲಭ ಯಮಭಟರ ಕಡಿವಸಿತ ಖಡ್ಗವಿದು । ಮೃಡರೂಪ ಮಹಲಿಂಗಗುರುಪ್ರಸಾದವಿದು ॥ ಏನ ॥ ೫ ॥

ಕಂದಾರ್ಥದರವು—ರಾಗ—ರೇಗುಪ್ತಿ.

೩೮. ಶಿವಮಂತ್ರಾಮೃತಘುಟಿಕೆಯ । ಸವಿಯಲು ಭವರೋಗ ಕ್ಷಣದಿ ಹರಿವುದು ಸತ್ಯಂ ॥ ಅವಿರಳತ್ರಿಪುಟಿಯ ಮಧ್ಯದಿ।ಶಿವಭಕ್ತಿಯ ಬೀಜರೂಪ । ಮಂತ್ರವಂ ಜಪಿಸೀ ಸೋಹಂಭಾವ । ಸ್ಥಿರವಾಗಿ । ನಿಲಿಸೀ । ಪ್ರವಿಮಲಾತ್ಮಜ್ಯೋತಿಯೊಳು ಲೀನವಾಗಲು । ಶಿವಸುಖನಿನ್ನೊಳುಜನಿಸುವದಾಗೀ । ಓಮಾನಸೇಂದ್ರ । ಸಾಧಿಸು ನಿತ । ಸುಜ್ಞಾನಚಂದ್ರ ॥ ೧ ॥ ವರಯತಿ ಮುನಿಯೋಗೀಶ್ವರ । ಗುರುಶುಕ್ರದ್ವಿಜ

ವರೇಣ್ಯ ವಿಪ್ರೋತ್ತಮರು ಸುರಗಣ ಕ್ಷತ್ರಿಯ ವೈಶ್ಯರು । ಧರೆಯೊಳು ಶೂದ್ರಹೂಣ। ಶ್ವಪಚ ಕಿರಾತರು ॥ ಬ್ರಹ್ಮತ್ಯಾದಿಪಾಪಗೈದಾತ । ಸ್ಮರಿಸಾಲು ಜನ್ಮವ ಪಾವನಂ ಗೈಯ್ಯುವ । ಘನ ಶಿವಮಂತ್ರವ । ನಿನ್ನೊಳು ಬಿಡದಿ ॥ ಓಮಾನಸೇಂದ್ರಾ ಸಾಧಿಸು ನಿತ್ಯ । ಸುಜ್ಞಾನಚಂದ್ರಾ ॥ ೨ ॥ ನರರಿಗೆ ಗಂಗೆಯು ಪಾವನ । ವರಚಂದ್ರನು ರಾತ್ರಿ ಯಲ್ಲಿ ಮನಸಿನತಾಪವ ॥ ಸುರತರು ದಾರಿದ್ರವ ಪರಿ । ಹರಿಸುವದೀಮೂರು ವೊಂದೇ ನಿಮಿಷಾರ್ಧದಲ್ಲಿ ॥ ಛೇದಿಸಿ ನಿಜ । ಭಕ್ತರಿಗೊಲಿದು । ಧರೆಯೊಳು ಶಾಶ್ವಿತೈಶ್ವರ್ಯ ಪಾಲಿಪನೆಂಬ । ಕೀರ್ತಿ ಪೊತ್ತಿರುವಂಥ । ಶಿವಮಂತ್ರವಿದನು ॥ ಓ ಮಾನಸೇಂದ್ರ । ಸಾಧಿಸು ನಿತ್ಯ । ಸುಜ್ಞಾನಚಂದ್ರ ॥ ೩ ॥ ಶಿವಶಿವ ಜಯಜಯಯೆನ್ನುತ ಶಿವಶಿವಶಿವ ಶಂಭು ಶಂಭೋಶಂಕರಯೆನ್ನುತ ॥ ಶಿವನನ್ನೆ ನೆನೆಯುತ ಪಾಡುತ ಶಿವಕಥೆಎಂಬವನ್ಮೃತ ಶರಧೀ ॥ ಯೊಳಗೋಲ್ಯಾಡಿಪ ಮಾಂ ಪಾಹಿ ನೀ।ನೆಂದು ಕೊಂಡಾಡೀ । ಶಿವನೊಳು ಬೆರೆಯಲನ್ಯವನೊಂದ ಕಾಣದೆ । ಶಿವಮಯವಾಗೀ ತೋರ್ಪುದುಜಗವೆಲ್ಲಾ॥ಓಮಾನ ಸೇಂದ್ರಾ ಸಾಧಿಸು ನಿತ್ಯ ಸುಜ್ಞಾನಚಂದ್ರಾ ॥ ೪ ॥ ಶಿವನಾಮಾಮೃತ ರೋಮಶ । ತಪದೂರ್ವಾಸಮಾರ್ಕಂಡ್ಯಾದಿ ಮುನೀಶ್ವರರ್ । ಸವಿಸವಿದುಣ್ಣು ತಪೂರ್ವದಿ । ಅವಿರಳ ಕೈವಲ್ಯಪದವಿಯ ಹೊಂದಿದರಾಗೀ । ಮೃತ್ಯುಂಜಯಮಂತ್ರವೀದಧಿಕಾ । ಶಿವಗುರು ಮಹಲಿಂಗನಿಂದ ನೀನರಿತರೆ । ಶಿವಜ್ಞಾನಸಂಪನ್ನ । ನಾಗುವೆ ಮುನ್ನ ॥ ಓಮಾನ ಸೇಂದ್ರಾ ಸಾಧಿಸು ನಿತ್ಯ ಸುಜ್ಞಾನಚಂದ್ರಾ ॥ ೫ ॥

ರಾಗ—ಶ್ಯಾಮುಕಲ್ಯಾಣಿ—ದ್ವಿಜಾವಂತಿ.

೩೯. ಭಜಿಸು ಭಕ್ತರ ಬಂಧುವೆನಿಪನ । ಭಜಿಸು ಬ್ರಹ್ಮಾನಂದನ ॥ ಪ ॥ ಭಜಿಸು ಕರುಣಾಸಿಂಧುವೆನಿಪನ।ಭಜಿಸುತ್ರೈ ಜಗಭರಿತನ॥ಅನುಪಲ್ಲವಿ॥ ವೇದಪುರುಷನ ವೇದವೇದ್ಯನ ವೇದಆಗಮವಂದ್ಯನ । ವೇದಜನಕ ವೇದರೂಪದ ವೇದಪಾಠಕ ವಂದ್ಯನ ॥ ಭಜ ॥ ೧ ॥ ಭಕ್ತಪ್ರಿಯನ ಭಕ್ತಭಾಗ್ಯನ ಭಕ್ತಹೃದಯವಿಹಾರನ । ಭಕ್ತ ಜನಕನ ಪುತ್ರನ ಭಕ್ತಜನ್ಮಕುಠಾರನ ॥ ಭಜ ॥ ೨ ॥ ಯೋಗಬೋಧ್ಯನ ಯೋಗ ಸಾಧ್ಯನ ಯೋಗಮುದ್ರಕರಾಬ್ಜನ । ಯೋಗಪ್ರಿಯನಾ ಯೋಗಸಿದ್ಧನ ಯೋಗದೀ ಕ್ಷಾಬದ್ಧನ ॥ ಭಜ ॥ ೩ ॥ ಧ್ಯಾನಪ್ರೀತನದಾನಪಾತ್ರನ ಧ್ಯಾನಫಲಪ್ರದಖ್ಯಾತನ । ಧ್ಯಾನಧ್ಯಾತೃಧ್ಯೇಯರೂಪನ ಧ್ಯಾನಸಿತ್ಯಾನಂದನ ॥ ಭಜಿಸು ॥ ೪ ॥ ಜ್ಞಾನಗಮ್ಯನ ಜ್ಞಾನನೇತ್ರನ ಜ್ಞಾನಸಾಗರಚಂದ್ರನ । ಜ್ಞಾನಿ ಗುರುಮಹಲಿಂಗರಂಗನ ಜ್ಞಾನಿ ದಕ್ಷಿಣವಕ್ತ್ರನ ॥ ಭಜಿಸು ॥ ೫ ॥

ರಾಗ—ಕಲ್ಯಾಣಿ—ಅಟತಾಳ

೪೦. ಮಾತುಮಾತಿಗೆ ಶಂಕರ ಶ್ರೀಗುರುವೆ ಸರ್ವೋತ್ತಮನೆನಬಾರದೆ ॥ ಪ ॥ ಜ್ಯೋತಿಸಂಗ ಉರಿದೋಗ್ವ ಕರ್ಪುರಮತೆ।ಪಾತಕರಾಶಿ ನಿಂತುರಿದು ಹೋಗುವದಾಗಿ॥

ಅನುಪಲ್ಲವಿ ॥ ಸ್ನಾನವಮಾಡುವಾಗ ನೇಮದಿ ಆತ ಧ್ಯಾನವ ಮಾಡುವಾಗ ॥ ಜಾಣತನದೆ ಅನ್ನ ಉಂಡು ಗಂಗಾಮೃತ।ಪಾನಮಾಡುವಕಾಲದಿ ಮನವೆ ॥ ಮಾತು ॥ ೧ ॥ ಬಿಸಜಾಕ್ಷಿ ನೋಡುವಾಗ ಕೂಡುತ ನಿತ್ಯ ಒಸೆದು ಮಾತಾಡುವಾಗ। ಬಸುರಲಿ ಬಂದಾಮಗನಮುದ್ದಿಸುವಾಗ ॥ ಹಸನಾದ ವಸ್ತ್ರಂಗಳುಡುವಾಗ ಮನವೆ ॥ ಮಾತು ॥ ೨ ॥ ಬೆಟ್ಟವನೇರುವಾಗ ಕಾಲ್ಮುರಿದಲ್ಲಿ ಥಟ್ಟನೆಬೀಳುವಾಗ । ಅಷ್ಟಭೋಗದಿ ನಿತ್ಯ ಲೋಲುಪ್ತಿಪಡೆವಾಗ । ದಟ್ಟದಾರಿದ್ರ್ಯಬಂದಾಗಲು ಮನವೆ ॥ ಮಾತು ॥ ೩ ॥ ಸುಲಿವ ಕಳ್ಳನು ಬಂದಾಗ ॥ ಘೋರಾರಣ್ಯದಲ್ಲಿ ವ್ಯಾಘ್ರ ಮುರಿಯುವಾಗ । ಛಳಿಜ್ವರ ಕೆಮ್ಮು ಉಬ್ಬಸರೋಗ ಬಂದಾಗ ಮಳೆಗಾಳಿ ಸಿಡಿಲಿನಾರ್ಭಟದಲ್ಲಿ ಮನವೆ ॥ ಮಾತು ॥ ೪ ॥ ಗುರುಸೇವೆಗೈಯ್ಯುವಾಗ ಶ್ರೀಗುರುಕೊಟ್ಟ ವರಮಂತ್ರ ಜಪಿಸುವಾಗ।ಗುರುವೆ ಗುರುವೆ ಕಲ್ಪತರುವೆ ಪಾಲಿಸು ಎಂದು । ಗುರುಮಹಾಲಿಂಗರಂಗನ ನಂಬಿ ಮನವೆ ॥ ಮಾತು ॥೫ ॥

॥ ಇತಿ ಭಕ್ತಿಪಂಚರತ್ನ ಸಮಾಪ್ತಿಃ ॥

ರಾಗ—ಕೇತಾರಗೌಳ—ದ್ವಿಪದೆ.

೪೧. ಮಾಡು ಜಪವನು ಮನವೇ ಮರೆಯದಲೆ ನೀನು । ರೂಢಿಯೊಳಗತಿ ಶ್ರೇಷ್ಠ ಶಿವಮಂತ್ರಬಿಡದೆ ॥ ಪಲ್ಲವಿ ॥ ಅರಿತು ಭಜಿಸಿದರವನ ಕೋಟಿಜನ್ಮಪಾಪ ಉರಿದು ಪೋಗುವನ್ನೆ ಸರಿಗಿಲ್ಲದಂತೆ । ಅರಿಯದಲೆ ಜಪಿಸಲುತ್ತರಿಪುದಾದಿನ ದೋಷ । ಹಿರಿಯನಾಗುವನೆಲ್ಲರಿಗೂ ಜಗದೊಳಗೆ ॥ ಮಾಡು ॥ ೧ ॥ ಕವಿದುಕೊಂಡುರಿಯಲ್ಲಿ ಕಾಷ್ಟ ನಿಲ್ಲುವದುಂಟೆ । ರವಿಮೂಡಿಬರಲಂಧಕಾರಕ್ಕೆ ಠಾವುಂಟೆ । ವ್ಯವಸಾಯ ಮಾಡ್ವಂಗೆ ದುರ್ಭಿಕ್ಷೆಕ್ಕೆಡೆಯುಂಟೆ । ಶಿವನಕಂಡವನಿಂಗೆ ಯಮಬಾಧೆಯುಂಟೆ ॥೨॥ ಸತಿಸುತರ ಮೋಹಬಲೆಯೊಳು ಬಿದ್ದು ಕೆಡಬೇಡ ಗತಿಗಳನು । ಬಯಸಿ ಬಾಯಾರ ಬ್ಯಾಡ । ಅಧಿಕ ಭುಕುತಿಯಿಂ । ಭಜಿಸೆ ನಿನಗೀವ ಶ್ರೀಗುರುಪಿತಮಹಾಲಿಂಗ ಮಿಗೆ ಭುಕ್ತಿಮುಕ್ತಿಯನು ॥ ಮಾಡು ॥ ೩ ॥

ರಾಗ—ಕೇತಾರಗೌಳ—ದ್ವಿಪದೆ.

೪೨. ಗುರುಚರಣಪ್ರಣವವೆಂತೆಂಬ ಮರ್ಮವನು ಶ್ರೀ । ಗುರುವಿನಿಂದರಿತು ಪೂಜಿಸುವನುತ್ತಮನು ॥ ಪ ॥ ಶಿರವಧಿಕವೆನಿಸಿರಲ್ ಚರಣಪೂಜೆಂತೆನಲು । ಸಿರಿವು ಜ್ಞಾನಸ್ಥಾನನಿರ್ಗುಣನೆನಿಸುವದು ॥ ಚರಣಕರ್ಮಸ್ಥಾನಸಗುಣವೆನಿಸಿಹುದಾಗಿ । ಚರಣ ಪೂಜಿಸಲಾಯ್ತು ಪ್ರಣವರೂಪಿಂದ ॥ ಗುರು ॥ ತಾರಕದ ಪರಂಜ್ಯೋತಿ ಕರ್ನ ಕುಂಡಲ ಮತ್ತೆ । ಚಾರುಬಿದಿಗೆಯಚಂದ್ರ ಬಿಂದುರೂಪಾಗಿ । ತೋರಿ ಅಜ ಹರಿ ರುದ್ರ ಈಶ್ವರ ಸದಾಶಿವರು।ಮಿರದಲೆ ದೇವ್ತೆಗಳುಯೆಸಿನಿ ರಾಜಿಪರು ॥ ಗುರು ॥ ೨ ॥ ಅಲ್ಲಿ

ಭಕ್ತಿಯು ನಿಂತಪುರುಷನಿಗೆ ಶ್ರೀಗೌರಿ। ವಲ್ಲಭನು ವೊಲಿದು ವರಕಾವ್ಯ ಮೋಕ್ಷವನು। ಒಲ್ಲೆನೆಂದುಕರೆದುಕೊಡುವನೆಂಬುದನು। ಬಲ್ಲಹರಗುರುಭಕ್ತರೊಲಿದು ಪೂಜಿಪರೂ ॥ ಗುರು ॥ ೩ ॥ ಚರಣಪ್ರಣವಾಕಾರವೆನಿಸಿ ಭಕ್ತರ್ಗೆಲ್ಲ ಚರಣರಜದುರಿತಗಿರಿ ವಜ್ರ ವಾಗಿರುತ। ಚರಣತೀರ್ಥಖಿಳ ರುಜೆಗೌಷಧವುಯೆನಿಸುತ್ತ। ಚರಣಪೂಜೆಯೆ ಸರ್ವ ಕಧಿಕವೆನಿಸಿಹುದು ॥ ಗುರು ॥ ೪ ॥ ಇಂತು ಶ್ರೇಷ್ಠತ್ವಲ್ಲಿ ಅಡಗಿರುವದನ್ನರಿತು। ಕಂತುಹರನಚ್ಯುತನು ಅಜಮುಖರಾದವರು। ಪಿಂತಸಿರದೊಳಗಾಂತು ಕೊಂಡಾಡಿ ಪೂಜಿಪರು। ಸಂತಸದಿ ಗುರುಮಹಾಲಿಂಗನಡಿಗಳಂ ॥ ಗುರು ॥ ೫ ॥

ಮಂಗಳಾರತಿ

ರಾಗ—ನಾದನಾಮಕ್ರಿಯೆ—ಅಟತಾಳ.

೪೩. ಮಂಗಳ ಜಯಜಯಮಂಗಳ। ಜಯಮಂಗಳ ಪಾರ್ವತಿಪರಮೇಶಗೆ ಮಂಗಳ ಜಯಜಯಮಂಗಳ ॥ ಪಲ್ಲವಿ ॥ ತ್ರಿಪುರವ ದಹಿಸಿದ ನಿಪುಣಾನಾಧೀಶಂಗೆ। ತ್ರಿಪುರಸುಂದರಿಯಾದ ಪಾರ್ವತಿಗೆ। ಜಪಧ್ಯಾನಕ್ಕೊಲಿಯುವ ಮಂತ್ರಮೂರುತಿಗೆ। ಜಪಸಿದ್ಧಿಪ್ರದಳಾದ ಮಂತ್ರದೇವತೆಗೆ ॥ ಮಂಗಳ ॥ ೧ ॥ ಇಂದ್ರಪೂಜಿತಧವಳಾಂಗದ ರೂಪಿಗೆ। ಇಂದ್ರಾಕ್ಷಿಯೆನಿಸುವ ಮಂಗಳರೂಪಿಗೆ। ಚಂದ್ರಭಾಷಿಂಗದಪರಿ ಸೂಡಿದವನಿಗೆ। ಚಂದ್ರಕುಂಕುಮಧರಿಸಿದ ಚಂದ್ರಮುಖಿಗೆ ॥ ಮಂಗಳ ॥ ೨ ॥ ಗಂಗೆಯ ಜಡೆಯೊಳು ಸೂಡಿದ ದೇವಗೆ। ಗಂಗೆಯೋಳ್ಕಲಹಂಸ ಮಂಗಳಗೌರಿಗೆ। ಅಂಗರಹಿತ ನಿತ್ಯನಿರ್ಗುಣಮೂರ್ತಿಗೆ। ಅಂಗಶೋಭಿತ ನಿತ್ಯಮಂಗಳಕೀರ್ತಿಗೆ। ಮಂಗಳ ॥ ೩ ॥ ಮೂರುಗುಣಕೆ ಬೇರೆಯಾಗಿಹ ದೇವಗೆ। ಮೂರುಗುಣಗಳಿಂದ ತೋರುವ ದೇವಿಗೆ। ಮೂರವಸ್ಥೆಗಳನ್ನು ಮೀರಿದತುರ್ಯಗೆ। ಮೂರವಸ್ಥೆಯೊಳಾಡ್ವ ಉನ್ಮನಿದೇವಿಗೆ ॥ ಮಂಗಳ ॥ ೪ ॥ ನಾದಬಿಂದುವು ಕಳೆ ಸಾಕ್ಷಿ ಚಿದ್ರೂಪಗೆ। ನಾದಬಿಂದುವು ಕಳೆಯಾದ ಚದ್ರೂಪಿಗೆ। ಆದಿಮೂರುತಿ ಗುರುಮಹಲಿಂಗದೇವಗೆ। ಆದಿಶಕ್ತೆನಿಸಿದ ಅಖಿಳಾಂಡ ದೇವಿಗೆ ಮಂಗಳ ಜಯಜಯಮಂಗಳ ॥ ೫ ॥

ರಾಗ—ಕಲ್ಯಾಣಿ.

೪೪. ಕರವೆತ್ತಿಬೆಳಗುವೆನು। ಕರ್ಪೂರಜೋತಿ ॥ ಕರವೆತ್ತಿಬೆಳಗುವೆನು ॥ ಪ ॥ ಧರಣಿಪಾವನಕಾಗಿ ಅವತಾರವನುಗೈದ। ಕರುಣಾಸಾಗರನಾದ ಶ್ರೀಗುರುಮೂರ್ತಿಗೆ ಕರವೆತ್ತಿ ॥ ಅ ॥ ವರನಾದಖಗಹಂಸವಾಹನನೆನ್ನಿಸಿ। ಕರದಿ ತ್ರಿಶೂಲ ಕಮಂಡಲ ವರಚಕ್ರ। ನಿರುತಉಮೆಯುರಮೆಯು ಭಾರತಿಹೊಂದಿಹ। ವರಪ್ರಣವಾತ್ಮಕಗುರು ಪಾಹಿಮಾಂ ಎಂದು ॥ ಕರವೆತ್ತಿ ॥ ೧ ॥ ಮೆರೆವಾರುಮತವಳಿದದ್ವೈತಸ್ಥಾಪಿಸಿ। ಭರದಿ ಮಂಡನಮಿಶ್ರಗಾಶ್ರಮಪಾಲಿಸಿ। ನೆರೆ ಜಗದ್ಗುರುವಾದ ಪರಶಿವರೂಪನ್ನ। ವರಶಂಕರಾಚಾರ್ಯಯತಿ ಪಾಹಿಮಾಂ ಎಂದು ॥ ಕರವೆತ್ತಿ ॥ ೨ ॥ ಗುರುಮಹಲಿಂಗರಂಗನೆ

ಮೂರುರೂಪಾಗಿಇರುವನೆಂಬುವ ಮರ್ಮಸೂಚಿಪನೆಂಬಂತೆ । ಶಿರಮೂರರಿಂದಲಿ ಅವ ತಾರವನುಗೈದ । ಪರಮದತ್ತಾತ್ರೇಯ ಗುರುಪಾಹಿಮಾಂ ಎಂದು ॥ ಕರವೆತ್ತಿ ॥ ೩ ॥

॥ ಇತಿ ಪ್ರಥಮಪ್ರಕರಣ ಸಮಾಪ್ತಿಃ ॥

ಗದ್ಯ ॥ ಇತಿ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು ಸಾರ್ವ ಭೌಮ ಶ್ರೀದತ್ತಾತ್ರೇಯ ಕರಕಮಲಸಂಜಾತ ಶ್ರೀಸದಾನಂದ ಗುರುಮಹಲಿಂಗರಂಗ ಯತಿವರೇಣ್ಯ ಚರಣಕಮಲ ಭೃಂಗಾಯಮಾನ ಶ್ರೀಶಂಕರಾನಂದಯೋಗಿ ವಿರಚಿತ ಕೈವಲ್ಯನವನೀತವೆಂಬ ಗ್ರಂಥದಲ್ಲಿ ಭಕ್ತಿಯೋಗವೆಂಬ ಪ್ರಥಮ ಪ್ರಕರಣದ ತತ್ವಗಳು (೨೯-೧೩೪)

ವೃತ್ತಗಳು ॥ (೨) ಸೀಸಕಂದಗಳು (೧೨) ಶ್ಲೋಕಗಳು (೩)
ಅಂತು ವಚನಂಗಳು ೪೭-೧೩೪ ಕ್ಕೆ

ಮಂಗಳಮಸ್ತು

ಶ್ರೀ ರಸ್ತು

ದ್ವಿತೀಯ ಪ್ರಕರಣ ಪ್ರಾರಂಭವು

ವೈರಾಗ್ಯಭಾಗ್ಯವು

ಶ್ಲೋ ॥ ನವೈರಾಗ್ಯತ್ಪರಂಭಾಗ್ಯಂ । ನಬೋಧಾಯಾಃ ಪರಂಸುಖಂ ॥
ನಹರೇರಪಿದೈವಂವಾ । ನಸಂಸಾರಾತ್ಪರೋರಿಪುಃ ॥ ೧ ॥

೧. ಕಂದ ॥ ವರಿಸಲು ರಾಜನಕುವರಿಯ । ಧೊರೆಮಗನೇ ಯೋಗ್ಯನೆಂಬ ನ್ಯಾಯವ ತಿಳಿಯಲ್ ॥ ಧರೆಯೊಳು ಮುಕ್ತ್ಯಾಂಗನೆಯಂ । ವರಿಸಲು ವೈರಾಗ್ಯ ಸಂಪತ್ತುಳ್ಳವ ಯೋಗ್ಯಂ ॥

೨. ಶಾ ॥ ವೃ ॥ ಶ್ರೀಮದ್ಬ್ರಾಸುರ ಇಂದ್ರಲೋಕಸುಖಮಂ ಅದೃಶ್ಯವೆಂದೆ ನ್ನುತಂ । ಧಾಮಂಕಾಂಚನ ಸುಂದರೀಮಣಿಸುಖಂ ಸ್ವಪ್ನಸ್ವರೂಪೆನ್ನುತ। ಧೀಮಂತರ್ ತಿಳಿದೆಲ್ಲ ನಶ್ವರೆನುತಂ ದೂರಿರ್ಪದಾವಾಗಲುಂ । ಶ್ರೀಮದ್ಜ್ಞಾನ ಪ್ರಬೋಧಕಾಸ್ಪದ ಮಿದುಂ ವೈರಾಗ್ಯಸಂಪತ್ಪ್ರದಂ ॥

೩. ಸುಗಂಧಿವೃತ್ತಂ ॥ ಕ್ರೂರರಾಗದ್ವೇಷವೈರಿಕೊಂದು ಶಾಂತನಾಗಲು ಚಾರು ಆತ್ಮರಾಮನಲ್ಲಿ ಲೀನವಾಗಿ ಚಿತವೂ । ಘೋರಿಬ್ರಹ್ಮಬೋಧೆಯಿಂದ ಮಾಯೆನಾಶ ಗೈಯುತೇ । ಸಾರಮುಕ್ತಿರಾಜ್ಯಸೂರೆಗೊಂಬ ಯೋಗಿ ಸಂತತಂ ॥

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೪. ನಿನ್ನಹಿತಕೋಸುಗವಪೇಳುವೆ । ಎನ್ನಮಾನಸರಾಜನೇ ॥ ಪ ॥ ಮುನ್ನ ವಿರಕ್ತಿಯಧ್ಯಾನವನಾರ್ಜಿಸು । ನಿನ್ನದಾಗಿದೆಮುಕ್ತಿಯು ॥ ಅ ॥ ಸ್ವಪ್ನದಂದದಿರಾಜ್ಯ ಲಕ್ಷ್ಮಿಯು । ಸ್ವಪ್ನದಂದದಿಭೋಗವು । ಸ್ವಪ್ನದಂದದಿಪುತ್ರಸತಿಯರು । ಸ್ವಪ್ನ ದಂದದಿಪ್ರಾಯವು ॥ ನಿನ್ನ ॥೧॥ ದುಃಖಜನ್ಮವು ಮರಣಕಾಲದಿ । ದುಃಖಬಹು ರೋಗಂಗಳಿಂ । ದುಃಖ ಶತೃಗಳಿಂದಲನುದಿನ । ದುಃಖಮಯಸಂಸಾರವು ॥ ॥ ೨ ॥ ದುಃಖ ಧನವಾರ್ಜಿಸುವಕಾಲದಿ । ದುಃಖರಕ್ಷಿಪಕಾಲದೀ । ದುಃಖ ಚೋರರು ಅಗ್ನಿ ಭಯಬಹು । ದುಃಖ ಒಬ್ಬರಿಗೀಯಲು ॥ ನಿನ್ನ ॥೩॥ ನಿತ್ಯವಲ್ಲವು ಹೆಣ್ಣು ಹೊನ್ನು ಗಳ್ । ನಿತ್ಯವಲ್ಲವು ಮಣ್ಣಿದು । ನಿತ್ಯಮೃತ್ಯುಯೆನಿಸಿತ್ರಿಜಗವ । ನಿತ್ಯನುಂಗುತಲಿರು ವದು ॥ ನಿನ್ನ ॥೪॥ ಈಷಣತ್ರಯದಾಸೆಯಿಂದಲೇ । ಘಾಶಿಯಾಗುವದೀಜಗಂ । ಆಶೆ ಶ್ರೀಗುರುರಂಗನಲ್ಲಿಡು । ಈಶನಾಗುವೆ ಸಂತತಂ ॥ ॥೫॥

ತ್ರಿಕರಣಶುದ್ಧಿ

ರಾಗ—ನಾದನಾಮಕ್ರಿಯೆ—ಮದಿತಾಳ

೫. ವಾಣಿಪಾಣಿಮಾಣಿಮೂರುಕಟ್ಟಿದವನು । ಶಿಷ್ಟನಪ್ಪನು ॥ ಪ ॥ ವಾಣಿ ಪಾಣಿಮಾಣಿಮೂರುಬಿಚ್ಚಿದವನು । ಭ್ರಷ್ಟನಪ್ಪನು ॥ ಅ ॥ ಸುಳ್ಳು ಠಕ್ಕು ಚಾಡಿ ಕುಹಕವಾಡಬೇಡ । ವಾಕ್ಕಿನಿಂದ । ಒಳ್ಳೇನುಡಿಯು ಮಂತ್ರಧ್ಯಾನಬಿಡಲು ಬ್ಯಾಡಾ । ಮನಶಿನಿಂದ ॥ವಾಣಿ॥೧॥ ಕಳವುಹಿಂಸೆ ಕೊಲೆಗಳನ್ನು । ಮಾಡಬ್ಯಾಡಾ ಹಸ್ತದಿಂದ । ಸಲಿಗೆಯಿಂದಬೇಡಿದರೆ । ಕೊಡುವ ಶಂಭು ದೃಢದಿನಂಬು ॥ ವಾಣಿ ॥೨॥ ನೋಟ ಬಿಡು ಕಾಮಿನೀಯರಕೂಟದಲ್ಲಿ । ನೋಟದಲ್ಲಿ ಮೋಹವಿಡು ಗುರುರಂಗನಡಿಯಲ್ಲಿ । ಮನಸೀನಲ್ಲಿ ॥ ವಾಣಿ ॥ ೩ ॥

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೬. ಮನವಿರಕ್ತಿಗೆ ಮುಕ್ತಿಯಲ್ಲದೆ । ತನುವಿರಕ್ತಿಗೆಯಿಲ್ಲವು ॥ ಪ ॥ ಮನವೆ ಬಂಧವು ಮೋಕ್ಷಪದವಿಗೆ । ಮನವೆ ಕಾರಣವೆನಿಪುದು ॥ ಅ ॥ ಮನದಿಮೋಹವು ಆಶೆಯಳಿದವ । ಮನೆಯೊಳಿದ್ದರು ಮುಕ್ತನು । ಮನದಿ ಮೋಹವು ಆಶೆಯುಳ್ಳವ । ಮನದೊಳಿದ್ದರು ಬದ್ಧನು ॥ ಮನ ॥ ೧ ॥ ತನುವು ಧನದಭಿಮಾನವ । ಳಿದವ ಮನೆಯೊಳಿದ್ದರು ಮುಕ್ತನು । ತನುವು ಧನದಭಿಮಾನವುಳ್ಳವ । ಮನದೊಳಿದ್ದರು ಬದ್ಧನು ॥ ಮನ ॥೨॥ ಆಶೆಯಿಂದಲೆ ಮನಕೆ ಬಂಧವು ಆಶೆಯಳಿಯಲು ಮುಕ್ತಿಯು । ಆಶೆಗುರುಮಹಲಿಂಗನಲ್ಲಿಡೆ । ಈಶನಾಗುವಸಂತತಂ ॥ ಮನ ॥ ೩ ॥

ಕಾಮಾಂಧಕಾರಲಕ್ಷಣ

ರಾಗ—ಕಲ್ಯಾಣಿ—ಆಟತಾಳ

೭. ಅಬ್ಬಬ್ಬನೆಂತವನೋ । ಈ ಕಾಮು । ಅಬ್ಬಬ್ಬನೆಂತವನ್ನೋ । ಮಬ್ಬು ಕಣ್ಣಿಗೆ ಮುಚ್ಚಿಮೋಹ ಬಲೆಯಬೀಸಿ । ಒಬ್ಬೊಬ್ಬರನುಗೋಣುಮುರಿಯುವ ಪಿಡಿದು।

ಅಬ್ಬಬ್ಬ ॥ ಪ ॥ ಘನತಪಗೇಡಿಯೆಂದು । ಕಿಡಿಗಣ್ಣಿನ । ಘನತಪಜ್ವಾಲೆಯಿಂದ ತ್ರಿಣಯನು ಸುಟ್ಟುಬೊಟ್ಟಿಟ್ಟರು ಸಾಯದೆ । ಮನಸಿಜನೆನಿಸಿ ಮೂಲೋಕವ ಸುಡುವನು ॥ಅ॥ ॥೧॥ ಸತ್ತತಾಯರಿಯಾನು । ಪ್ರತ್ಯಕ್ಷತಾ ಹೆತ್ತಮಗಳನರಿಯಾನು । ಅತ್ತೆ ಅತ್ತಿಗೆ ತಾಯಿ ತಂಗಿಯೆಂದೆಣಿಸಾದೆ। ನಿತ್ಯಭೋಗಿಸಿ ನೀತಿಗೆಟ್ಟು ಸಂಚರಿಸುವ ॥ ॥ಅ॥ ॥೨॥ ಪತಿವ್ರತೆಯರ ಕೆಡಿಸಿ । ಯೋಗವು ಧ್ಯಾನವ್ರತ ನೇಮಂಗಳ ಮರೆಸಿ । ಸ್ಥಿತಿಗತಿ ಕೆಡಿಸುತ್ತ ಸೂಳೆರಬಾಗಿಲೆ । ಗತಿಯೆಂದು ತಿರಿದುಂಬಪರಿಮಾಡ್ವನಹಹ ॥ಅ॥ ॥ ೩ ॥ ನೆರೆಪಂಚಬಾಣದಿಂದ । ಮೋಹಾದಿಗಳ। ಪರಮಸಹಾಯದಿಂದ । ವರಜ್ಞಾನ ರತ್ನಾಪಹಾರಿಯನ್ನಿಸುತಲಿ । ಧರೆಯೊಳು ಪ್ರಖ್ಯಾತಿಯಾಗಿಹ ಪುರುಷನು ॥ಅ॥ ॥೪॥ ಧೀರ ಶ್ರೀಗುರುರಂಗನಪಾದದಭಕ್ತಿತೋರದಿರುವ ಮೂಢನ । ನಾರಿಮೋಹವದೆಂಬ ಬಲೆಯೊಳು ಕಟ್ಟಿ । ಚೂರಿಯಿಲ್ಲದೆ ಕೊರಳನುಕೊಯ್ದು ಮೆಟ್ಟಿ॥ಅ॥ ॥ ೫ ॥

ವಿವೇಕ ಬೋಧ

ರಾಗ—ಸಾರಂಗ—ಅಟತಾಳ

೮. ಬಿಡುಬಿಡಿನ್ಯಾತರಜ್ಞಾನ । ನಿನ್ನ । ನಡೆನುಡಿಯೊಂದಾಗದಿಹುದೆ । ಅಜ್ಞಾನ ॥ ಬಿಡುಬಿಡಿನ್ಯಾತರಜ್ಞಾನ ॥ ಪಲ್ಲವಿ ॥ ಗುರುಭಕ್ತಿನೆಲೆಯಾಗಿಲ್ಲ । ನಾನೆ । ಗುರುವೆಂದು ಹಮ್ಮಿಸಿಂದುರಿಯುವೆಯಲ್ಲ । ಕರುಣಶಾಂತಿಯು ಸತ್ಯವಿಲ್ಲ । ಕೆಟ್ಟ ಅರಿವರ್ಗಮದ ಹೆಚ್ಚಿ ಮೊರೆಯುವೆಯಲ್ಲ ॥ ಬಿಡು ॥ ೧॥ ಚದುರನೆಂದೆನಿಸಿಕೊಂಡಿರುವೆ । ದಿವ್ಯ ಪದಮದಂತೊಪ್ಪುವ ಮುಖದಿಶೋಭಿಸುವೆ । ಮಧುರವಾಕ್ಯವನಾಡುತಿರುವೆ । ನಿನ್ನ ಹೃದಯದಿಕತ್ರಿಯನ್ನಿಟ್ಟುಕೊಂಡಿರುವೇ ॥ ಬಿಡು ॥೨॥ ತನುವಿನಾಶೆಯ ಬಿಡಲಿಲ್ಲ । ಹೇಸಿ ಮನದ ಸಂಕಲ್ಪಾಗಳ್ ಬೋಳಾಗಲಿಲ್ಲ। ಅನುಮಾನವನು ಬಿಡಲಿಲ್ಲ। ನಮ್ಮ ಗುರುರಂಗಲಿಂಗನೋಳ್ ಸಮರಸವಿಲ್ಲ ॥ ಬಿಡು ॥೩॥

೯. ಸೀಸ ॥ ಗಿರಿಯ ಚಿನ್ನವಗೈಯ್ಯಲೆಣಿಸಿ ನಾಜುರ್ನಂ ಗರ್ವದಿಂ ಶಿರವಿತ್ತ ಸರಿಚಕ್ರಕೆ । ವರಸಿದ್ಧಿಯಂ ಪಡೆದ ಗೋರಕ್ಷ ಹಮ್ಮಿನಿಂ । ಸ್ತ್ರೀಯ ವಶವಾದನು ಪ್ರಭುಶಾಪದಿಂದ ॥ ವರಶುಕ್ರನಲ್ಲಿದ್ದ ಅಮೃತ ಸಂಜೀವಿನಿ । ವಿದ್ಯೆಗುರುಸುತನಿಂದ ಮುಳುಗಿಹೋಯ್ತು । ವರವಿಕ್ರಮಾರ್ಕೊಂದುಕಣ್ಣಿನಲಿ ನಿದ್ರೆಯು ಒಂದು ಕಣ್ಣಿಂದ ಎಚ್ಚರದೊಳಿದ್ದು ॥

ಗೀತೆ ॥ ವರತ್ರಿಶಂಕನು ಬೇರೆ ಸ್ವರ್ಗದಲಿ ನಿಂತನು ಖ್ಯಾತಿವಿಶ್ವಾಮಿತ್ರಮಹ ಋಷಿಯಹೊಂದಿ । ಅರಿಯಲಿವರೆಲ್ಲ ಮಾಯೆಗೊಳಗಾದರಲ್ಲದೆ । ಪರಮುಕ್ತಿ ಸಾಂಬ್ರಾಜ್ಯವನು ಹೊಂದಲಿಲ್ಲ ॥

೧೦. ಸೀಸಪದ್ಯವು ॥ ಅಣಿಮಾದಿ ಮಹಿಮೆಯಿಂ ಸಿದ್ಧಿ ತೋರಿದರಿಲ್ಲ । ವರ ಕಾಯಪ್ರೋಗಿನಾತಗಿಲ್ಲಮುಕ್ತಿ । ತನ್ನ ಮರಣಸೂಚನೆಯ ಮೊದಲರಿತವಂಗಿಲ್ಲ ।

ವರಕವೀಶ್ವರನಾದರಿಲ್ಲಮುಕ್ತಿ । ಮಣಿಮಂತ್ರ ಔಷಧಿಯ ಶಿದ್ಧಪುರುಷಂಗಿಲ್ಲ । ಗಿರಿ ಗುಹೆಯ ಸೇರಿದವಗಿಲ್ಲ ಮುಕ್ತಿ । ಜನಮೆಚ್ಚುವಂದದಲಿ ಕರ್ಮನಡಿಸಿದರಿಲ್ಲ । ಪೇಳ್ವ ಕಾಲಜ್ಞಾನಿಗಿಲ್ಲ ಮುಕ್ತಿ ॥

ಗೀತೆ ॥ ಶುನಿ ಪಲ್ಲಿ ಪಕ್ಷಿ ಮರಣಾದಿ ಕುರುಹುಗಳಂ । ತೋರ್ಪುವದರಿಂದೇನು ಫಲಹೆಮ್ಮನಳಿದು । ಜನನಹರ ಗುರುಮುಖದಿ ತಾ ತನ್ನ ನಿಜವ । ನರಿವ ಉನ್ನತ ಮಹಿಮೆಗಿನ್ನತಿಶಯವಿದಿಲ್ಲ ।

ರಾಗ—ನಾದನಾಮಕ್ರಿಯೆ—ರೂಪಕತಾಳ

೧೧. ಜಾಗ್ರದಲ್ಲಿ ಜಾಗ್ರನಾಗಿ ಗುರುವಿನಂಘ್ರಿಯಾ ಹೊಂದು । ಶೀಘ್ರದಿಂದ ದಾಂಟಿಸುವನು ಭವದಶರಧಿಯಾ ॥ ಪ ॥ ಬೂರುಗಾದಫಲವ ಗಿಣಿಯು । ಆರು ಮಾಸವೂ ಕಾದು । ಹಾರಿಪೋದುದಿನಿತು ಸಾರವರಿಯದಾಪರಿ । ಘೋರಸಂಸಾರ ವೃಕ್ಷದ । ಫಲವು । ನೂರುವರುಷ ಕಾಯ್ದರಿಲ್ಲವೆಂಬುದರಿತುಕೊ ॥ ಜಾ ॥ ೧ ॥ ಶರಧಿ ಅಲೆಗಳಡಗಿದಾಗ ಸ್ನಾನಗೈಯ್ಯುವೆ । ನೆಂದು ಮರುಳನೋರ್ವ ಕಾಯ್ದಪರಿ ಸಂಸಾರ ವೆಂಬುವ । ಶರಧಿಯಲ್ಲಿ ಪುತ್ರಮಿತ್ರ ಗೋತ್ರಬಾಂಧವ । ರೆಂಬತೆರೆಗಳುಡುಗಿದಾಗ ಶಿವನ ಭಜಿಪೆನೆನ್ನದೆ ॥ ಜಾ ॥ ೨ ॥ ಕೋಟಗೊಂದುಮಾತು ಪೇಳ್ವೆ ಜಗವಿದೆಲ್ಲವು ಮಿಥ್ಯೆ । ಬೂಟತಿದನು ಸ್ವಪ್ನದಂತೆಂದರಿತು ನಿನ್ನಯ । ದೃಷ್ಟಿಯೊಳಗೆ ಗುರುಮಹಾ ಲಿಂಗರಂಗನ ಕಂಡು । ನಿಷ್ಟೆಯಿಂದ ಭಜಿಸಿ ನಿತ್ಯಮುಕ್ತನಾಗಲೋ ॥ ಜಾ ॥ ೩ ॥

೧೨. ಕಂದ ॥ ಅಮೃತತ್ವವುಬೇಕೆಂದೊಡೆ । ಅಮೃತಸಮಾನ ಶಮೆ ದಮೆ ಶಾಂತಿಯನಾರ್ಜಿಸು॥ ಅಮೃತೇಶನ ಸತ್ಕೃಪೆಯಿಂ । ದಮೃತತ್ವವು ಪ್ರಾಪ್ತಿಯಪ್ಪುದು ಸತ್ಯಂಸತ್ಯಂ ॥

೧೩. ಕಂದ ॥ ಪುರುಷನ ದೇಹಕೆ ರೋಗವು । ಜರೆ ಮರಣಗಳಗಲದಲೆ ಕಾದು ಕೊಂಡಿರುವದರಿಂ ॥ ಜರೆಯಾವರಿಸುವ ಪೂರ್ವದಿ । ವರಮುಕ್ತಿಂಗೆತ್ನಗೈವನೆ ಉತ್ತಮನೆನಿಪಂ ॥

೧೪. ಕಂದ ॥ ಮರಣ ಸಮೀಪಿಸಿದಾಗಳ್ । ನರೆ ಮುಕ್ತಿಯಪಡೆವೆನೆನಲು ಉರಿಯುವ ಮನೆಯ ॥ ತ್ವರಿತದಿ ಭಾವಿಯ ತೋಡಿಸಿ । ವರಜಲದಿಂ ತಣಿಪೆನೆಂಬುವ ಮೂರ್ಖನ ಸಾಮ್ಯಂ ॥

೧೫. ಕಂದ ॥ ಧರೆಯೊಳು ಯೌವ್ವನಕಾಲದಿ । ವರಧನವಾರ್ಜಿಸಲು ಯತ್ನಂ ಗೈಯ್ಯುವ ಚಂದದಿ ॥ ಮರಿಯದೆಯೌವನಕಾಲದಿ । ವರಮುಕ್ತಿಂಗೆ ಯತ್ನಗೈಯ್ವನೆ ಜಾಣನು ಜಗದೋಳ್ ॥

೧೬. ಗೀತೆ ॥ ಬಹುಜನ್ಮ ಸುಕೃತಿಮಹ ಪರಮಪುರುಷ । ವಿಹಿತಗುರುವಂ ಕಂಡಕ್ಷಣಸಾತಸಿಂದ । ಮಹದಾದಿ ತತ್ವಾರ್ಥವಂ ಪಡೆದು ಸುಜ್ಞಾನಿ । ಸಹವಾಸದಿಂ ಮುಕ್ತಿಯನು ಪಡೆವ ಕಡೆಗೆ ॥

೧೭. ಗೀತೆ ॥ ಬಹುಜನ್ಮದುಷ್ಕೃತದ ಪಾಪಿ ಪ್ರತ್ಯಕ್ಷ। ವಿಹಿತಗುರುವಂ ಕಂಡು ಕಾಣದಂಧಕನಾಗಿ । ವಿಹಿತಗುರುವಂ ಹೊಂದಬೇಕು ಬೇಕೆನ್ನುತಲೆ। ಮಹಿಯೊಳಜ್ಞರಹೊಂದಿ ಪ್ರಾಣಪಬಿಡುವ ಕಡೆಗೆ ॥

ರಾಗ—ನಾದನಾಮಕ್ರಿಯೆ—ಆದಿತಾಳ

೧೮. ತಿಳಿದು ಭಕ್ತಿಮಾಡು ಗುರುಪಾದದಲ್ಲಿ । ಮನಸಿನಲ್ಲಿ । ಬಲವಂತ ಮಾಘಸ್ನಾನವಲ್ಲಾ । ಕೇಳೊ ಸೊಲ್ಲ ॥ ಪ ॥ ಕೋಪತಾಪದಿಂದ ಸತ್ಯಜ್ಞಾನನಾಶಾ। ಮಾಯಾಪಾಶ । ತಾಪಸೋತ್ತಮರ ಸೇವೆ ಕ್ಲೇಶನಾಶಾ । ಭವನಾಶ ॥ ತಿಳಿ ॥ ೧ ॥ ಆಸತ್ರಯದಿಂದ ನೀನು ಘಾಶಿಯಾಗುವೆ । ಮೋಸಹೋಗುವೇ । ಈಶನಲ್ಲಿ ಆಶೆಯಿಡು ಹೇಶಿಜೀವವೇ । ಮುಕ್ತನಾಗುವೆ ॥ ತಿಳಿ ॥೨॥ ತನುತ್ರಯ ಬೆಳಗುವ ಆತ್ಮನೊಬ್ಬನೂ ಸತ್ಯವೆಂದೂ । ಕನಸಿನಂತೆ ತೋರ್ಪ ಜಗ ಮಿಥ್ಯವೆಂದೂ । ಮನಸಂದೂ ॥ ತಿಳಿ ॥ ೩ ॥ ಗುರುದೇವ ಸರ್ವತತ್ವಬೋಧಕರ್ತಾ। ಕೇಳೊ ಮರ್ತ್ಯಾ ಗುರುಪಾದ।ಹೊಂದದಿರೆ ಜನ್ಮವ್ಯರ್ಥಾ । ಇದುಸತ್ಯಾ ॥ ತಿಳಿ ॥ ೪ ॥ ಸಲೆಗುರುಮಹಲಿಂಗರಂಗ ಬಂದಾ ದಯದಿಂದಾ । ಕಳೆಯುವನು ಭಕುತರ ಭವಬಂಧಾ । ಕ್ರಮದಿಂದ ॥ತಿಳಿ॥

ತನುವಶಾಶ್ವತತ್ವವು

ರಾಗ—ಸಾಳಂಗ—ಅಟತಾಳ

೧೯. ನಾಳೆಯೆಂಬನ ಮನೆ ಹಾಳು। ನೀನು । ನಾಳೆತನಕಿರುವದು ನಿಜವೇನು ಹೇಳು । ನಾಳೆಯೆಂಬನ ಮನೆ ಹಾಳು ॥ ಪ ॥ ಕ್ಷಣಭಂಗುರವುಯೆನ್ನಿಸಿದೆ । ನಿನ್ನ । ತನುವು ಆಚಂದ್ರಾರ್ಕವಾಗಿ ನಿಲ್ಲುವುದೇ॥ ದಿನವು ರೋಗದಿ ಸಾಯುತ್ತಿದೆ । ಯಿದನು ಮನದೊಳಗರಿತು ಶೀಘ್ರದಿ ಮುಕ್ತನಾಗದೆ ॥ ನಾಳೆ ॥ ೧ ॥ ಹಾಳುವಾದ ಮಾಡ ಬಲ್ಲೆ । ನಿನ್ನ ಮೂಲತತ್ವ ಕಿವಿಯೊಲೊಲ್ಲೆ । ಖೂಳ ಕುಹಕ ವಿದ್ಯೆ ಬಲ್ಲೆ ॥ ಎಷ್ಟು ಹೇಳಲು ಆಶೆಮೋಹವಬಿಡಲೊಲ್ಲೆ ॥ ನಾಳೆ ॥೨॥ ಕೊಡಬೇಕಾದರೆ ನಾಳೆಯೆಂಬೆ ತಟ್ಟ ಇಡಬೇಕಾದರೆಯನ್ನ । ದೀಗೆಲೆಯೆಂಬೆ । ಮಡದಿಮಕ್ಕಳಗಿರಲೆಂಬೆ । ನಾಳೆ । ಜಡಿಯುವ ಯಮಭಟರುಗಳಿಗೇನೆಂಬೆ॥ ನಾಳೆ ॥೩॥ ಬರುವ ಕಾಲದಿ ಬರಿಗೈಯ್ಯಿ । ನೀನು ಹೊರಡುವ ಕಾಲದೊಳಗೆ ಬರಿಗೈಯ್ಯಿ । ಪರರನ್ನು ಜರಿಯುವ ಬಾಯಿ । ಇಹವು ಪರಕಾಣದಾಡುವ ತಲೆಹುಳಿತನಾಯಿ । ನಾಳೆ ॥ ೪ ॥ ವಿರತಿಸದ್ಭಕ್ತಿಯ ತಾಳು ಕೆಟ್ಟ ದುರಿತದಿ ಕುದಿಯುವದ್ಯಾತರ ಬಾಳು । ಸ್ಥಿರ ಮುಕ್ತಿಕಾಂತೆಯಸಾಳು । ನಮ್ಮ । ಗುರುಮಹಲಿಂಗನ ವಚನವ ಕೇಳು ॥ ನಾಳೆ ॥ ೫ ॥

ರಾಗ—ಆದಿತಾಳ

೨೦. ಕೆಡುವಾದುಚಿತವೇ । ಮೃಡನಡಿಯಾಪಿಡಿಯದೇ । ಕೆಡುವಾದುಚಿತವೇ ॥ಪ॥ ಒಡಲೊಳುಭವನಡಿನೆನೆಯುತಲೀ । ಭವಕಡಲನು ದಾಂಟವೆ ಮೂಢತೆ

ಯಿಂದಲಿ ‖ ಅ-ಪ‖ ಸ್ಥಿರವಿಲ್ಲಾತನುವಿದೂ । ಮರಳಿ ತಾ ಬಾರದೂ । ಅರಿತರೆ ಈ ಜನ್ಮದೊಳು ಮುಕ್ತಿಸಾಧನ । ಮರತರೆ ಘನನರಕಾರ್ಣವಶಾಸನ ‖ ಕೆಡು ‖ ೧ ‖ ಮಾನಿನೀ ಭ್ರಮೆಯಲೀ ಶ್ವಾನಾನಂದಾದಲೀ । ಓಣಿಓಣಿಯೊಳಾಡಿಕೆಡುವೆ ನೀಮತಿಗೆಟ್ಟು । ಮೀನು ಗಾಣಕೆ ಸಿಕ್ಕಿ ಪ್ರಾಣಬಿಟ್ಟಂತೆ ‖ ಕೆಡು ‖ ೨ ‖ ಮಾನಾಭಿಮಾನದಿ ಜ್ಞಾನಾವಾನೀಗಿದಿ । ಮಾನುಮಾಣಲೊ ನಿನ್ನ ಜಾಣತನಂಗಳ । ಜ್ಞಾನಿಗಳೊಡನಾಡಿ ನೀಗೊ ದುರ್ಗುಣಗಳ ‖ ಕೆಡು ‖ ೩ ‖ ನಾನೆಂಬಾ ಗರ್ವದಿ ನೀನುಬ್ಬೀವುರಿಯದೇ ಧ್ಯಾನ । ಜಪವ ಗುರುಭಕುತಿಯ ಮಾಡುತ । ನ್ಯೂನವಿಲ್ಲದ ಪದ ಸೇರಿಕೊ ನೋಡಿ‖ ಕೆಡು ‖ ೪ ‖ ವಾಸನಾದೂರನೂ । ಭಾಸುರಾತೇಜನು । ಪಾಶಛೇದಕ ಪರಮೇಶನು ಯೆನಿಸಿದ ದೇಶಿಕಮಹಲಿಂಗನರಿಯದೆ ಬರಿದೆ ‖ ಕೆಡುವಾದುಚಿತವೆ ‖ ೫ ‖

ರಾಗ—ಕಲ್ಯಾಣಿ—ಅಟತಾಳ

೨೧. ಕೊಬ್ಬಿನೀಕೆಡಬ್ಯಾಡವೋ । ಮತ್ತೊಬ್ಬರನುಬ್ಬಿ ಆಡಲಿಬ್ಯಾಡವೋ ‖ಪ‖ ಮಬ್ಬು ಕಣ್ಣಿಗೆ ಮುಚ್ಚಿ ಮರೆತರೆ ಶಿವಧ್ಯಾನ ‖ ಹೆಬ್ಬುಲಿಯಂತೆ ನುಂಗುವ ಯಮನವನೆ ‖ಅ-ಪ‖ ಕಾಸುವೀಸಂಗಳನು । ಕೂಡಿಸಿ ಧನದ।ರಾಸಿಯ ಮಾಡಿಮಾಡಿ। ಆಶೆಯಿಂದರೆವೀಸ ದಾನಮಾಡದ ಕಾಲ । ಪಾಶಕ್ಕೆ ಗುರಿಯಾಗಿ ಕೆಟ್ಟೆಲೋ ಪ್ರಾಣಿ ‖ ಕೊಬ್ಬಿ ‖ ೧ ‖ ಎಂಟು ಮಂದಿಗಳ ಕಟ್ಟಿ ಎಚ್ಚರದಿಂದ । ತುಂಟರೈವರನು ಕಟ್ಟಿ ನೆಂಟರಿಷ್ಟ್ಯಾರಾಭಿಮಾನಾವದೂರಿಟ್ಟು । ಭಂಟನಾಗದೆ ಶಿವ ಶರಣಾರಪಾದದಿ ‖ ಕೊಬ್ಬಿ ‖ ೨ ‖ ನಿನ್ನೊಳಗಡಗಿರುವ । ಗರ್ವವು ಕ್ರೋಧವಿನ್ನು ಮತ್ಸರವನೀಗಿ । ಉನ್ನತಶಾಂತಿಯಪಡೆಯದೆ ಮನದೊಳ । ಗನ್ಯರ ಗುಣದೋಷವೆನಿಸಿ ನೀ ಸುಮ್ಮನೆ‖ ಕೊಬ್ಬಿ ‖ ೩ ‖ ಪರಮಗುರುಮಹಲಿಂಗರಂಗನ । ಚರಣ ನಂಬಿಹನೊಬ್ಬಗಲ್ಲದೆ । ಸದಮಲವಿರತಿಯಿಂದ । ಎಡೆ ಏರಿ ತುಳಿದು ಕಾಡುವ ಗುಣಗಳು ಮೂರ । ಬದಿಯಬೇಕೆಲೆ ಮೋಹಭಯಲಜ್ಜೆ ಮೂರು ‖ ಕೊಬ್ಬಿ ‖ ೪ ‖ ಸಾಧಿಸುತೀಪರಿಯ ನಿನ್ನೊಳು ನೀನೆ । ಛೇದಿಸಿ ಮದಗರ್ವವ । ವೇದಪುರುಷ ಗುರು ಮಹಲಿಂಗರಂಗನ । ಪಾದಪಲ್ಲವ ಪಿಡಿ ಸುಖವಪ್ಪುದೇನೋ ‖ ಕೊಬ್ಬಿ ‖ ೫ ‖

ಗುರುಬೋಧಾ ನಿಧಾನವು

ರಾಗ—ಷಂತುವರಾಳಿ—ಅಟತಾಳ

೨೨. ಕೇಳಿದಾಗಲೆ ಹೇಳಬಾರದೂ । ಪರಬ್ರಹ್ಮವಿದ್ಯವ । ಕೇಳಿದಾಗಲೆ ಹೇಳಬಾರದೂ ‖ ಪ ‖ ಕೇಳಿದಾಗಲೆ ಹೇಳಬಾರದು । ಹೇಳಿದಾ ಪರಿಯಿರದೆ ಗುರುವಿಗೆ । ಹೇಳುವೆನು ತಿರುಮಂತ್ರವೆಂಬುವ । ಖೂಳನಾದಧಿಕ ಪ್ರಸಂಗಿಗೆ ‖ ಕೇಳಿ ‖ ಅ-ಪ ‖ ಗುರುವರನ ಭಕ್ತಿಯಲಿ ಪೂಜಿಸದೆ । ತನುಮನವು ಧನವನು । ಗುರುವಿನಡಿ ಕಮಲಕ್ಕೆ

ಒಪ್ಪಿಸದೆ॥ ನಿರುತಶಾಸ್ತ್ರಾಗಮಗಳೋದಿ । ಹಿರಿಯರನು ನಿಂದಿಸುತ ಗರ್ವದಿ॥ ಬಿರಿಯಮಾತಿನ ಬಣಬೆಪೊಟ್ಟುತ । ಅರಿತು ಅರಿಯದ ನರಕದ್ದುಳುವಿಗೆ॥ ಕೇಳಿ॥೧॥ ಆರುವರ್ಗದಿ ಕುದಿದು ಸಾಯುತ್ತ ಹಗಲಿರುಳು ಬಳಲುತ । ಮೂರು ತಾಪದಿ ಮುಳುಗಿ ತೇಲುತ್ತ । ನಾರಿಮಕ್ಕಳ ಮೋಹವಡಗದೆ॥ ಸೇರುವೆನು ನಿಜ ಮುಕ್ತಿಯೆನುತಲಿ । ದೂರುತನ್ಯರ ತನ್ನ ಗುಣವಿ । ಸ್ತಾರದಿಂದಲಿ ಹೊಗಳಿಕೊಂಬಗೆ॥ ಕೇಳಿ॥೨॥ ಈಶ ನಡಿಯಲಿ ಭಕ್ತಿಯಿಲ್ಲದಲೆ । ದುರ್ಮಾರ್ಗತನದಲಿ । ರೋಷ ಹೆಚ್ಚುವ ಶಾಂತಿಯಿಲ್ಲ ವಲೆ । ದೂಷಿಸುತ ಮಹ ಸಾಧು ನಡೆಗಳ । ಮೋಸ ಹಾದರ ಕಳವು ಪರಧನ । ದಾಶೆ ಯಲಿ ಮನ ಮುಳುಗಿ ಜ್ಞಾನದ ದೇಶವರಿಯದ ಹೇಶಿಮೂಳಗೆ ॥ ಕೇಳಿ॥೩॥ ಜ್ಞಾನಗುರುವೆಂತೆಂದು ನಂಬುತ ಪಂನೆರಡು ವರುಷವು ನ್ಯೂನವಿಲ್ಲದೆ ಸೇವೆ ಗೈಯುತ॥ ಏನಹೇಳಲು ನಂಬಿಕಿಲ್ಲದೆ । ಹೀನವಿಷಯದಿ ಸಿಲ್ಕಿಯನುದಿನ । ಗಾಣ ದೆತ್ತಿನಪರಿಯ ತಿರುಗುತ । ಜ್ಞಾನಹೊಂದದ ಮೂರ್ಖ ಮನುಜಗೆ ಕೇಳಿ॥೪॥ ಧರೆಯಭೋಗವು ರೋಗವೆಂದೆನುತ । ತನ್ನೊಳಗೆ ಅರಿತು । ಸ್ಥಿತಿ ಮುಕ್ತಿಯಹೊಂದ ಬೇಕೆನುತ ॥ ಸದೆಬಡಿಯಲಿಬೇಕು । ವಾಸನೆ ಮೂರ । ಪರಮಪಾತಕರಿಂಗೆ ಬ್ರಹ್ಮವ । ನಿರುತ ಬೋಧಿಸೆ ಹಬ್ಬವಾದದರಿಂ॥ ಕೇಳಿದಾಗಲೆ ॥೫॥

ರಾಗ—ಪಂತುವರಾಳಿ—ಅಟತಾಳ

೨೩. ಕೇಳಿದಾಗಲೆ ಹೇಳ್ವಸದ್ಗುರುವು । ಸುಜ್ಞಾನಮಾರ್ಗವ ಕೇಳಿದಾಗಲೆ ಹೇಳ್ವ ಸದ್ಗುರುವು ॥ಪ॥ ಕೇಳಿದಾಗಲೆ ಹೇಳ್ವ ಶಿಷ್ಯಗೆ । ಲೀಲೆಯಿಂದಧಿಕಾರವರಿತು । ಕೇಳಿದವರಿಗೆ ಹೇಳ್ವದಲ್ಲದೆ । ಪೇಳ್ವದಿನ್ನ್ಯಾರಿಂಗೆ ಜಗದೊಳು ॥ ಕೇಳಿದಾಗಲೆ ಅ-ಪ॥ ತನುವು ಧನ ಮನವಿತ್ತು ಗುರುವರಗೆ । ಅಧ್ಯಾತ್ಮ ಶ್ರವಣದಿ ಜನಿಸೆ ಬ್ರಹ್ಮ ಜ್ಞಾನ ಮನದೊಳಗೆ । ಯೆನಿತು ಅಭಿಮಾನಿಡದೆ ರಾಜ್ಯದಿ । ತೃಣ ಸಮಾನದಿ ಕಂಡು ಧರಣಿಯ । ಘನದಿ ಆಳಿದ ಜನಕನಂದದಿ । ಮನವು ನಿಲಿಸುವ ಪ್ರೌಢನಾದರೆ ॥ಕೇಳಿ॥ ಬಾಲತನದಲಿ ಬ್ರಹ್ಮ ಬೋಧಿಸಿದ । ಪ್ರಣವಾಕ್ಷರಕ್ಕೆ ವಿ । ಶಾಲ ಅರ್ಥವ ತಾನೆ ಬೋಧಿಸಿದ । ಬಾಲಕಜ್ಞಾನಕ್ಕೆ ಹರ್ಷವತಾಳಿ ಪರಶಿವ ನಿಜವನರುಹಲು । ಕೇಳಿ ಮುಕ್ತಿಯ ಪಡೆದ ಗುಹನಂ । ತ್ಹೇಳಿಕೇಳ್ವಧಿಕಾರಿಯಾದೊಡೆ ॥ ಕೇಳಿ॥೨॥ ಧರೆ ಯೊಳುತ್ತಮವ್ಯಾಸ ಮುನಿವರನ । ಪ್ರಿಯಪುತ್ರನೆನ್ನಿಸಿ । ಪರಮಶಾಂತಿಯೊಳ್ಹೊಂದಿ ಪರಶಿವನ । ತರುಣಿಮೋಹದ ಬಲೆಗೆ ಸಿಲ್ಕದೆ । ಉರುತಪವತಾಗೈದು ಜ್ಞಾನವ । ಧರಿಸಿ ಮುಕ್ತಿಯ ಪಡೆದ ಶುಕಮುನಿ । ಪರಿಯವಿರತಿಯೊಳಿರುವನಾದರೆ ॥ ಕೇಳಿ॥ ॥೩॥ ತೊರೆದು ತನ್ನ ಮಗನೆಂಬ ಭ್ರಾಂತಿಯನು । ಕಪಿಲಮುದಿಯಲಿ । ಇರಿಸಿ ತನ್ನ ಗುರುವೆಂಬ ಭಾವವನು । ಅರಿತು ಯೋಗವು ಪರಮ ಜ್ಞಾನವ ನಿರುತ ಸರ್ವವು । ಬ್ರಹ್ಮವೆಂಬುವ । ಅರಿವು ಮರೆಯದ ದೇವಹೂತಿಯು । ಪರಿಯನಿಶ್ಚಲನಾಗ್ವನಾಡದೆ॥ ಕೇಳಿ॥ ಧರೆಯೊಳಾರಾದೊಡೆಯುಮುಕ್ತಿಯನು । ಹೊಂದುವೆಯೆನ್ನುತ । ತರಿದು

ಮದಗುಣ ಮೋಹ ವ್ಯಸನವನು । ಪರಮಗುರುಮಹಲಿಂಗರಂಗನ । ಚರಣಸೇವೆ ಯೊಳಿರಲು ಕರ್ಮವು । ಹರಿದು ನಿರ್ಮಲವಾದ ಮನವನು । ಪರಿಕಿಸಲು ಕರ್ಪೂರ ವಾಗಿರು ॥ ಕೇಳಿದಾಗಲೆ ಹೇಳ್ವ ಸದ್ಗುರುವು ॥ ೫ ॥

ರಾಗ—ಕೇತಾರ—ತಾಳ—ದ್ವಿಪದೆ

೨೪. ನಾನು ನಾನೆಂದು ಗರ್ವದಲಿ ಮೆರೆಯದೇ । ನೀನು ನೀನೆಂದು ಶಿರ ಬಾಗೂ ಗುರುವರಗೆ ॥ ಪ ॥ ನಾನೆಸುತ ರಾವಣನು ಅಸುವಳಿದ ಅವನನುಜ । ನೀ ನೆನುತ ಲಂಕೆಯೊಳು ಸ್ಥಿರಜೀವಿಯಾದ । ನಾನೆಂದ ಕೌರವನ ಮನೆಗೆ ಹೋದನೇ । ಕೃಷ್ಣ ನೀನೆಂದು ನೆನೆದ ವಿದುರನ ಮನೆಯ ಪಾಲುಂಡ॥ನಾನು ॥೧॥ ನಾನೆಂದು ಶಿಶು ಪಾಲ ಶಿರವಿತ್ತ ಚಕ್ರಕ್ಕೆ । ನೀನೆಂದ ದ್ರೌಪದಿಯಮಾನಕಾಯ್ದನು ಹರಿಯು।ನಾನೆಂದ ದೈತ್ಯರಿಂಗಾಯ್ತುವರ ಪಡೆಹಾಳು । ನೀನೆಂದದೇವ್ತೆಗಳಿಗಾಯ್ತು ಸ್ಥಿರಬಾಳು ॥ನಾನು॥ ತವೆ ಸಜ್ಜೆ ಶಿರಬಾಗದಲೆ ಬೆಳೆದು ಲೋಕದೊಳು । ನವಧಾನ್ಯದೊಳು ಸೇರದ್ಹೋರ ಗಾಯ್ತು ನೋಡು । ಭುವನದೊಳು ಶಿರಬಾಗಿ ಬೆಳೆದ ಭತ್ತವು ನಮ್ಮ । ಶಿವನ ನೈವೇದ್ಯಕ್ಕೆ ಯೋಗ್ಯವಾದುದನರಿತು ॥ ನಾನು ॥ ೩ ॥ ದೇಶಿಕೇಂದ್ರನೆ ನನಗೆ ಮುಕ್ತಿ ಯೆಂತಾಗುವುದೆನೆ । ನಾಸತ್ತರಾಗುವುದೆಂದ ಗುರುವರನ । ಆಶಯವನರಿಹುದೆಲೆ ಮೂರ್ಖ ಶಿಷ್ಯನು ಒಮ್ಮೆ । ಮೋಸದಿಂ ಗುರುವಧೆಯಗೈದನಿದನರಿತು ॥ ನಾನು ॥ ೪ ॥ ನಾನೆ ಪ್ರಾಜ್ಞನುಯೆಂಬ ಗರ್ವಗಿರಿಯನು ಏರಿ । ಹೀನನಾಗಲು ಬೇಡವೆಲೊ ಮಾನವ । ಮಾನಾಭಿಮಾನ ಸುಖದುಃಖವೆಲ್ಲವನು । ಜ್ಞಾನಿ ಗುರುಮಹಲಿಂಗಗೊಪ್ಪಿಸಲು ಸುಖಿ ಯಪ್ಪೆ ॥ ನಾನು ನಾನೆಂದು ಗರ್ವದಲಿ ಮೆರೆಯದೇ ॥೫॥

ರಾಗ—ಮಾರವಿ—ಆದಿತಾಳ

೨೫. ಮುಳುಗಿ ಹೋದೆಯಲ್ಲೋ ಭವದಲಿ । ಮುಳುಗಿ ಹೋದೆಯಲ್ಲೋ ॥ಪ॥ ತಿಳಿಯದೆ ಜ್ಞಾನವ ಗುರುಮುಖದಿಂದಲಿ । ಹೊಲೆತನುವಾ ನಂಬಿ ಮೋಹಕೆ ಶಿಲುಕಿದಮನವನು ತೆಗಿಯದೆ ನರಕದ । ಹುಳುವಿನ ಪರಿ ಸಂಸಾರದ ಕೂಪದಿ॥ಮುಳು ॥೧॥ ಓದಿತರ್ಕಶಾಸ್ತ್ರ । ತತ್ವದ । ಹಾದಿ ತಿಳಿಯದಿರಲು । ಸಾಧಿಸಿ ಶಿವರಾಮೆನುತ ಗಂಭೀರದಿ । ಓದಿದ ಗಿಣಿ ಮಲ ತಿಂದಂತಿಹುದು ॥ ಮುಳು ॥ ೨ ॥ ಪಾಯಸವನು ಕೊಡಲೂ । ತಿನ್ನದ ನಾಯಿಕುನ್ನಿಯಂತೆ।ರಾಯ ಶ್ರೀಗುರುಮಹಲಿಂಗನೆ ನಿನ್ನಯ ಕಾಯದಿ । ಇರುವದ ಕಾಣದೆ ವ್ಯರ್ಥದಿ ॥ ಮುಳುಗಿ ಹೋದೆಯಲ್ಲೋ ॥ ೨ ॥

ಜಾತಿಸೂತಕ ಮಿಥ್ಯಾತ್ವ

ಶ್ಲೋ ॥ ಬ್ರಹ್ಮಬೀಜಮಿದಂ ಸರ್ವಂ ನಾನಾಯೋನಿಸಮುದ್ಭವಂ ॥ ಅಸ್ಯ ಜಾತಿ ವಿಜಾತೀನಾಂ । ವರ್ಣಾನಾಂ ಕಿಂ ಪ್ರಯೋಜನಂ ॥

ರಾಗ—ಪಂತುವರಾಳಿ—ಆದಿತಾಳ

೨೬. ಜಾತಿ ಸೂತಕವೆಂಬ ಮಾತಿಲ್ಲ । ಸುಜ್ಞಾನಮಾರ್ಗದಿ।ಜಾತಿಕರ್ಮಾದಿಗಳು ಮೊದಲಿಲ್ಲ ॥ಪ॥ ಜಾತಿಗೋತ್ರಕ್ಕೆ ಬದ್ಧರಾಗುತ । ಆತ್ಮನರಿಯದ ಕರ್ಮಿಗಲ್ಲದೆ। ಜಾತಿಕಲ್ಪನೆಯಳಿದು ಆತ್ಮ । ಜ್ಯೋತಿಯಲಿ ಮುಳುಗಿದ ಮಹಾತ್ಮಗೆ ॥ಅ॥ ಬ್ರಹ್ಮ ಬೀಜವೆ ಸರ್ವಯೋನಿಯೊಳು । ಪುಟ್ಟಿರುವುದೆಂಬುವ । ಮರ್ಮವರಿಯದ ಮೂಢ ಜನರುಗಳು ॥ ನಮ್ಮ ಕುಲಮೇಲೆನುತ ವಂದಿಸಿ । ನಿಮ್ಮ ಕುಲಕೀಳೆನುತ ನಿಂದಿಸಿ । ಹೆಮ್ಮೆಮದಮತ್ಸರದಿ ಸಾಯುತ । ಒಮ್ಮೆ ನರಕಕೆ ಯಿಳಿವರಲ್ಲದೆ ॥ ಜಾತಿ ॥೧॥ ಇಲ್ಲ ಜಾತಿಯು ಸ್ವರ್ಗನರಕದೊಳು । ತ್ರೈಮೂರ್ತಿಗಳಿಗು । ಇಲ್ಲಜಾತಿಯು ತೀರ್ಥ ಕ್ಷೇತ್ರದೊಳು ॥ ಯೆಲ್ಲ ಬ್ರಹ್ಮಂಬರುವುಯಿಲ್ಲದೆ । ಯಿಲ್ಲದುಂಟೆಂತೆಂಬಂಕಂಗಳು । ನಿಲ್ಲದಿಹ ಘಾತಕಗಳ ನಡೆಯೊಂ । ದಲ್ಲದಲೆ ಸುಜ್ಞಾನಪಥದೊಳು ॥ ಜಾತಿ ॥ ೨ ॥ ಅನ್ನಮಯದೀಕಾಯವೆಂಬುದು । ಸರ್ವರಿಗು ವೊಂದೇ । ಭಿನ್ನವಿಲ್ಲದೆ ತೋರಿಯಡಗುವದು ॥ ಮುನ್ನಲೇ ಅಂಡಜ ಸ್ವೇದಜ । ಉತ್ಪತುದ್ಭಿಜವಂಜರಾಯುಜ । ವೆನ್ನುತೀಪರಿ ನಾಲ್ಕು ಜಾತಿಯ । ನನ್ನಿಯಿಂದಲಿಸೃಜಿಸಿಯಿರಲು ॥ ಜಾತಿ ॥ ೩ ॥ ಜಾತಿ ವರ್ಣವು ಗೋತ್ರಷಣ್ಮತವು । ಅಜಸೃಷ್ಟಿಯಲ್ಲವು । ಖ್ಯಾತಿಜೀವಿಗಳಿಂದ ನಿರ್ಮಿತವು॥ ಜಾತಿ ಅಜನಿರ್ಮಿತವದಾದೊಡೆ । ಮಾತಿನಿಂದಲಿ ಕೆಡದು ಜಗಪ್ರ।ಖ್ಯಾತಿಯಾಗಿಯೆ ಮನುಜ ನಿರ್ಮಿತ । ಜಾತಿಗೋತ್ರವು ಕೆಡುವುದದರಿಂ ॥ ಜಾತಿ ॥ ೪ ॥ ಕರದಿ ಕುಂಭವು ಕುಂಭದೊಳು ಕ್ಷೀರ । ಪ್ರತ್ಯೇಕವಾಗಿ ಇರುವ ಪರಿಯಾತ್ಮನಿಗೆ ಬೇರಾಗಿ । ಶರೀರ ಕುಲವರ್ಣಾಶ್ರಮಂಗಳು।ಬರಿದೆ ತೋರಡಗುವವು ಅಲ್ಲದೆ । ಪರಮಗುರುಮಹಲಿಂಗರಂಗನೋ । ಳ್ಪರಿಕಿಸಲು ಲವಮಾತ್ರವಿಲ್ಲವು ॥ ಜಾತಿಸೂತಕವೆಂಬ ॥ ೫ ॥

ಬ್ರಾಹ್ಮಣ ಲಕ್ಷಣ

೨೭. ಸೀಸಪದ್ಯ ॥ ಬೂರಿಬ್ರಹ್ಮದಿ ಚಿತ್ತ ಮುಳುಗಿ ನಿರ್ಮಲನಾದ ಪೂರ್ಣ ಬ್ರಹ್ಮಜ್ಞಾನಿ ಬ್ರಾಹ್ಮಣೆನಿಪಂ । ಕ್ರೂರರಾಗದ್ವೇಷವೆಂಬ ಶತೃಗಳನ್ನು ಜ್ಞಾನಖಡ್ಗದಿ ಕೊಲ್ವ ಕ್ಷತ್ರಿಯನಿಪಂ । ನೂರೆಂಟು ವ್ರತಕರ್ಮ ಸ್ವರ್ಗಕಾಂಕ್ಷಿತನಾದ ಶುದ್ಧ ಕರ್ಮಠ ತಾನೆ ವೈಶ್ಯನೆನಿಪಂ । ನೂರುವತ್ಸರ ಬಾಳಿ ಹಿರಿಯನೆನ್ನಿಸಿ ಜಗದಿ ತನ್ನನರಿಯದ ಮೂಢ ಶೂದ್ರನೆನಿಪಂ ॥

ಗೀತೆ ॥ ಧಾರುಣಿಯೊಳತಿಕೋಪಿಜಾವ ಯತಿ ಶುದ್ಧ । ಚಂಡಾಲನೆದೊಯ್ದು ಯಮ ತನ್ನ ಪುರದ । ಊರಹೊರಗೇರಿಯಲಿ ಹಾಕುವನು ಎಂದು । ಸರ್ವ ಶೃತಿ ಕರವೆತ್ತಿ ಸಾರುತ್ತಿಹವೂ ॥

೨೮. ಸೀಸಪದ್ಯ ॥ ಮುನ್ನ ಪದ್ಮಜಸೃಷ್ಟಿಯಿಂದ ಸುಂದರಮಾದ ಬ್ರಹ್ಮ ವಿಗ್ರಹವೆನಿಪ ಕಾಯದಲ್ಲಿ॥ಜ್ಞಾನನಿಂದ್ರಿಯವೈದರಿಂದರಾಜಿಪಮುಖಂ ಬ್ರಾಹ್ಮಣೆನ್ನಿಸಿ

ವೇದ ಪಠಿಸುತ್ತಲಿರ್ಕುಂ । ಭಿನ್ನವಿಲ್ಲದೆ ಬಾಹು ರಾಜಾಭಿದಾನದಿಂದೇಹರಾಜ್ಯವ ರಕ್ಷಿಸುತ್ತಲಿರ್ಕುಂ ॥ ನನ್ನಿಯಿಂ ಸಂಚಾರ ಕೃಷಿಯಿಂದ ಊರುಗಳ್ ವೈಶ್ಯನೆಂಬುವ ನಾಮವೊಪ್ಪಿಯಿರ್ಕುಂ ॥

ಗೀತೆ ॥ ಖಿನ್ನನಂತೆಲ್ಲರಿಗೆ ಅಡಿಯಾದ ಪಾದ । ಶೂದ್ರನಾಮದಲಿ ಶಿಶ್ರೂಷೆ ಗೈವುದಾಗಿ ತನ್ನೊಳೀ ನಾಲ್ಕು ಜಾತಿಗಳ ಭೇದವರಿತಜ್ಞಾನಪೂರ್ಣಗೆ ಜಾತಿ ಗುಣ ಭೇದವಿಲ್ಲ ॥

ಪಂಚ ಮಲಗಳ ವಿವರ

ರಾಗ—ಕೇತಾರಗೌಳ—ದ್ವಿಪದೆ.

೨೯. ಧರೆಯೊಳಗೆ ಪಂಚಮಲಗಳು ಪ್ರಸಿದ್ಧವಾಗಿಹವು । ಅರಿಯಬೇಕು ಮುಮುಕ್ಷುವಾದಿಯೊಳಗೆಲ್ಲವನು ॥ ಪ ॥ ಉರುತರಾನಾವಕಾರ್ಮಿಕವು ಮಾಯಾ ಮಾಯೇಯ । ವರತಿರೋಧಾನವೆನುತಲೈದಿಹವು ಇವುಗಳೊಳ್ । ಪರಮಬ್ರಹ್ಮ ಜ್ಞಾನಜನಿಸದಂತಡಿಗಡಿಗೆ । ಮರೆವೆಗೆಳಸುವದೆ ಆಣವಮಲವದೆನಿಸುವುದ ॥ ಧರೆ ॥ ಗುರುವರನ ಮುಖದಿಂದಲಧ್ಯಾತ್ಮ ಶಾಸ್ತ್ರಗಳ । ನರಿಯಬೇಕೆಂತೆಂಬ ಮತಿಯಿರ ಲ್ಕದನು । ಸ್ಥಿರಗೊಡದೆ ವಿಷಯಗಳ ನೆನಸುತ್ತ ತಿರುಗಲದು ।ಉರುತರದ ಕಾರ್ಮಿಕದ ಮಲವುಯೆನಿಸುವುದು ॥ ಧರೆ ॥ ೨ ॥ ಬಾಲ್ಯಯೌವ್ವನವಾರ್ಧಿಕದೊಳ್ಬಗಲಿರಳು । ಹಾಳು ಕಥೆ ಕಿವಿಗಿಳಿಯಲಾನಂದಸ್ಫುರಿಸುತ್ತ । ಕೇಳುಗೊಡದಲೆಬ್ರಹ್ಮತತ್ವಗಳ ಕಿವಿ ಯೊಳಗೆ । ಶೂಲಹೊಡದಂತಿಹುದಮಾಯಮಲವೆನ್ನಿಸುವುದು ॥ ಧರೆ ॥ ೩ ॥ ದುರುಳ ಸಂಗದಿ ದ್ರೋಹಚಿಂತನೆಯು ದ್ಯೂತ । ನಿರುತ ಕೊಂಡೆಯು ಕಪಟ ದುರಿತಕರ್ಮ ಗಳೆನಿಪ । ಭರಿತಪೇರ್ಮಡುವಿನೊಳು ಮುಳುಗಿ ಮನವೆಂದೆಂದು । ಹೊರಸೂಸ ದಿಹುದೇ ಮಾಯೆಯಮಲವೆನ್ನಿಸುವುದು ॥ ಧರೆ ॥ ೪ ॥ ಪರಮಗುರುಮಹಲಿಂಗ ನೊಬ್ಬ ತ್ರೈಜಗದೊಳಗೆ । ಭರಿತನಾಗಿಹನೆಂಬ ಜ್ಞಾನವನೆ ಸರ್ವರಿಗು । ಮರೆಸಿ ಪರಿಪರಿಯ ದೇವರಂಪೂಜಿಸುವ ಮತಿಯಿತ್ತು । ಮರಳಿ ಜನ್ಮವ ಕೊಡುವುದೆ ತಿರೋ ಧಾನಮಲವು ॥ ಧರೆಯೊಳಗೆ ಪಂಚ ಮಲಗಳು ॥ ೫ ॥

ಗುಣಗಳ ಲಕ್ಷಣ

೩೦. ಸೀಸಪದ್ಯವು ॥ ವ್ಯಾಳಕಾಶ್ರಯವಾಗಿಯಟವಿಯೊಳ್ದ ಸ್ಥಿರವಾಗಿ । ಸರ್ವಾಂಗಬಲುಕಂಠಗಳಾಗಿ ಏಳೆಂಟುಗೊಟ್ಟಾಗಿವಂಕದಾಶ್ರಯವಾಗಿ ಮನುಜರಾ ಶ್ರಯಕ್ಕೆ ತಾಳೆವೃಕ್ಷವು ಮೀರಲು ಅದರೊಳುನ್ನತ ಗಂಧ । ವೆಂಬ ಸದ್ಗುಣವಂದು ಬೆಳಗಲಾಗಿ ಕೀಳಾದ ಗುಣದೋಷ ಕಾಣಿಸದೆ ಪರಿಮಳವು । ಸ್ವರದ್ಧಿಂದಲು ಶ್ರಾವ್ಯ ಮೆನಿಸಿದಂತೆ ॥

ಗೀತೆ ॥ ಮೇಲೆನಿಪಗುರುಭಕ್ತಿವಿರತಿಯುಳ್ಳವಗೆ ।ಹಾಳು ಕಂಠಕಗುಣಗಳೊಂದು

ತೋರದಲೆ । ಮೇಲಾದ ಜ್ಞಾನ ಪೊಂದುತ ಪರಿಮಳಿಸುತ । ಸರ್ವರಿಂ ಸುಶ್ರಾವ ಮೆನಿಸಿ ರಾಜೀಪನೂ ॥

೩೧. ಸೀಸಪದ್ಯವು ॥ ಹರಿಯದೇಹವು ಕಪ್ಪು ಚಲುವಕಾಮನು ಕಪ್ಪು ಪದ ಕಾಳಿಕಪ್ಪು ಮುಂಗುರು ಕಪ್ಪು । ಹರನ ಕಂಠವು ಕಪ್ಪು ವರ ಚಂದ್ರನೊಳು ಕಪ್ಪು ಗಿರಿಗಳೆಲ್ಲವು ಕಪ್ಪು ಯಮುನು ಕಪ್ಪು । ವರನೀಲಮಣಿ ಕಪ್ಪು ಇಂದ್ರಾಯುಧವು ಕಪ್ಪು ಯರಡುಬ್ಬುಗಳು ಕಪ್ಪು ತುರುಬುಕಪ್ಪು । ನಿರುತ ಇದ್ದಿಲು ಕಪ್ಪು ನೀಲೋತ್ಪಲವು ಕಪ್ಪು ಸ್ಫುರಿವ ಕಾಡಿಗೆ ಕಪ್ಪು ಭ್ರಮರ ಕಪ್ಪು ॥

ಗೀತೆ ॥ ಪರಿಕಿಸಲು ಈ ಕಪ್ಪಿನಿಂದಾದಫಲವೇನು । ಪರಮ ಸದ್ಗುಣವೊಂದಿರಲು ಕೋಟಿ ಫಲವು । ಪರತತ್ವವರಿತ ನರನೆ ನಾರಾಯಣನು ಈ ತತ್ವವರಿಯದಿಹ ನರನವನೆ ಪಾಮರನೂ ॥

೩೨. ಸೀಸಪದ್ಯವು ॥ ಹರನಕಾಯವು ಬಿಳ್ಪುಕೈಲಾಸಗಿರಿಬಿಳ್ಪು ಹರನ ವಾಹನ ಬಿಳ್ಪು ಚಂದ್ರಬಿಳ್ಪು ಹರನಪುತ್ರನು ಬಿಳ್ಪು ದೇವಗಂಗೆಯು ಬಿಳ್ಪು ಸರಸ್ವತಿಯು ನಿಜ ಬಿಳ್ಪು ಹಂಸೆ ಬಿಳ್ಪು । ಸುರಪನಾನೆಯು ಬಿಳ್ಪು ಕ್ಷೀರಸಾಗರ ಬಿಳ್ಪು ಸುರಧೇನು ಬಿಳ್ಪು ನಾರದನು ಬಿಳ್ಪು । ನಿರುತ ಗಂಧವು ಬಿಳ್ಪು ರಜತಪಾತ್ರೆಯು ಬಿಳ್ಪು ವರಜಾಜಿಮಲ್ಲಿಗೆಯು ಶಂಖ ಬೆಳ್ಪು ॥

ಗೀತೆ ॥ ಪರಿಕಿಸಲುಯಾಬಿಳ್ಪಿನಿಂದಾದ ಫಲವೇನು । ಪರಮ ಸದ್ಗುಣವಂದುಯಿರೆ ಕೋಟಿಫಲವು । ಪರತತ್ವವನರಿತ ನರನೆ ನಾರಾಯಣನು । ಈ ತತ್ವವರಿಯದಿಹನವನೆ ಪಾಮರನು ॥

ವೈರಾಗ್ಯ ಭಾಗ್ಯವು

೩೩. ಸೀಸಪದ್ಯವು ॥ ಪರಮೇಷ್ಟಿತನು ಕೆಂಪು ಲಕ್ಷ್ಮಿದೇವಿಯು ಕೆಂಪು ಉರಗರಾಜನ ತಲೆಯ ರತ್ನ ಕೆಂಪು ಹರಸುತನ ಹಣೆ ಕೆಂಪು ಸೂರ್ಯಮಂಡಲ ಕೆಂಪು ಪುರಹರನ ಜಡೆ ಕೆಂಪು ಅಗ್ನಿ ಕೆಂಪು। ವರುಣನಂಗವು ಕೆಂಪು ಅರುಣಾಚಲವು ಕೆಂಪು ತರುಣಿಯ್ಯಧರವು ಕೆಂಪು ಪವಳ ಕೆಂಪು । ವರತೊಂಡೆಫಲ ಕೆಂಪು ಪದ್ಮರಾಗವು ಕೆಂಪು । ನೆರೆದಾಂಬ್ರ ಕೆಂಪು ಕುಂಕುಮವು ಕೆಂಪು ॥

ಗೀತೆ ॥ ಪರಿಕಿಸಲು ಈ ಕೆಂಪಿನಿಂದಾದ ಫಲವೇನು । ಪರಮುಸದ್ಗುಣವೆಂದುಯಿದೆ, ಕೋಟಿ ಫಲವು । ಪರತತ್ವವರಿತನೆ ನಾರಾಯಣನು । ಈ ತತ್ವವರಿಯದಿಹ ನರನವನೆ ಪಾಮರನೂ ॥

೩೪. ಸೀಸಪದ್ಯವು ॥ ಸುರರಾಜ ವೇಶಿಕನ ದೇಹಕಾಂತಿಯು ಪೀತ । ಹರಿ ನಿತ್ಯಧರಿಸುವಂಬರವು ಪೀತ । ವರಕಮಲಬಾಂಧವನ ರಥದವಾಜಿಯು ಪೀತ ಸ್ಫುರಿಪ ಕುಂದಣದ ಭಂಗಾರಪೀತ । ನೆರೆರೋಮನಾಳಗತನಾದ ವಾಯುವು ಪೀತ ಹರಿದ್ರಾಳ

ಪೀತ ಗಂಧಕವು ಪೀತ । ನಿರುತ ಸಂಪಿಗೆಪುಷ್ಪ ಶಾಮಂತಿಗೆಯು ಪೀತ । ಪರಿಮಳಿಪ ಪದ್ಮದವರಾಗಪೀತ ॥

ಗೀತೆ ॥ ಪರಿಕಿಸಲು ಈ ಪೀತದಿಂದಾದ ಫಲವೇನು ಪರಮಸದ್ಗುಣವದೊಂದಿರಲು ಕೋಟಿಫಲವು । ಪರತತ್ವವರಿತವನೆ ನಾರಾಯಣನು ಈ ತತ್ವ । ವರಿಯದಿಹ ನರನವನೆ ಪಾಮರನೂ ॥

ಮಂಗಳಾರತಿ

ರಾಗ—ಆದಿತಾಳ

೩೫. ಸರ್ವರಿಗಾಗಲಿ ಮಂಗಳ । ನಿತ್ಯ । ಸರ್ವರಿಗಾಗಲಿ ಮಂಗಳ ॥ ಪ ॥ ಪ್ರಣವಕೆ ಮಂಗಳ । ಪ್ರಥಮದಿ ಮಂಗಳ । ಪ್ರಣವಕೊರೆಗೆ ಮಂಗಳ । ಪ್ರಣವಪಂಚಾಕ್ಷರಿರೂಪಗೆ ಮಂಗಳ । ಪ್ರಣವಸುನಾದಕೆ ಮಂಗಳ ॥ ಸರ್ವ ॥ ೧ ॥ ಗುರುವಿಗೆ ಮಂಗಳ ಹಿರಿಕಿರಿಯರಿಗೆಯು ಮಂಗಳ ॥ ಸರ್ವ ॥ ೨ ॥ ವಿಶ್ವಾಧಾರಗೆ ವಿಶ್ವಕುಟುಂಬಿಗೆ ।ವಿಶ್ವೋದರನಿಗೆ ಮಂಗಳ । ವಿಶ್ವಕೆ ಮಿತ್ರಗೆ ವಿಶ್ವಕೆಸಾಕ್ಷಿಗೆ । ವಿಶ್ವಂಭರನಿಗೆ ಮಂಗಳ ॥ಸರ್ವ॥ ॥ ೩ ॥ ವೇದಕೆ ಮಂಗಳಶಾಸ್ತ್ರಕೆ ಮಂಗಳ । ಆದಿಪುರಾಣಕೆ ಮಂಗಳ । ಕ್ರೋಧಿಗೆ ಕುಹಕಿಗೆ ಕಪಟಿಗೆ ಮಂಗಳ । ಸಾಧುಸಜ್ಜನರಿಗೆ ಮಂಗಳ ॥ ಸರ್ವ ॥೪॥ ನಿತ್ಯಗೆಸತ್ಯಗೆ ಮುಕ್ತರಿಗೆ ಮಂಗಳ । ಪ್ರತ್ಯಗಾತ್ಮನಿಗೆ ಮಂಗಳ । ನಿತ್ಯವು ಗುರುಮಹಲಿಂಗಗೆ ಮಂಗಳ । ಸತ್ಯಚಿದ್ರೂಪಗೆ ಮಂಗಳ । ಸರ್ವರಿಗಾಗಲಿ ॥ ೫ ॥

ರಾಗ—ಧನ್ಯಾಸಿ—ಅಟತಾಳ

೩೬. ಜಯಮಂಗಳಂ ಸದಾಶುಭಮಂಗಳಂ ॥ಪ॥ ದುರಿತರಾಕ್ಷಸ ಘೋರಗೆ ದುಷ್ಟ ಭೀಕರನಿಗೆ । ಪರಮಸಂಮ್ಯಜ್ಞಾನ ಬೋಧಚಂದ್ರನಿಗೆ । ಅರಿವರ್ಗಸಂಕುಳದ ಮೃತ್ಯುದೇವತೆಗೆ । ಪರಮ ಶಮ ದಮ ಶಾಂತಿ ಜನ್ಮಭೂಮಿಂಗೆ ॥ ಜಯ ॥ ೧ ॥ ಉರುಸಪ್ತವ್ಯಸನಗಳ ಶತೃವೆನಿಸಿದಗೆ । ದುರಿಕರ್ಮ ಕುಠಾರನೆನಿಸಿ ಮೆರೆಯುವಗೆ ಮೆರೆವಾಸೆ ಪೈಶಾಚವನು ಮುರಿದು ನುಂಗುವಗೆ । ನಿರುತ ಬ್ರಹ್ಮಾನಂದ ಅಮೃತಸಾರಗೆ ॥ ಜಯ ॥೨॥ ದುರುಳಮಾಯಾಂಗನೆಯ ತಿಂದು ತೇಗುವನಿಂಗೆ । ಪರಮ ಮುಕ್ತಾಂಗನೆಯ ರಮಣನಾದವಗೆ । ನಿರುಪಮ ನಿರಾಲಂಬ ನಿತ್ಯತೃಪ್ತನಿಗೆ । ಪರಮ ಗುರುಮಹಲಿಂಗ ಸಾರ್ವಭೌಮನಿಗೆ ॥ ಜಯ ॥ ೩ ॥

॥ಇತಿ ದ್ವಿತೀಯ ಪ್ರಕರಣಂ ಸಮಾಪ್ತಂ॥

ಗದ್ಯ॥ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು ಸಾರ್ವಭೌಮ ಶ್ರೀದತ್ತಾತ್ರೇಯ ಕಮಲಸಂಜಾತ ಶ್ರೀ ಸದಾನಂದ ಗುರುಮಹಲಿಂಗರಂಗ ಯತಿವರೇಣ್ಯ ಚರಣಕಮಲ ಭೃಂಗಾಯಮಾನ ಶ್ರೀಶಂಕರಾನಂದಯೋಗಿ ವಿರಚಿತ

ಕೈವಲ್ಯನವನೀತವೆಂಬ ಗ್ರಂಥದಲ್ಲಿ ವೈರಾಗ್ಯಭಾಗ್ಯವೆಂಬ ದ್ವಿತೀಯ ಪ್ರಕರಣದಿ ತತ್ವಗಳು (೧೮-೧೫)

ವೃತ್ತಗಳು ೧೨, ಸೀಸಗಳು ೪, ಕಂದಗಳು ೭, ಶ್ಲೋಕಗಳು ೨,

ಅಂತು ವಚನಗಳು ೩೩-ಲಂಕ್ಕೆ

ಮಂಗಳಮಸ್ತು

ಶ್ರೀರಸ್ತು

ದ್ವಿತೀಯ ಪ್ರಕರಣ ಪ್ರಾರಂಭವು

ತಾರಕಯೋಗಂ

ಶ್ಲೋ ॥ ಅಜ್ಞಾನತಿಮಿರಾಂಧಸ್ಯ । ಜ್ಞಾನಾಂಜನಶಲಾಕಯಾ ॥ ಚಕ್ಷು ರುನ್ಮೀಲಿತಂ ಯಸ್ಯ । ತಸ್ಮೈ ಶ್ರೀಗುರುವೇನಮಃ ॥

೧. ಕಂದ ॥ ಕರಣಕೆ ಮುಸುಕಿದ ತಮವನು । ಹರಿಸುವ ಜ್ಞಾನಾಂಜನವು ಶ್ರೀಗುರುವಿನೊಳಿರ್ಕುಂ ॥ ವರನಿಟಿಲಾಗ್ರದಿ ತೋರಲ್ । ಹರಿವುದು ಭವಶಾಸ್ತ್ರ ಕೋಟಿಗಳ್ ಹುಡುಕಿಕೊಂಡಿಲ್ಲಂ ॥

೨. ಕಂದ ॥ ತಾರಕಯೋಗದಿ ಭವವು । ತ್ತಾರಿಸುವದು ಚಿತ್ತಶುದ್ಧಿಯಿಂದಲಿ ಸತತಂ ॥ ತಾರಕವರಿಯದ ಬರಿನುಡಿ । ಸಾರಸಭಕ್ಷ್ಯಗಳ ಪೆಸರನ್ನುಡಿದಂದಕ್ಕಂ ॥

೩. ಕಂದ ॥ ಕಣ್ಣನು ಮುಚ್ಚಲು ತೆರಿಯಲ । ಕಣ್ಣಿನವೊಳಗಿರುವ ಆತ್ಮ ಜ್ಯೋತಿಯುತಾನೆ ॥ ಹುಣ್ಣಿಮೆ ಚಂದ್ರನ ಚಂದದಿ । ತಣ್ಣಗೆ ಭ್ರೂಮಧ್ಯದೇಶದಿ ಪೊಳೆವುದು ಸತತಂ ॥

೪. ಶಾ ॥ ವೃ ॥ ಶ್ರೀಮನ್ಮಂಗಳ ರಾಜಯೋಗಮನಿಶಂ ಸ್ತುತ್ಯಂ ಜಗತ್ಪೂಜಿತಂ । ಕ್ರಾಮುಕ್ರೋಧಗುಣಾರಾಕ್ಷಸಹನಂ ಶಾಂತಂ ಮನೋನಾಯಕಂ । ಧಾಮಂ ಚಿತ್ಕಳನಾದಬಿಂದು ಸಹಿತಂಪ್ರತ್ಯಕ್ಷದಗ್ಗೋಚರಂ । ಶ್ರೀಮುಕ್ತಾಂಗನೆಯೋಗ ಯೋಗಿ ಹೃದಯಾನಂದಾಬ್ಧಿ ಚಂದ್ರೋದಯಂ ॥

ತಾರಕಬ್ರಹ್ಮ ನಿರ್ದೇಶ್ಯ

ರಾಗ—ದ್ವಿಜಾವಂತಿ—ಶ್ಯಾಮಕಲ್ಯಾಣಿ

೫. ತಾರಕಂ ಭವತಾರಕಂ ಗುಣ । ದೂರಕಂ ನಿರುಪಾಧಿಕಂ । ಭೂರಿಬ್ರಹ್ಮಾನಂದಸಾರಂ । ಪಾರಮಾರ್ಥಪ್ರಬೋಧಕಂ ॥ಪ॥ ವೇದಪಾದಾಷ್ಟಾಂಗತ್ರಿಸ್ಥಾ । ನಾದಿ

ಓಂಕಾರಪ್ರಭಂ । ದ್ವಾದಶಾಂತಸ್ಥಾನ ಚಿದನ್ನಾದಬಿಂದು ಕಾಲಾತ್ಮಕಂ ॥ ತಾರ ॥ ॥ ೧ ॥ ಏರಿಹಂಸನ ಮೂರುಮಂಡಲ । ಸೇರೆಪುನ್ಮಾನಿಸ್ಥಾನದಿ । ಸಾರಬ್ರಹ್ಮಾತ್ಮೈಕ್ಯಜ್ಞಾನಂ । ಚಾರುಮುಕ್ತಿಸ್ವರೂಪಕಂ ॥ತಾರ ॥೨॥ ತರಣಿಶಶಿಶಿಖಿತಾರೆ ಕೋಟಿಯು। ಸ್ಫುರಿಸಿಬೆಳಗುವ ಭಾಸವು । ವರಸಹಸ್ರಾರದಲಿರಾಜಿಸಿ।ಮೆರೆಸುವದುಯತಿಕಾಯಮಂ ॥ ತಾರಾ ॥೩॥ ಉರುತರಾಂಜನೆಯಿಂದ ದ್ರವ್ಯವು । ಹೊರಗೆ ಕಾಂಬುವಪಾಂಗಿನಿಂ ಪರಮಜ್ಞಾನಾಂಜನೆಯೊಳಾತ್ಮಂ । ಕರದಿ ಕಾಂಬುವಿ ತಕ್ಷಣಂ ॥ ತಾರ ॥ ೪ ॥ ವೇದಗೋಚರಬ್ರಹ್ಮವಿದ್ಯವು । ವಾದಭೇದಕಸಾಧ್ಯವು।ಆದಿಗುರುಮಹಲಿಂಗರಂಗನ । ಬೋಧಿಸಲ್ಲದು ಸಾಧ್ಯವು ॥ ತಾರಕ ॥ ೫ ॥

ರಾಗ—ಪಂತುವರಾಳಿ—ಆದಿತಾಳ

೬. ತೋರದು ಸುಖ ಮಾನಸೇಂದ್ರ । ನೀನು ತಾರಕಬ್ರಹ್ಮದಿ ಮುಳುಗದೆ ಸುಷುಮ್ನೆ । ತೋರದು ಸುಖ ಮಾನಸೇಂದ್ರ ॥ಪ॥ ಹರಿದಾಡುವಿಂದ್ರಿಯ ಕರಣಗಳನು ಕಟ್ಟಿ । ಅರಿಗಳಾರ್ವರನೆಂಟು ಮದಗಳ ಶಿರಮೆಟ್ಟಿ । ಸ್ಥಿರಕಾಯನಾಗಿ ಚಿತ್ರಾಸನದಲಿ ಕುಳಿತು । ಅರುವಿಂದ ದೃಷ್ಟಿಯ ನಿಲ್ಲಿಸಿ ನೋಡದೆ ॥ ತೋರ ॥ ೧ ॥ ವರಗಂಗೆ ಯಮುನಸಂಗಮತೊಳಗಿಳಿದು।ಪರಿ ಭವಕೋಟಿದುಷ್ಕರ್ಮವಂ ತೊಳೆದು।ವರನೀಲಗಿರಿ ಮಧ್ಯ ದಶನಾದ ತಿಳಿದು । ವರಬಿಂದುರುಚಿಯೊಳು ನಲಿದು ನೀ ಮುಳುಗದೆ ॥ ತೋರ ॥ ೨ ॥ ವರಚಂದ್ರಸೂರ್ಯ ಬೀದಿಗಳಲ್ಲಿ ತೂರಿ । ಶಿರದೊಳಗಿರುದಾಜರಂಧ್ರವನೇರಿ ಭರದಿ ಪಶ್ಚಿಮದಿಕ್ಕಿನೊಳು ರಾಜಿಸುತಲಿಪ್ಪ । ವರಮೋಕ್ಷಾಂಗನೆ ಕೂಡಿ ಆನಂದ ಪಡಿಯದೆ ॥ ತೋರ ॥ ಅನುದಿನವಾಮೋಕ್ಷಕಾಂತೆಯ ಕೂಡುತ್ತ । ಕ್ಷಣಿಕವೀ ಸಂಸಾರವೆಂದನುಭವಿಸುತ್ತ । ಜನನಮರಣವೆಂಬ ಎರಡನ್ನು ತೊಳೆಯುತ್ತ । ಅನುಪಮಾದ್ವಯ ಬ್ರಹ್ಮಚಿಂತನೆಗೈಯದೆ ॥ ತೋರ ॥೪॥ ದೇಹತಾನೆಂಬುವ ಭ್ರಾಂತಿಯು ನೀಗಿ । ಸೋಹಂಭಾವದಿ ಚಿತ್ತನಿಶ್ಚಲವಾಗಿ।ಮೋಹಮತ್ಸರ ಪಾಶಗಳು ಉರಿದೋಗಿ । ಮೋಹರಹಿತ ಗುರುರಂಗನೊಳ್ಬೆರೆಯದೆ ॥ ತೋರದು ॥ ೫ ॥

ಪಂಚಮುದ್ರಾ ಲಕ್ಷಣವು

ರಾಗ—ಕಲ್ಯಾಣಿ—ಆಟತಾಳ

೭. ವರಪಂಚಮುದ್ರೆಗಳ ಶ್ರೀಗುರುವಿಂದ ।ಲರಿತುಸಾಧಿಸೆ ಮುಕ್ತನು ॥ ಪ ॥ ಕರಣನಿಗ್ರಹವೆಂಬ ಭಸ್ಮವಧರಿಸಿ ಕೃಷ್ಣಾಜಿನದಿ ವಿಜನದಿ । ಸ್ಥಿರ ಕಳೇಬರನಾಗಿ ಕುಳಿತು । ಪರಬ್ರಹ್ಮಾತ್ಮೈಕ್ಯನಿಷ್ಠೆಯೋಳ್ ॥ ವರ ॥ ಅ॥ ಕಣ್ಣರೆಪ್ಪೆಯ ಪಾಟನು। ನಿಲ್ಲಿಸಿ ಮನ ಪವನದೊಳಗೆ ಸೇರಿಸಿ। ತನ್ನ ಶಿರವನುಯೆತ್ತಿ ನೋಡಲು।ನನ್ನಿಯಿಂಫಾಲ ದೊಳವಿರುಶಶಿ । ಯುನ್ನತದ ಕಳೆಬಿಂದು ತೋರ್ಪುದು । ಮುನ್ನ ಖೇಚರಿಮುದ್ರೆ ಲಕ್ಷ್ಯದಿ ॥ ವರ ॥ ೧ ॥ ಎರಡುಕಂಗಳ ಕೊನೆಯಾ । ನೋಟವನೋಯ್ದು । ಇರಿಸೆ

ನಾಸಿಕತುದಿಯೊಳ್। ಅರಿವನು ಪವನೆರಡುನಿಂತು। ಉರಿವುದಮಲಜ್ಯೋತಿ ಬಾಹ್ಯದಿ ಉರುತರಾನಂದಾಮೃತ ಸುರಿವುದು । ಪರಮಭೂಚರಿಮುದ್ರೆಲಕ್ಷ್ಯದಿ ॥ ವರ ॥ ನಡು ನಂಗಳಿಳಾರ್ದಮುಚ್ಚಿ।ಭ್ರೂಮಧ್ಯದೊಳು ಯಮಚಿತ್ತಮರುತಸಾಗಿ।ನಿಯಮಕಾಲವು ನೋಡೆ ಭ್ರಾಂತಿಯು । ಲಯಿಸೆಮಿದ್ರುಮತಾರೆ ಮಿಂಚುಗ । ಳ್ಬಯಲಿನಲಿ ವಿಭ್ರಾಜ ಮಾನದಿ । ಪ್ರಿಯದಿ ತೋರುವುದು ಮಧ್ಯಲಕ್ಷದಿ ॥ ವರ ॥ ೩ ॥ ಆರು ಅಂಗುಳಿ ಯಿಂದಲೀ । ಬಿಚ್ಚಿರುವಂಥ । ಆರುದ್ವಾರಗಳಮುಚ್ಚಿ । ಚಾರುಆಜ್ಞಾ ಸ್ಥಾನವೇರಲು ಭೇರಿನಾದಮೃದಂಗವಾದ್ಯವು । ತೋರುವುದು ಪರಬಿಂದು ಕಳೆಯು । ಚಾರು ಷಣ್ಮುಖ ಮುದ್ರೆಲಕ್ಷ್ಯದಿ ॥ ವರ॥ ೪ ॥ ಮನಸಿನೊಳಗೆ ಲಕ್ಷ್ಯವು । ಬಾಹ್ಯದಿ ನಿತ್ಯ ಅನಿಮಿಷದೃಷ್ಟಿಯಿರೆ । ಬಿನುಗು ಇಂದ್ರಿಯವಿಷಯವುಡುಗುತ । ಘನಪರಂಜ್ಯೋತಿ ಪ್ರಕಾಶದಿ । ಅನಘ ಗುರುಮಹಲಿಂಗ ತೋರ್ಪನು । ವಿನುತ ಶಾಂಭವಿ ಮುದ್ರೆ ಲಕ್ಷ್ಯದಿ ॥ ವರಪಂಚ ಮುದ್ರೆಗಳ ॥ ೫॥

೮. ತರಲ॥ ಮಾತಿನೊಳಗಣ ಮಾತು ಜ್ಞಾನಿಯಮಾತೇ ಮಾಣಿಕವೆನಿಪುದು ಮಾತು ಪರರೊಳ್ ಬಿಚ್ಚುವಜ್ಞರ ಮಾತು ತೂತೆಂದೆನಿಪುದು । ಮಾತು ಹೃದಯ ದೊಳಡಲಾತ್ಮ ಜ್ಯೋತಿ ತನ್ನೊಳು ಪೊಳೆವುದು । ಮಾತು ಗುರುಮುಖದಿಂದ ತಿಳಿಯೆ ಖ್ಯಾತಿಮುಕ್ತಿಯು ಲಭಿಪುದು ॥

ಬ್ರಾಹ್ಮಲಿಂಗ ಸಾಕ್ಷಾತ್ಕಾರವು

ರಾಗ—ಭೈರವಿ

೯. ಶಿವಪದವಿ ಸೂರೆಗೊಂಬ । ಕಂಗಳು । ಶಿವಜ್ಯೋತಿಕಂಡ ಪುರುಷಂ । ನಿಮಿಷಂ । ಶಿವಪದವಿ ಸೂರೆಗೊಂಬ ॥ ಪ ॥ ಶಿವನಕ್ಷಿಮಣಿ ಭಸ್ಮವಂ ಧರಿಸಿ ಮನ ಶಿವ ಷಡಾಕ್ಷರಿಮಂತ್ರದೀ ನಿಲಿಸಿ । ಶಿವಕೂಟದಲ್ಲಿ ದೃಷ್ಟೀ । ಅಗಲದಿಹ ಶಿವಯೋಗ ಪೂರ್ಣಕಾಮಾ । ಭೀಮಾ ॥ ಶಿವ ॥ ೧ ॥ ಶಿವಪ್ರಣವ ನಾದಸುಧೆಯಾ । ಸೂರೆಗುಡಿ ದಬ್ಬಿದ ಬಿಂದುಂದರಿದರುಚಿಯಾ ಕಂಡರದು । ಶಿವನ ಚಿತ್ಕಳೆಶರಧಿಯೋ । ಳೀಸಾಡಿ । ಶಿವಜ್ಞಾನ ತೃಪ್ತನಾದಮೋದ ಶಿವ ॥ ೨ ॥ ಶಿವಜೀವರತ್ನ ವಜ್ರ ಮಾಣಿಕ್ಯ । ಶಿವ ಚಂದ್ರಸೂರ್ಯ ಕೋಟಿಯಂತೆ । ಶಿವನ ಪೂರ್ಣಪ್ರಕಾಶದಿ । ಮುಳುಗಿದ ಶಿವನೆ ತಾನಾದ ಸ್ವಸ್ಥಾ । ಚಿತ್ತ ॥ ಶಿವ ॥ ೩ ॥ ಶಿವಪುರುಷಲಿಂಗದಂತೆ ಭಕ್ತರ್ಗೆ । ಶಿವಕಲ್ಪ ವೃಕ್ಷದಂತೆ ಇರುವ । ಶಿವನಪ್ರವಿಮಲಭೂತಿಯಂ । ನರಿಜಾತ । ಶಿವಷಡಾನಂದ ಮೂರ್ತಿಕೀರ್ತಿ ॥ ಶಿವ ॥ ॥ ೪ ॥ ಶಿವನೆತಾರಕರೂಪದೀ । ಅಣುವಾಗಿ ಶಿವದ್ವಾರತೂರಿ ಹೊರಗೆ । ಒಳಗೆ । ಶಿವಮಹಾಲಿಂಗರಂಗ । ಗುರುವಾಗಿ । ಶಿವಪುರಪ ಬೆಳಗೆಬಂದು ನಿಂದು ॥ ಶಿವಪದವಿ ಸೂರೆಗೊಂಬ

೧೦. ಸೀಸ ॥ ನೇತ್ರಮಧ್ಯದಿ ಬ್ರಹ್ಮಲಿಂಗ ರಾಜಿಸುತಿರ್ಕಂ । ನೋಡಿರೆಲ್ಲರು

ನಿತ್ಯಪ್ರತ್ಯೇಕದಿ । ನೇತ್ರಗಳೇ ಯರಡು ದೀಪವೆಂದೆನಿಸಿರ್ಕು೦ । ಕತ್ತಲಳಿದಾತ್ಮನಂ ನೋಡಿಸುವರೆ । ನೇತ್ರಂಗಳೇಯರಡು ದೀಪವೆಂದೆನಿಸಿರ್ಕು೦ । ಕತ್ತಲಳಿದಾತ್ಮನಂ ನೋಡಿಸುವರೆ । ನೇತ್ರಂಗಳೇಯರಡು ರತ್ನ ಕಲಶನಿಸಿರ್ಕು೦ । ಗಂಗಾಭಿಷೇಕವಂ ಗೈಯ್ಯೆ ಮುದದಿ । ನೇತ್ರಂಗಳೇಯರಡು ಪುಷ್ಪವೆಂದೆನಿಸಿರ್ಕು೦ । ಶಿವಲಿಂಗ ಮನದಿ ಪೂಜಿಸುವಯತಿಗೆ ॥

ಗೀತೆ ॥ ನೇತ್ರಮನಪವನ ಮೂರೊಂದಾಗಿರಲು । ಮುಸುಗಿದ್ದ ತಾಮಸವು ಅಡಗಿ ಬ್ರಹ್ಮಜ್ಞಾನ । ನೇತ್ರವಿಕಸಿತವಾಗಿ ಬ್ರಹ್ಮಲಿಂಗದಲಿ । ಬೆರತು ಬ್ರಹ್ಮಾಕಾರ ವಾಗಿ ತೋರುತಿಹುದು ॥

೧೧. ಸೀಸ ॥ ಕಾಶಿರಾಮೇಶ್ವರಕ್ಕರಸಿ ಯಾತ್ರೆಯಗೈದು । ಘಾಶಿಯಾಗಲು ಸಲ್ಲದು ದಿವ್ಯಕಾಯ । ಕಾಶಿಪುರಕ್ಷೇತ್ರ ಆತ್ಮ ವಿಶ್ವೇಶ್ವರಂ । ಜ್ಞಾನ ಭಾಗೀರಥೀ ಗಂಗೆಯೆಂದು । ಘೋಷಿಸುವ ಶೃತಿ ನಂಬಿ ಯೇಕಾಗ್ರಚಿತ್ತದಿಂ ನಾಸಾಗ್ರದಿಟ್ಟಿಯಿಂ ನೋಡೆ ಕ್ಷಣದಿ । ಕಾಶಿಲಿಂಗವು ಕೋಟಿ ರವಿಯಂತೆ ಉಜ್ವಲಿಸಿ। ಶೃಂಗಾಟಕದಿಬಂದು ನಿಲ್ಲುತಿಹುದು ॥

ಗೀತೆ ॥ ಪಾಶಹರ ಹಂಸಮಂತ್ರದಿ ಪೂಜಿಸುತ್ತೆ । ನಾಶಕಿಲ್ಬಿಷನಾದ ಪರಮು । ಸತ್ಪುರುಷಂಗೆ । ಲೇಸು ಪಂಚೇಂದ್ರಿಯ ಪಂಚ । ಕ್ಲೇಶವೆನಿಸಿ । ಶಾಶ್ವತದ ಮುಕ್ತಿ ಸಂಪ್ರಾಪ್ತಿಯಹುದು ॥

ರಾಗ—ನಾದನಾಮಕ್ರಿಯೆ—ಆದಿತಾಳ

೧೨. ಕೇಳಬೇಕು ಕೇಳಬೇಕು ಕೇಳಬೇಕು॥ ನಾದ ಕೇಳಬೇಕು । ಮೂಲಾ ಬ್ರಹ್ಮದಿ ಮನ ಲೈಸಬೇಕು । ಆಲೈಸಬೇಕು ॥ಪ॥ ವಾಚಾದಿಂದಲಿ ಮುಕ್ತಿಯಾಗುವದೆ। ವಸ್ತು ತೋರುವದೆ । ಯೋಚಿಸಿ ದೃಷ್ಟಿ ಮನ ನಿಲ್ಲಿಸಾದೆ ಧ್ಯಾನಬಲಿಸದೆ ॥ ಕೇ ॥೧॥ ಒಡಲೀನೊಳಗೆ ಪರಶಿವನಿಹನು । ತಾನೆಸಾಕ್ಷಿಯಿಹನು ॥ ಪೊಡವೀಮಾನವನಿದ ಕಾಣದಿಹನು । ಮುಂದುಗಾಣದಿಹನು॥ ಕೇಳು ॥೨॥ ಅಷ್ಟಾಮದಂಗಳನಟ್ಟಬೇಕು । ಬಲ್ಘಟ್ಟಬೇಕು । ಭ್ರಷ್ಟರಾದೈವರಕಟ್ಟಬೇಕು । ಬೇಗ ಕುಟ್ಟಬೇಕು ॥ ಕೇಳು ॥ ೩ ॥ ಸೂಸುತಿಹ ವಾಯುಕೇಂದು । ಹಿಡಿಯಬೇಕು । ಅಲ್ಲಿ ತಡಿಯಬೇಕು । ಭಾಸುರ ಪ್ರಭೆಯೊಳು ಹೊಳಿಯಬೇಕು । ನಿಜವ ತಿಳಿಯಬೇಕು ॥ ಕೇಳು ॥ ೪ ॥ ಕಂಗಳ ಮಧ್ಯದಿ ಕಾಣಬರುವ । ಕಳೆಗೂಡಿಬರುವ । ಶೃಂಗಾರ ಗುರುಮಹಲಿಂಗನಿರುವ । ತಾನಿಂದು ಮೆರೆವ ॥ ಕೇಳು ॥ ೫ ॥

ಉದಯರಾಗ—ರಾಗ—ಸಾವೇರಿ

೧೩. ಏಳೈಯ್ಯ ಬೆಳಗಾಯಿತು । ಏಳು ಶ್ರೀಗುರುದೇವ ಏಳು ದೇವರ ದೇವ ಏಳು ಉನ್ಮನಿಯೋಗ। ನಿದ್ರೆ ನಿರ್ಮಲನೇ ॥ ಏಳೈಯ ಬೆಳಗಾಯಿತು ಏಳೈಯ್ಯ ॥ಪ॥

ಏಳು ಸಾಗರಧೀಕ್ಷಿರಸಾಗರಮಧ್ಯ । ಮೇಲೆನಿಪ ಕೃಷ್ಣಾಶ್ರಯದ್ವಾರಕಿಯೊಳು ॥ ಆಲಯವತಾಮಾಡಿ ಜ್ಞಾನಾಂಬಕಿಯನೊಡಗೂಡಿ । ಲೀಲೆಯಿಂದಲಿ ಪವಡಿಸಿರುವ ಗುರುದೇವ ॥ ಏಳು ॥೧॥ ಪಾತಾಳಲೋಕದಿಂದಾದಿಶೇಷನು ಬಂದು । ಜ್ಯೋತಿ ರತ್ನ ವರದಿ ಕಾಣಿಕೆಯ ಪಿಡಿದಿಹನು । ಪ್ರೀತಿಯಿಂದಲಿ ನಾಗಕನ್ನಿಕೆಯರೈತಂದು । ತಾಳ ಮದ್ದಳೆಗೀತಪಾದ್ಯನುಡಿಸುವುದು ॥ ಏಳು ॥ ೨ ॥ ಚಂದ್ರಸೂರ್ಯರು ನಿಂದು ಓಲಗವ ಕೊಡತಿಹರು । ಮಿಂದುಗಂಗಾಯಮುನ ಮಜ್ಜನಕೆ ಕರಿಯುವರು । ಇಂದ್ರಲೋಕದ ಪಾರಿಜಾತಮಂ ಕೈಗೊಂಡು । ಇಂದ್ರದಿವ್ಯಾಮೃತದ ಕುಂಬತಂದಿಹನು ॥ಏಳು॥ ॥ ೩ ॥ ಭೂಲೋಕದರಸುಮುನಿಮಾನ್ಯಭಕ್ತಜನ । ಪಾಲುಶರ್ಕರೆ ಪುಷ್ಪ ಪಣ್ಣುಗಳತಂದಿರಿಸಿ। ಮೇಲೆನಿಪ ನಿನ್ನಮೃತವಾಕ್ಯ । ದಿಂ ಪರತತ್ವ । ಕೇಳಲೋಸುಗ ಕರಮುಗಿದು ನಿಂದಿಹರು ॥ ಏಳು ॥೪॥ ಮೂರುಲೋಕದೊಳಿಂತು ಉಪಚರಿಪ ಜೀವಿಗಳ । ನೂರು ಜನ್ಮದ ಕರ್ಮ ಸಂಚಿತವ ಕಳೆಯುತ್ತ । ಮೂರುಪುರಗಳಗೆಲ್ದ ಮುಕ್ಕಣ್ಣನೆನಿಸಿರುವ । ಧೀರಗುರುಮಹಲಿಂಗರಂಗಭವಭಂಗ ॥ ಏಳೈಯ್ಯ ॥ ೫ ॥

ರಾಗ—ಶಂಕರಾಭರಣ—ರೂಪಕತಾಳ

೧೪. ಓದಬಾರದೇ ತರಳ । ಓದಬಾರಡೇ ॥ ಪ ॥ ಓದಿನೊಳಗಣೋದು ಶ್ರೀಗುರು । ಬೋಧಿಸಿರುವ ಅರ್ಥವರಿತು ಓದಬಾರದೆ ॥ ಅ ॥ ಮೂರು ನದಿಯ ನಡುವೆ ಮಿಂದು ಚಾರುಬ್ರಹ್ಮಗಿರಿಯ ಮಠದ । ಆರುಮೆಟ್ಟಿಲ್ಲಯೇರಿ ಸಣ್ಣ । ದ್ವಾರವನ್ನು ತೆರೆದುನೋಡಿ ॥ ಓದ ॥೧॥ ಜಲಜವಾರುಕಂಡು ಒಳಗೆ । ಪೊಳೆವಕಾರವಾದಿಯಾಗಿ । ಸಲೆ ಕ್ಷಕಾರದಂತ್ಯವರಿತು । ದಳದೊಳಕ್ಷರೈವತ್ತನ್ನು ॥ ಓದ ॥೨॥ ಈಡಪಿಂಗಳಯೆಂಬುವಂಥ । ನಾಡಿಯುರಡು ತಡೆದ ಬ್ರಹ್ಮ । ನಾಡಿ ಮಧ್ಯ ಕುಳಿತು ಮುದದಿ । ನೋಡಿ ಸೋಹಂಸೋಹಮ್ಮೆನ್ನುತ ॥ ಓದ ॥ ೩ ॥ ಚಾರುಪಚ್ಚೆಹಲಿಗೆಮೇಲೆ । ಸಾರಬ್ರಹ್ಮ ಸೂತ್ರಪಿಡಿದು । ಮೂರು ಮುಖದ ಕಂಠದಿಂದ । ಸಾರಮಂತ್ರ ಪ್ರಣವ ಬರೆದು ॥ ಓದ ॥೪॥ ಚಟುಲ ಶ್ರೀ ಗುರುರಂಗಲಿಂಗ । ಸ್ಫುಟದಿ ವರದೀಮಂತ್ರರಾಜ । ಕುಟಿಲ ವಳಿದು ಭಕ್ತಿಯಿಂದ । ಘಟವು ಎಂಬ ಮಠದಿ ನಿತ್ಯ ॥ ಓದಬಾರದೆ ॥ ೫ ॥

ತಾರಕ ಪಂಚರತ್ನವು.

೧೫. ಕಂದ॥ ತಾರಕಬ್ರಹ್ಮವ ಸಾಧಿಪ।ಧೀರರಿಗೀ ಪಂಚರತ್ನ ಜೀವಭ್ರಾಂತಿಯ॥ ಹಾರಿಸಿ ಬಹ್ಮಾನಂದದ । ವಾರಿಧಿಯೊಳ್ಮುಳುಗಿಸುವುದು ಶೃತಿಸಿದ್ಧಾಂತಂ ॥

ರಾಗ—ಆನಂದಭೈರವಿ—ಅಟತಾಳ

೧೬. ಭಜನೆ ಬ್ರಹ್ಮಾನಂದರಸವು । ಸೋಹಂ । ಭಜನೆ ಬ್ರಹ್ಮಾನಂದರಸವು। ॥ ಪ ॥ ಕಜನಿಜೇತೋರಜನಿಹರಣ ಸುಜನಹೃದಯಾಂಗಣ ಪಾರಾಯಣ । ಅಜಸುರೇಂದ್ರಮುನೀಂದ್ರಸೇವ್ಯನ । ಭುಜಗಭೂಷಣ ಭವ್ಯಚಿನ್ನನ । ಭಜನೆ ॥ ಅ ॥

ಮೂರೈದುರ್ಗೇಣಿನಗುಡಿಯಾ । ಹದಿ । ನಾರುಸ್ಥಂಭವು ಸಪ್ತಪ್ರಕಾರದೊಳವು । ದ್ವಾರವಂಭತ್ತೈದುಕಲಶಗ । ಆರುಮೆಟ್ಲುಗಳೈದುವರ್ಣದ । ತೋರಣಂಗಳು। ಕಾದುಯಿರುತಿಹ । ದ್ವಾರಪಾಲಕರೀರ್ವರೊಪ್ಪುವ ॥ಭಜನೆ ॥ ೧ ॥ ನವರತ್ನ ಖಚಿತ ಮಂಟಪದ । ದ್ವಾರ । ಜಪದಿ ಷಡಂಗುಳಿಯಿಂದಲಿ ತೆರಿಯೇ । ಪ್ರವಿಮಲಾತ್ಮೇಶ್ವರನು ತೋರುವ । ತವಕದಿಂದ್ರಿಯಕರಣವೆಂಬುವ । ವಿವಿಧಪುರಜನರೆಲ್ಲ ಬಂದು । ಶಿವನ ಸೇವೆಯೊಳಿಹರುನಿಂದು ॥ ಭಜನೆ ॥ ೨ ॥ ಪರಬ್ರಹ್ಮದಂಡಿವೀಣೆಯನು । ಮಾಡಿ । ಮೆರೆವೇಳುಚಕ್ರಗಳ್ಮೆಟ್ಟುಗಳ್ಮಾಡಿ ।ಇರಿಸಿ ಪ್ರಾಣಗಳೆಂಬ ತಂತಿಯು ತಿರುವಿ ವಿಷಯಗಳೆಂಬ ಬಿರಡೆಯ । ಸ್ಮರಣೆಯೆಂಬಂಗುಳಿಯಮಿಾಟುತ । ವರಸರಸ್ವತಿಯಂತೆ ಪಾಡುವ ॥ ಭಜನೆ ॥ ೩ ॥ ಮೂರುಮೂರ್ತಿಯಸಭೆಯಲಿ । ಚಂದ್ರ । ತಾರೆಯ ಬೆಳಕಿನೊಳಾನಂದವಲಿ । ಸಾರಸಂಗೀತಗಳು ಧಣಧಣ । ಭೇರಿ ಗಂಟೆಯು ತಾಳ ಝುಣಝುಣ ಚಾರುಘೋಷಕೆ ಬೆದರಿ ಪಾತಕ । ವೂರುಬಿಟ್ಟೋಡುವದು ಆಕ್ಷಣ ॥ ಭಜನೆ ॥ ೪ ॥ ಶ್ರೀಗುರುಮಹಲಿಂಗರಂಗನ । ಕೃಪೆ ।ಯಾಗಲು ಭಕ್ತನ ಭವ ನಾಶನ । ಭೋಗಸುಖವಂ ಬಯಸಿ ಜಲದೊಳು । ಕಾಗೆಯಂದದಿ ಮುಳುಗಲೊಲ್ಲದೆ । ಯೋಗನಿದ್ರೆಯೊಳ್ಮುಳುಗಿ ಉರಗಭವ । ರೋಗವಳಿದಿಹ ಬ್ರಹ್ಮನಿಷ್ಠರ ॥ ಭಜನೆ ॥

ರಾಗ—ವರಾಳಿ

೧೭. ಏಸುಜನ್ಮಾರ್ಜಿತದಾ ಸುಕೃತವೆನಲಿದನೂ। ಈಶಕಾಯಾಪುರದೀ ಕಾಣಬರುತಿಹನು । ಏಸುಜನ್ಮಾರ್ಜಿತದ ॥ ಪ॥ ಆಸನವ ಸುಸ್ಥಳದೀ ಅಳವಡಿಸಿ ಅಂಗನ್ಯಾಸ ಕರನ್ಯಾಸ ದೀಕ್ಷ ನಿರ್ಮಲನೂ । ವೇಶಿಕೇಂದ್ರೋಕ್ತಮಾಲಾ ಚಿನ್ಮುದ್ರಧರನೂ। ವಾಸನಿಲ್ಲದೆ ಬ್ರಹ್ಮದಾನ ಬಲಿಸಿದೆನು ॥ ಏಸು ॥ ೧ ॥ ಶೋಧಿಸುತ ಹೊಳಹೊಕ್ಕು ಬ್ರಹ್ಮನಾಳವನ್ನೂ । ವೇದಪೀಠಾಗ್ರವನೂ ಏರಿ ಕೇಳಿದೆನೂ । ಆದರದಿ ಘೋಷಿಸುವಾ ದಶನಾದಗಳನು । ಆದ ಚಿನ್ನಾದದಲೀ ದೇಹಪರವಶನೂ ॥ ಏಸು ॥ ೨ ॥ ನೀಲರುಚಿನವರತ್ನಾ ಹೇಮಕಾಂತಿಯುಲೀ । ಬಾಲರವಿಶಶಿಕೋಟಿ ಮಿಂಚಿನಂದದಲೀ । ಜ್ವಾಲೆ ನವಖಂಡವನೂ ತುಂಬಿ ತುಣುಕುತಲಿ । ಲೋಲ ಆತ್ಮೇಶ್ವರನೂ ನಿಂದ ನಿದಿರಿನಲೀ ॥ ಏಸು ॥ ೩ ॥ ತನುವಿನಭಿಮಾನಲ್ಲೀ ನಿಟ್ಟೋರಸಿಹೋಯ್ತೂ । ಋಣತ್ರಯಿಾಷಣತ್ರಯದಾಬಾಧೆಯಡಗಿತ್ತು । ಗಣಿಸಬಾರದಜನ್ಮಾಕೃತಪಾಪದಹಿಸೋಯ್ತೂ । ಮನವು ಆನಂದಮೃತಕಡಲ ಮುಳುಗಿತ್ತೂ ॥ ಏಸು ॥೪॥ ಘನದಶೇಂದ್ರಿಯ ವಿಷಯಾ ಕುಮುದಗಳನಿವಹ । ಜುಣುಗಿದವು ಚಿತ್ಸೂರ್ಯನಡರಲಿಕೆನಭವಾ । ಕ್ಷಣಕೆ ಹೃತ್ಕಮಲ್ಲರಳೀ ನಲಿವ ಶೋಭನವಾ । ಅನಘ ಗುರುಮಹಲಿಂಗರಂಗನೊಬ್ಬರಿವಾ ॥ ಏಸುಜನ್ಮಾರ್ಜಿತದ ॥ ೫ ॥

ಜೋಗುಳ ಹಾಡು—ರಾಗ

೧೮. ಜೋಜೋ ಸದಾನಂದರಸಬೋಧೆಯಿಂದಾ । ಜೋಜೋ ವಿಶಾಲಾಕ್ಷಿ ಗಡದವರಕಂದಾ ॥ ಜೋಜೋ ॥ಪ॥ ನನಮೋಹನಾಂಗಿ ಅನುವರಿತು ಗೆರುವರನೂ।

ಕಿವಿಯೊಳಗೆ ಬಿತ್ತಿದನು ಮಂತ್ರಬೀಜವನೂ । ತವಶಕ್ತಿಯಲಿ ಜ್ಯೋತಿಮುತ್ತಾದ ರೀತೀ । ನವಮಾಸದೊಳು ಮಂತ್ರಪಿಂಡಖ್ಯಾತಿ ॥ ಜೋಜೋ ॥ ೧ ॥ ನವಚಕ್ರದೊಳಗಾಡೀ ಕಳಹಂಸಶಿಶುವೂ । ರವಿಕೋಟಿ ಕಾಂತಿಯಲಿ ಜನಿಸಿದುಸ್ಸಹವು । ಶಿವಗಂಗೆಯಲಿ ಮಾಡಿಸಿದರು ಮಜ್ಜನವಾ।ನವರತ್ನ ತೊಟ್ಟಿಲೊಳು ಪವಳಿಸೀ ಮಗುವ॥ ಜೋಜೋ ॥೨॥ ಹನ್ನೆರಡು ಗೊಣಶಿನ ಪಚ್ಚೆಸಂಪಣಿಗೇ । ನನ್ನಿಯಿಂದಲಿ ತೊಟ್ಟು ಕಟ್ಟಿ ಬಾಲಕಗೇ । ಚಿನ್ನದುಂಗುರ ವಿರತಿ ಕತ್ತುರಿಬಟ್ಟೊ । ಭಿನ್ನಭಾವಗಳಳಿದಾ ಆಭರಣವಿಟ್ಟೊ ॥ ಜೋಜೋ ॥ ೩ ॥ ರವಿಚಂದ್ರಮಂಡಲವೆ ತಾಟಂಕವಾಗೆ ! ಕವಿದತುಳ ಚಿತ್ಕಳೆಯೆ ಪೀತಾಂಬ್ರದುಡುಗೇ । ತವೆ ಕುಂಕುಮರಸಿನವು ಕಾಡಿಗೆಯ ಸೋಗೇ । ಎವೆಯಿಕ್ಕದೀಕ್ಷಿಸುವ ಜನನಿ ಕಂಗಳಿಗೆ ॥ ಜೋಜೋ ॥ ೪ ॥ ನೋಡಿದರು ಮುತ್ತೈದೆರೈವರೊಂದಾಗೀ । ಪಾಡಿ ಮಂಗಳಪ್ರಣವನಾದ ಯಿಂಪಾಗಿ । ಮಾಡಿ ಆರತಿ ಪಂಚರತ್ನಭಾಜನದೀ । ಕೂಡು ಅಮೃತಾಂಗನೆಯನೆನುತರಿಸಿ ಮುದದಿ ॥ ಜೋಜೋ ॥ ೫ ॥ ಆರುಚಕ್ರದ ಮೇಲಣಾಲಯದಿ ಸುರಿವ । ಸಾರ ಚಿನ್ನಾದಮೃತ ಸುಧೆಯ ಸೇವಿಸುವ । ಮೂರುಮಂಡಲ ಮೀರಿದುನ್ಮನೆಯ ಸೇರಿ । ಭೂ ಆನಂದದಲಿ ಸುಖಸುಪ್ತಿ ತೋರಿ ॥ ಜೋಜೋ ॥ ೬ ॥ ಅರಿವು ಮರೆವೆಗಳಡಗಿಪಮನಸ್ಕವಾಗೀ । ನಿರುಪಮಾದ್ವಯ ನಿತ್ಯತೃಪ್ತ ತಾನಾಗೀ । ಹರಿದು ಭವಮಾಲೆಯನು ಸ್ಥಿರಮುಕ್ತನಾಗಿ । ಪರಿಪೂರ್ಣ ಪರಬ್ರಹ್ಮ ಶಿಶುವು ತಾನಾಗಿ ॥ ಜೋಜೋ ॥ ೭ ॥ ಸುಳ್ಳುಮಾಯಾ ಭ್ರಮೆಗೆ ದೂರವಾಗಿರುವೇ । ಮುಳ್ಳುಮೊನೆಗೆಡೆಯಿಲ್ಲದಂತೆ ತುಂಬಿರುವೆ ಎಲ್ಲಿ ನೋಡಿದರಲ್ಲೆ ತಾನೆಯಾಗಿರುವೇ । ಎಲ್ಲ ಜೀವಿಗಳೊಳಗೆ ಇಬ್ಬನಾಗಿರುವೆ ॥ ಜೋಜೋ ॥ ಕನಸಿನಂತೀ ಜಗವು ಪುಸಿಯಾಗಿ ತೋರಿ । ಕ್ಷಣಿಕವಾಗುವದೆಂಬ ನಸುನಗೆಯ ಬೀರಿ । ವಿನಯದಿಂದಾಡುವನು ಬಾಲಲೀಲೆಯನೂ । ಅನಘ ಗುರುಮಹಲಿಂಗರಂಗನಾತ್ಮಜನು ॥ ಜೋಜೋ ॥ ॥ ೯ ॥

ರಾಗ—ನಾದನಾಮಕ್ರಿಯೆ—ಆಟತಾಳ

೧೯. ತೆರೆದಬಾಗಿಲ ಸುಂಕವಿಲ್ಲದ ಪುನವುಂಟೆ ಬಂದುನೋಡಿ । ಹರಿ ಹರ ಬ್ರಹ್ಮಾದಿಗಳ ಕಾವಲದಕುಂಟು । ಬಂದುನೋಡಿ ॥ ಪ ॥ ಪುರಕ್ಕರಸರು ಮುಪ್ಪರೊಂಭತ್ತು ಬಾಗಿಲು । ಬಂದು ॥ ಎರಡು ಕಿಟ್ಟಿಗೆ ಸೂರ್ಯಚಂದ್ರರಬೀದಿಯೂ ಬಂದು। ವರಚೌಕಮಧ್ಯಮೊಳಿಹ ಓಂಕಾರೇಶ್ವರ । ಬಂದು । ಕರಣೇಕರ್ನೈವರು ಕರಜೋಡಿಸಿಹರಲ್ಲಿ । ಬಂದುನೋಡಿ ॥೧॥ ಏಳುಸುತ್ತಿನಕೋಟೆ ಮೇಲೊಂದು ಗವಿಯುಂಟು । ಬಂದು । ಏಳುಲೋಕಂಗಳನೊಳಕೊಂಡುಯಿಹುದಲಿ । ಬಂದು । ಏಳೆಡೆ ಸರ್ಪವಲ್ಲಿ ಭೋರುಗುಟ್ಟುತಲಿದೆ । ಬಂದು । ಏಳೆಡೆಸರ್ಪನ ತಲೆಯೊಳು ರತ್ನವುಂಟು।ಬಂದುನೋಡಿ ॥೨॥ ಮುರಡು ಪಕ್ಷದೊಳೊಂವೆ ಪಕ್ಷಿಯಾಡುತಲಿವೆ । ಬಂದು । ಎರಡು

ಕ್ಕೆಯು ಪುಕ್ಕ ಪಕ್ಷಿಗಿಲ್ಲವು । ಬಂದು । ಧರಣಿಜೀವರ್ಕಳಿಗಾಧಾರವಾಗಿದೆ । ಬಂದು । ರಸ್ಥಳದೊಳಗಿದೆ ಕರಕೆ ಸಿಕ್ಕುವದಿಲ್ಲ । ಬಂದುನೋಡಿ ॥ ೩ ॥ ಗರುಡಸರ್ಪಗೆ ಅತಿ ಸ್ನೇಹವುಂಟಾಗಿದೆ । ಬಂದು । ಸುರರಸುರರು ಮಿತ್ರಭಾವದೊಳಿರ್ಪರು । ಬಂದು । ಇರುವೆ ಸಿಹ್ಮವನುಂಗಿ ತಾನೊಂದೆ ಕುಳಿತಿದೆ । ಬಂದು । ಉರುವಿಷವಮೃತವು ಆಯಿತೇ ನೆಂಬೆನು । ಬಂದುನೋಡಿ ॥ ೪ ॥ ಚಾರುಭೋಜನಶಾಲೆ ತೆರದಿದೆ ಎದುರಿಗೆ । ಬಂದು । ಊರಜನರು ಉಂಡು ದಣಿಪರಾನಂದದಿ । ಬಂದು । ದೂರದೊಳಿಲ್ಲವು ಜ್ಞಾನಭಂಡಾ ವು । ಬಂದು । ಧೀರ ಶ್ರೀಗುರುಮಹಲಿಂಗನೊಳಗಿದೆ । ಬಂದುನೋಡಿ ॥

ರಾಗ—ಪಂತುವರಾಳಿ—ಅಟತಾಳ

೨೦. ಬೃಂದಾವನ ಪೂಜೆ ಮಾಡಿರೊ । ನಿಮ್ಮ ಬಂಧಾವಹರಿಸಿ ಸೌಭಾಗ್ಯ ಪಾಲಿಸುವಂಥ ॥ ಬೃಂದಾವನ ಪೂಜೆ ॥ಪ॥ ಕರಿದು ಬಿಳಿದು ಕೆಂಪು ಪಚ್ಚೆಯ ಜಗುಲಿಗೆ ರೆದು ಸದ್ಗುಣದುಣಿರಂಗವಾಲೆಯನು । ನಿರುತ ರಾಜಿಸುತಿಪ್ಪ ಶ್ರೀತುಳಸಿದೇವಿಗೆ ರಿಭವ ಹರಿ ಹರಿಪ್ರೀಯೆಯುನ್ನುತ ನಿತ್ಯ ॥ ಬೃಂದಾ ॥ ೧ ॥ ಅಣುವಾದಪಕ್ಷಿಮು ದ್ವಾರದ ತೆರದು । ಘನಬೆಳಕಿನೊಳಿಪ್ಪ ಲಕ್ಷ್ಮಿಯ ಬೆರದು । ಮನಮುಟ್ಟಿ ಇಷ್ಟಾರ್ಥಗಳ ಬೇಡಿಕೊಳ್ಳಲು । ವಿನಯದಿಂದುತ್ಥಾನದ್ವಾದಶಿ ತಿಥಿಯೊಳು ॥ ಬೃಂದಾ ॥ ನೀಲತೋ ರುದಮಧ್ಯದ್ವಾರಕುಹರದೊಳು । ಲೀಲೆಯಿಂ ಜಲಕ್ರೀಡೆಯಾಡ್ವ ಕೃಷ್ಣನ ಮೂರು ಕಾಲದಿ ಕೂಡಿಪ್ಪ ಶ್ರೀತುಳಶಿ ದೇವಿಗೆ । ಬಾಲಕಿಯರು ಮಂಗಳಾರತಿ ಪಾಡುತ ಬೃಂದಾ ॥ ೩ ॥ ಇರುವರಾಸ್ಥಳದೊಳು ಸರ್ವದೇವತೆಗಳು । ಇರುವವಲ್ಲಿಯೆ ಸರ್ವ ತೀರ್ಥಕ್ಷೇತ್ರಂಗಳು । ವರದೇವಋಷಿ ರಾಜಋಷಿ ಬ್ರಹ್ಮಋಷಿಗಳು । ನಿರುತ ಪೂಜಿ ಪರಾದೇವಿಯ ನಲವಿಂದ ॥ ಬೃಂದಾ ॥ ೪ ॥ ಕರಣೇಂದ್ರಿಯಗಳಂತರ್ಮುಖ ಮಾಡಿ ಪೂಜಿಪ । ವರಭಕ್ತಜನಹೃದಯಾಂಗಣವನು ಬಿಟ್ಟು । ತೆರಳುವಳೆಂದು ಮುದದಿ ನ್ನಯ ಪ್ರೀಯ । ಗುರುರಂಗಧಾಮನಿಂಗಭಯವಿತ್ತಿಹಳಾಗಿ ॥ ಬೃಂದಾ ॥ ೫ ॥

ಇತಿ ತಾರಕಪಂಚರತ್ನ ಸಮಾಪ್ತಿಃ

೨೧. ತೋಟಕವೃತ್ತವು ॥ ನಿರಘನಿರಂಜನ ನಿಷ್ಕ್ರಿಯನಿತ್ಯಂ । ಪರಮ ಪರಾ ಪರ ಪಾವನಗಾತ್ರಂ । ನಿರುತ ನಿರಾಶ್ರಯ ಲೋಕಪವಿತ್ರಂ । ಕರುಣದಿ ರಕ್ಷಿಸು ದಕ್ಷಿಣವಕ್ತ್ರಂ

೨೨. ಮಾಲಿನೀವೃತ್ತ ॥ ಸತ್ಯಸ್ಸದಾಶಿವ ನಿತ್ಯನಿರಾಮಯ ಉತ್ತಮಜ್ಞಾನ ಪ್ರದೀಪಕನೆ । ಮೃತ್ಯುವಿನಾಶಕ ಶತ್ರುನಿಪಾತಕ ಭೃತ್ಯಮನೋಹರ ಮುಕ್ತಿಪದಾ । ಭಕ್ತಜನಾಶ್ರಿತ ಚಿತ್ತಪ್ರಕಾಶಕ ಸತ್ತು ಚಿದಾನಂದ ನಿಶ್ಚಲನೆ । ಪೃಥ್ವಿಯ್ಯ ಪಾಲಿಪ ಕರ್ತೃ ನೀನೆನ್ನುತ ನಿತ್ಯವು ನಂಬಿಹೆ ರಕ್ಷಿಪುದೈ ॥

ಗಾಯತ್ರೀ ಸ್ತೋತ್ರವು

ರಾಗ—ಕಲ್ಯಾಣಿ—ಆಟತಾಳ

೩೩. ಬಂದುಕೂತಿಹಳು ನೋಡಿ । ಗಾಯತ್ರಿ ನೀ । ಪಿಂದು ಕಣ್ದೆರದು ನೋಡಿ ॥ ಪ ॥ ಒಂದುನಿಮಿಷವು ಧ್ಯಾನಿಸಲ್ಭವ । ಬಂಧನವ ತಾ ಕಳಚಿ ಬ್ರಹ್ಮಾನಂದ ಶರಧಿಯೊಳದ್ದಿ ಸಲಹುವೆ । ನೆಂದು ಹೃದಯಾಂಗಣದಿ ಮುದದೀ । ಬಂದುಕೂತಿಹಳು ನೋಡಿ ॥ ಅ ॥ ಮೂರುವರ್ನದ ಕಾಯವು । ಗಾಯತ್ರಿಗೆ । ಆರುಬಣ್ಣದ ಉಡಿಗೆಯು । ಏರಿ ಶಿನಗಳ ಪಂಚಬ್ರಹ್ಮರ । ಮೇರುವಿಗೆಹನ್ನೆರಡುಗೊಣಸುಗ । ಳ್ಸೇರಿಸೀ ಉಯ್ಯಾಲೆಯಾಡುತ । ಮೂರುಲೋಚನೆ ಮುಕ್ತಿಕಾಂತಿಯು ॥ ಬಂದು ॥ ೧ ॥ ಮಿಸುನಿ ವಜ್ರಗಳರುಚೀ । ಚತುರಾಶ್ರಮೇಲೆಸೆವಾರು ಕಲಶಂಗಳು। ಅಸಮ ಸಿಂಹಾಸನದಿವಾಸಿಯು । ಒಸದು ಹತ್ತವ ತಾರ ಕೆತ್ತಿದ । ಮಿಸುಪ ವಡ್ಯಾಣಿರರಿ ನಡುವಿಗೆ। ನಸುನಗುತ । ಸಾವಿತ್ರಿದೇವಿಯು ॥ ಬಂದು ॥೨॥ ವರಕುಚಯುಗಳ ಮಧ್ಯ।ದ್ವಾದಶ ವಜ್ರ । ಸ್ಫುರಿಸಿ ತೋರುವ ಪದಕ । ಯರಡು ಮೂರೈದಾರುಸೇರಿದ । ಸರವು ಏಕಾವಳಿಯಕಂಠದಿ । ಧರಿಸೆ ವೈಖರಿರೂಪನಿಂದಲಿ । ಒರೆವ ಬ್ರಹ್ಮಾತ್ಮೈಕ್ಯಸರಸ್ವತಿ ॥ ಬಂದು ॥ ೩ ॥ ನೀಲದರ್ಪಣ ಪಿಡಿದು । ಕೆಂಪಿನಬಟ್ಟೊ । ಫಾಲಮಧ್ಯವ ನೋಡಿಟ್ಟು । ವಾಲೆ ಝುಮುಕಿಯು ಶ್ರುತಿಗೆ ಶಿರಶಿನ । ಮೇಲೆ ಸಾಸಿರದಳದ ಪದ್ಮವು। ಲೀಲೆಯಿಂದುನ್ಮನೆಯೊಳಾಡುವ । ಏಳುಕೋಟಿ ಸುಮಂತ್ರದೇವತೆ । ಬಂದು ॥ ೪ ॥ ಚಿತ್ತನಕ್ಷತ್ರದಂತೆ ವಿಭ್ರಾಜಿಪ ಮುತ್ತಿನ ಮೂಗುತಿಯು । ಸತ್ತುಚಿತ್ತಾನಂದರೂಪಿಣಿ। ಮಿಥ್ಯೆಮಾಯಾಕಲುಷಹಾರಿಣಿ । ಕರ್ತಗುರುಮಹಲಿಂಗರಂಗನ । ಶಕ್ತಿಸಾಕ್ಷಾತ್ರಿಪುರಸುಂದರಿ ॥ ಬಂದು ॥ ೫ ॥

ರಾಗ—ಕಲ್ಯಾಣಿ—ಆಟತಾಳ

೩೪. ರತ್ನಬಂದಿದೆ ನೋಡಿರೋ । ಉನ್ನತಜೀವ।ರತ್ನಬಂದಿದೆ ನೋಡಿರೋ ॥ ಪ ॥ ಪೃಥ್ವಿಗಧಿಕಬ್ರಹ್ಮಪುರದಿಂದಬಂದಿದೆ । ರತ್ನ ಪರೀಕ್ಷೆಯ ಬಲ್ಲ ಸತ್ಪುರುಷರು ರತ್ನಬಂದಿದೆನೋಡಿರೋ ॥ ಉನ್ನತ ॥ ಅ ॥ ಶಿರದೊಳಗಡಗಿದೆಯಾವಾಗಲು।ಕರದಲ್ಲಿ ಕಾಣುತ್ತಿದೆ । ವರಚಂದ್ರಸೂರ್ಯಬೀದಿಗಳೊಳಗಿಟ್ಟದೆ।ದುರಿತಕರ್ಮಗಳಳಿದವಗೆ ಕಾಣುತಲಿದೆ ॥ ರತ್ನ ॥ ೧ ॥ ಅಷ್ಟದಳಂಗಳಿಂದಾ । ಆರತ್ನವು ದಿಟ್ಟವಾಗಿಹುದರಿಂದ । ದೃಷ್ಟಿಯನಗಲದೆ ನೋಡಿದ ಪುರುಷನು । ನಷ್ಟಪಾತಕನಾಗಿ ಶ್ರೇಷ್ಠನಾಗುವನಂತೆ ॥ ರತ್ನ ॥ ೨ ॥ ಕಳ್ಳರಭಯವಿಲ್ಲವು ಈ ರತ್ನಕ್ಕೆ । ಸುಂಕ್ಯಾರಸುಳುಹಿಲ್ಲವು । ಎಲ್ಲೆಲ್ಲಿ ನೋಡಲಲ್ಲಲ್ಲೆ ಕಾಂಬುದು ತಾನು ಒಲ್ಲೆನೆಂದರುಬಿಡದೆ ದೂರಿಗೆನಿಲ್ಲುವುದು ॥ ರತ್ನ ॥ ॥ ೩ ॥ ಶಿರದೊಳು ರತ್ನವನ್ನು ಧರಿಸಿರುವಂಥ । ಉರುಗನ ಹೃದಯವನ್ನು ಉರುಗಭೂಷಣ ಪಕ್ಷಿಹಂಸವಾಹನಮುಖ್ಯ । ಸುರಮುನಿಹೃದಯದಿ ನಿತ್ಯ ಬೆಳಗು

ವಂಥ ‖ ರತ್ನ ‖ ೪ ‖ ಧೊರೆದೇಶಾಯಿಗಳಲ್ಲಿಯು । ನವಕೋಟಿಯ। ವರನಾರಾಯಣ ನಲ್ಲಿಯು । ನೆರೆಚಕ್ರವರ್ತಿಬೊಕ್ಕಸದೊಳಗಿಲ್ಲ ಶ್ರೀ । ಗುರುಮಹಲಿಂಗನ ಭಂಡಾರ ದೊಳಿಹ ‖ ರತ್ನ ‖ ೫ ‖

ರಾಗ—ನಾದನಾಮಕ್ರಿಯೆ—ಅಟತಾಳ

೫೫. ಭಯನಿವಾರಣವಾಯಿತಿಂದು । ಗುರು । ದಯವೆಂಬ ವಜ್ರಾಂಗಿ ತೊಡಿಸಲು ಬಂದು । ಭಯನಿವಾರಣವಾಯಿತಿಂದು ‖ಪ‖ ಆಶಪಾಶದ ಕೈಕಾಲುಡುಗಿ। ನಿಲ್ಲೆ । ಭಾಸುರ ಬ್ರಹ್ಮೋಪದೇಶವೆನಗಾಗಿ । ಸೂಸುವಿಂದ್ರಿಯವ್ಯಾಪಾರುಡುಗಿ। ಕನು । ಲಾಸನಾಂತರ್ಲಕ್ಷ್ಯಸ್ಥಿರವಾಗಲಾಗಿ ‖ ಭಯ ‖ ೧ ‖ ತರಣೀಂದುಗಳ ಗತಿ ಯಳಿಯೆ । ಕಂಗ । ಳೆರಡರ ನಡು ನೀಲಜ್ಯೋತಿ ನಿಂತುರಿಯೇ । ಹರಿದು ಕತ್ತಲು ಬೆಳಕರಿಯೆ । ಅಲ್ಲಿ । ವರಬಿಂದುರುಚಿಕೋಟಿ ಮಿಂಚಿನೋಳ್ಪೊಳೆಯೆ ಭಯ ‖ ೨ ‖ ಸಣ್ಣ ಸೂಜಿಯುಗಂಡಿಯೊಳಗೆ ದೊಡ್ಡ । ಹುಣ್ಣಿಮೆಚಂದ್ರನ ಕಳೆಯುಕ್ಕಿ ಬೆಳಗೆ । ಕಣ್ಣಾರ ಕಂಡಾಯಿತೊಳಗಸುಬು । ಬಣ್ಣಿಸಲಸದಳ ಬ್ರಹ್ಮಾದಿಗಳಿಗೆ ‖ ಭಯ ‖೩‖ ಏಳು ಕೋಣೆಯ ಮನೆಯಲ್ಲಿ । ಘಂಟೆ ತಾಳ ಮದ್ದಳೆ ಧಣಧಣ ಘೋಷದಲ್ಲಿ।ಸಾಲು ದೀವಿಗೆ ಬೆಳಕಲ್ಲಿ । ಆಗ್ನ । ನೀಲಕಂಠನ ಪೂಜೆ ನೋಡಲಿಕ್ಕಲ್ಲಿ ‖ ಭಯ ‖ ೪ ‖ ಭರಣಿ ಕತ್ತಲು ಮುಸುಕಿರಲೂ ಸೂರ್ಯ । ಶಿರದೋರಲೆಸರಿಲ್ಲದಡಗುವ ಪೋಲು । ಗುರುಮಹ ಲಿಂಗನಸೇರಲು । ಪೂರ್ವದುರುಕರ್ಮರಾಶಿ ನಿಂದುರದುಹೋಗಲು ‖ ಭಯ ನಿವಾರಣ ‖ ‖ ೫ ‖

ರಾಗ—ಭೈರವಿ—ರೂಪಕತಾಳ

೫೬. ಎಷ್ಟು ಮಾತ್ರ ಭವದ ಕಡಲದು । ಗುರುಕೃಪಿರಲು । ದಾಂಟಲೊಂದು ಗೋಷ್ಪದವೆನಿಪುದು ‖ ಪ ‖ ಅಷ್ಟಭೋಗದಾಶೆ ಬಿಟ್ಟು । ಅಷ್ಟಪಾಶಗಳನು ಸುಟ್ಟು। ಅಷ್ಟದಳದಕಮಲ ಮಧ್ಯ । ದಿಟ್ಟಒಲಿದೀಶ್ವರಂಗೆ । ಎಷ್ಟು ಮಾತ್ರ ‖ ಅ ‖ ಯೋಗ ಸೂತ್ರವೆಂಟುಸಾಧಿಸಿ । ಈ ಕಾಯವೆಂಬ । ಯೋಗಮಂಟಪವನು ಶೋಧಿಸೆ । ನಾಗ ಸರ್ಪದೆಡೆಯತುಳಿಯೆ । ನಾಗರತ್ನ ಕಾಂತಿ ಪೊಳೆಯೆ।ನಾಗಸ್ವರದಿ ಮನವು ಮುಳುಗೆ। ರಾಗವಳಿದಯೋಗಿವರಗೆ ‖ ಎಷ್ಟು ‖೧‖ ಆರುಬಾಗಿಲನ್ನು ಮುಚ್ಚಲು । ದ್ವಿದಳವೇರಿ। ಆರು ಮೂರು ಕಮಲ ಬಿಚ್ಚಲು । ಮೂರು ನದಿಯ ಮಧ್ಯದಲ್ಲಿ । ಮೂರುಕಾಲಿನ ಹಂಸೆ ಸಣ್ಣದ್ವಾರ ತೆಗೆದು ಬಡಿವಘಂಟೆ । ಭೇರಿರವವ ಕೇಳ್ದ ಯತಿಗೆ ‖ ಎಷ್ಟು ‖ ‖ ೨ ‖ ದುರುಳ ಸಂತತಿ ದೂರಗೈಯುತ । ನಮ್ಮ ಶಿವನ । ಶರಣಸಂತತಿಯಲ್ಲಿ ಸೇರುತ । ಧರೆತೊಳಧಿಕವೆನಿಸಿ ಮೆರೆವ । ಪರಮ ಶ್ರೀಗುರುರಂಗಲಿಂಗನ । ಚರಣ ಕಮಲ ಬೆರತು ಜಗವ । ಮರತು ಮುಕ್ತನಾದಯತಿಗೆ ‖ ಎಷ್ಟು ‖ ೩ ‖

ರಾಗ—ಕಲ್ಯಾಣಿ—ಅಟತಾಳ

೫೭. ಸ್ಥಿರಮುಕ್ತಿಸಂಪದಕೇ । ಶ್ರೀಗುರು ಕೊಟ್ಟ।ಎರಡಕ್ಷರಗಳೆ ಸಾಕು ‖ಪ‖ ನಿರುತ ನಿರಕ್ಷರಕುಕ್ಷೆಂದುಪೇಕ್ಷಿಸಿ। ವರಮೋಕ್ಷ ಲಕ್ಷ್ಮಿಕೈ ಬಿಡುವಳೇ ಅವನ ‖ ಅನು ‖

ನಿಶ್ಚಲನಾಗಿ ಕುಳಿತು । ಕಂಗಳು ಅರೆ । ಮುಚ್ಚಿದುನ್ನತಖೇಚರಿ । ಮಿಂ
ನೋಳ್ಮನಸಿನ ಚಂಚಲವಡಗಿಸಿ । ಸಂಚಿತಕಳೆದು ನಿಶ್ಚಿಂತನಾಗುವಂಥ ॥ ಸ್ಥಿರ ॥೧
ಅಕ್ಷರವೆರಡರಿತು । ಆಡುವ ಹಂಸ । ಪಕ್ಷಿಯ ಕಾಲ್ಮುರಿದು । ಲಕ್ಷವು ಚದರದೆ ಈಕ್ಷ
ಲಾಕ್ಷಣ । ನಕ್ಷತ್ರಮಳೆ ತನ್ನ ಕುಕ್ಷಿಯೋಳ್ಸುರಿವಂಥ ॥ ಸ್ಥಿರ ॥ ೨ ॥ ಭೇದಭೇದಗ
ಳಿದು । ತಾರಕಬ್ರಬ್ಮ । ಬೋಧೆ ತನ್ನೊಳು ತಿಳಿದು ಮೋದದಿಂ ಕಳೆಬಿಂದುನಾ
ದೋಳ್ಮುಳುಗುತ್ತ । ಆದಿ ಶ್ರೀಗುರುಮಹಲಿಂಗನಾಗಿರುವಂಥ ॥ ಸ್ಥಿರ ॥ ೩

ರಾಗ—ಕಲ್ಯಾಣಿ—ಅಟತಾಳ

೨೮. ಪತಿವ್ರತೆಯಾಗಿರಮ್ಮಾ । ಪಾರ್ವತಿಪತಿ । ಹಿತದಿ ಪಾಲಿಸುವ ನಿಮ್ಮ
ಪತಿಯೆ ದೈವವು ಯೆನುತ ಶ್ರುತಿಸಿರ । ತತಿಗಳೊಯ್ಯುತ್ತಿಹವು ಡಂಗುರ । ಹಿತ
ವರಿಸುತ ನಿಮ್ಮಪುರುಷರ । ಕ್ಷಿತಿಯೊಳೀಕ್ಷಿಸದನ್ಯ ಪುರುಷರ ॥ ಅ ॥ ವರಪತಿಯಾಜ್ಞೆ
ಯಿಂದಾ । ತಾರಕಬೋಧೆ, । ಗುರುದೇವನಿಂದರಿತು । ಪುರುಷ ಸತಿ ಶ್ರೀಗುರು
ಸಾಕ್ಷಾ । ತ್ಪರಮಶಿವನೆಂದರಿತು ಭಕ್ತಿಯೋ । ಳ್ಕರಣ ನಿರ್ಮಲದಿಂದ ನಂಬೀ । ಗುರ
ಪದಾಂಬುಜ ಸೇವೆಗೈಯ್ಯುತ ॥ ಪತಿ ॥೧॥ ವಿಮಲವಾದೆಡೆಯನೋಡಿ । ನಿಶ್ಚಲವಾಗಿ
ಕಮಲಾಸನವ ನೋಡಿ । ಕಮಲಯೇಕಾಶ್ರಿತದಿ ರಾಜಿಪ । ಕಮಲಯುಗಳ
ಮುಚ್ಚಿರಳಿದ । ಕಮಲದೊಳು ಶೋಭಿಸುವ ಶಿವಪದ । ಕಮಲತೇಜೋರಾಶಿಕೂಡಿ
ಪತಿ ॥೨॥ ವರಮುಕ್ಕೋಟಿಯತೀರ್ಥದಿ ಮಂಗಳಸ್ನಾನಾಚರಣೆಯೆಲ್ಲವತೀರಿಸಿ ಪರಮ
ಶಾಂತಿಯು ಭಕ್ತಿಯೆಂಬುವ । ಅರಿಸಿನ ಕುಂಕುಮವನಿಟ್ಟೊ । ಕರುಣವೆಂಬು
ಮುಡಿಯನುಟ್ಟು।ವಿರತಿಯೆಂಬುವ ಮುಕರವಿಟ್ಟು ॥ಪತಿ ॥೩॥ ವರಜೌಕ ಪೆಟ್ಟಿಗೆಯ
ಗುರುಕೀಲಿನಿಂ । ತೆರೆದು ಶೋಧಿಸಿ ನೋಡಿರಿ । ಇರುವ ಉನ್ನತ ಚಂದ್ರಹಾರವು
ಮೆರೆವ ವಜ್ರದಕಡಗಕಂಕಣ । ಉರುತರದ ಕಟ್ಟಾಣಿಸರಗಳ । ಧರಿಸಿ ನಿಮ್ಮ ಸ್ತ್ರೀ
ಜನ್ಮ ಸಾರ್ಥಕ ॥ ಪತಿ ॥ ೪ ॥ ಅನುಸೂಯಾದೇವಿಯಂತೆ । ಪತಿಭಕ್ತಿಯಿಂ
ನುದಿನಾಚರಿಸಿ ನೀವು । ಅನಘ ಗುರುಮಹಲಿಂಗ ನಿಮ್ಮಯ ಮನಕೆ ಸಾಕ್ಷಿಕನಾ
ತೋರುವ । ವನಜಮುಖಿಯಿನ್ನೇಳ್ವದೇನಿದೆ । ಜನನಮರಣದ ಬಾಧೆಯಳಿವುದ
ಪತಿವ್ರತೆ ॥ ೫

ರಾಗ—ನಾದನಾಮಕ್ರಿಯೆ—ಆದಿತಾಳ

೨೯. ಎಂದೂಕಾಣದೊಂದು ಸ್ವಪ್ನಕಂಡೆ ರಾತ್ರೆ । ಚಿತ್ರವಾಯ್ತೆ । ಸುಂ
ರಾಂಗಿ ಏನಹೇಳಲದರಂದವ। ಬ್ರಹ್ಮಾನಂದವ ॥ ಪ ॥ ಪಾದನಾಲ್ಕೊಂದಾದ ನವರ
ಮಯದ ಮಂಚರಚಿಸಿ । ಮೋದದಿಂದ ಹಂಸತಲ್ಪ ಏರಿ ಒಬ್ಬಳೆ । ನಿದ್ರೆಲಿದ್ದೆ
ಎಂದು ॥ ೧ ॥ ಪುತ್ರಮಿತ್ರಭ್ರಾತೃಕಳತ್ರಾಭಿಮಾನವಾ । ಕಳಚಿ ಶ್ರೀಗುರು । ಸೂ

ಕಚ್ಚಿ ನೇತ್ರಬಿಚ್ಚಿ ದಿವ್ಯಚಿದ್ಬಿಂದು । ರುಚಿಯನುಂಡೆನೆ ॥ ಎಂದು ॥ ೨ ॥ ಕಣ್ಣುಕಪ್ಪಿನ ಭವ್ಯವಾದ ಚಂದಮೂಮನ । ಪ್ರಭೆಯೊಳೊಂದು । ಹೆಣ್ಣು ಬಾಯಿದೆರೆದೆನ್ನ ನುಂಗಲದಕೆ । ಬೆರಗಾದೆನೆ ॥ ಎಂದು ॥ ೩ ॥ ಪಡುವಣಾದ್ರಿಏರಲು ಚಿದ್ಭಾನುವಿಷಯ ಚಕೋರತ್ನವು । ಒಡನೆ ಚೇತೋಪದ್ಮಿನಿಯು ನಕ್ಕ ಭಾವವ । ನೋಡುತಿದ್ದೇನೆ ॥ ಎಂದು ॥ ೪ ॥ ಎನ್ನ ಪ್ರಾಣಕಾಂತ ಗುರುಮಹಲಿಂಗ । ರಂಗದೇವನ । ಭಿನ್ನವಿಲ್ಲದ ಪಾದವನಪ್ಪಿ ಮುಕ್ತಿಭಾಗ್ಯವ । ಸೂರೆಗೊಂಡೆನೆ ॥ ಎಂದು ॥ ೫ ॥

ರಾಗ—ನಾದನಾಮಕ್ರಿಯೆ

೩೫. ಬಿಚ್ಚಿಪೇಳಿರಿದರ್ಥಬಲ್ಲ ಜಾಣರು । ನಿತ್ಯಮುಕ್ತರು । ಮುಚ್ಚು ಮೋರೆ ಯಾತಕಿನ್ನು ಕಂಡಮಾತಿಗೆ । ಉಂಡಸುಖಕೆ ॥ ಪ ॥ ಬಿಚ್ಚಿಪೇಳಿಕಾಯಪುರಿಯಲ್ಲಿ ಮೂರುಕೆರೆಗಳುಂಟು । ಅದರಲ್ಲೊಂದೂಯ್ಯೊಮಳೆಗಾಲದಲ್ಲು ತುಂಬೊದಲ್ಲ । ವಣ ಗೊದಲ್ಲ ॥ ಬಿಚ್ಚಿ ॥ ೧ ॥ ಬರಿಗೆರೆಗಳೆರಡರಮಧ್ಯೆ ಜ್ಯೋತಿರ್ಲಿಂಗವಿಹುದು । ನಿರುತ ದೇವಗಂಗೆಯಭಿಷೇಕಗೈವಳು । ಶಿವನಪ್ರೀಯಳು ॥ ಬಿಚ್ಚಿ ॥ ೨ ॥ ಪೂಜೆಯಿಲ್ಲ ರಾತ್ರಿ ಯಲ್ಲು ಹಗಲಲ್ಲು । ಆತ್ಮಲಿಂಗಕ್ಕೆ । ಪೂಜೆಗೈದರಾತ್ರಿ ಹಗಲುವಂದೆಯಾಗಿ । ದೃಢ ವಾಗಿ ॥ ಬಿಚ್ಚಿ ॥ ೩ ॥ ಹತ್ತುಯೆಂಟುಏಳುಆರುಐದುದಳದ । ಪುಷ್ಪಕೊಯ್ದು ಹಸ್ತ ವಿಲ್ಲದರ್ತಿಯಿಂದಲರ್ಚಿಸಿದನೂ ಒಬ್ಬಜಾಣನು ॥ ಬಿಚ್ಚಿ ॥ ೪ ॥ ;ಹೆತ್ತಮಾತೆ ಶಿರವ ಚಂಡಾಡಿದನು । ರಾಮನಂತೆ । ನಿತ್ಯಪೂಜ್ಯನೆನಿಸಿಕೊಂಡನಿಹದಲ್ಲಿ ;ಪರದಲ್ಲಿ ॥ ಬಿಚ್ಚಿ ॥ ೫ ॥ ಕುರುಡನಿಂತುಪೇಳೆ ಬಲುಬೆರಗಾದ । ಹೆಳವಾನು । ಥರೆಯೊಳಿದನೋಡಿ ದವಗೆ ನಾಲಿಗಿಲ್ಲ । ಪೇಳಸಲ್ಲ ॥ ಬಿಚ್ಚಿ ॥ ೬ ॥ ಜಲಕಂಠೇಶನಿಂದಸುರಿವಮೃತಾವ । ನುಂಡ ಪುರುಷ । ಸಲೆ ಗುರುಮಹಲಿಂಗರಂಗನಹನು । ನಿಸ್ಸಂಗನಹನು ॥ಬಿಚ್ಚಿ ॥೭॥

ಮಂಗಳಾರತಿ—ರಾಗ

೩೧. ಜ್ಯೋತಿ ಬೆಳಗುವೆನು । ಕರಯುಗವೆತ್ತಿ । ಜ್ಯೋತಿ ಬೆಳಗುವೆನು ॥ಪ॥ ಪಾತಕರಾಶಿಯ ದಹಿಸಿ ಜನ್ಮಂಗಳ । ಸೂತಕವಳಿದ ಶ್ರೀಗುರುವಿಗೆ ಮಂಗಳ । ಜ್ಯೋತಿ ಬೆಳಗುವೆನು ಕರಯುಗವೆತ್ತಿ ॥ ಅಪ ॥ ಶ್ರು ॥ ತ್ವಂ ಮೂಲಾಧಾರೆ ಸ್ಥಿತೋ ನಿತ್ಯಂ । ತ್ವಂ ಶಕ್ತಿತ್ರಯಾತ್ಮಕಃ । ತ್ವಾಂಯೋಗಿನೋಧ್ಯಾಯಂತಿ ನಿತ್ಯ । :ತ್ವಂ ಬ್ರಹ್ಮತ್ವಂ ವಿಷ್ಣುಃ ತ್ವಂ ರುದ್ರಃ ತ್ವ ಇಂದ್ರಃ ॥ ೧ ॥

ಆಧಾರದಲಿ ವೇದದಳ ವೇದಾಕ್ಷರಸಂಜ್ಞ । ಆದವರುಣವರ್ಣಯೋಗೀಶ್ವರಂ ಗತಾ । ಆದಿಕವಾಟವಮಂತೆರಿಯುವಲ್ಲಭೆ ಪ್ರೀಯ । ಮೋದಕಹಸ್ತಭಿದಾನಿಹಂಸಗೆ ॥ ಪರಂಜ್ಯೋತಿ ಬೆಳಗುವೆನೂ ॥ ೧ ॥

ಬ್ರಹ್ಮಾಣಂ ರತ್ನಗೌರಾಭಂ ಚತುರ್ವಕ್ತ್ರಂ ಪಿತಾಮಹಂ । ರೇಚಕೇನತು ವಿದ್ಯಾತ್ಮಂ ಚಿಂತಯೇ ಮುಂನಿಪುಂಗವಂ ॥ ೨ ॥

ಸ್ವಾಧಿಷ್ಠಾನದಿ ಮಣಿಮಂಟಪಕಾರ್ದಳ । ವಾದವಕ್ಷರವಾರು ವಿದ್ಯುತ್ಕಲೆಯು ಅಲ್ಲಿ ॥ ವಾಗ್ದೇವಿಗಾನಂದನಿಧಿಯಾಗಿ ರಾಜಿಪ । ಆದಿಕವಿಯಭಿಧಾನಿ ಹಂಸಗೆ ॥ ಪರಂಜ್ಯೋತಿ ಬೆಳಗುವೆನು ॥ ೨ ॥

ಅತಸೀಪುಷ್ಪಸಂಕಾಶಂ । ನಾಭಿಸ್ಥಾನೇ ಪ್ರತಿಷ್ಠಿತಂ । ಚತುರ್ಭುಜಂ ಮಹಾವಿಷ್ಣುಂ । ಪೂರಕೇಣವಿಚಿಂತಯೇತ್ ॥ ೩ ॥

ಮಣಿಪೂರಕದಿ ದಶದಳವು ದಶಾಕ್ಷರ । ಘನತೇಜೋಮಯ ಪೀತವರ್ಣ ಗೋಕುಲದೊಳು । ವನಜಾಕ್ಷಿಯರ ವೇಣು । ನಾದದಿಂದಾಕರ್ಷ । ವನುಮಾಡ್ಪ ವಿಷ್ಣ್ವಭಿಧಾನಿ ಹಂಸೆಗೆ । ಪರಂಜ್ಯೋತಿ ಬೆಳಗುವೆನು ॥ ೩ ॥

ಅನಾಹತಸ್ಯ ಶಬ್ದಸ್ಯ ತಸ್ಯಯೋಧ್ವನಿಃ । ಧ್ವನಿರಂತರ್ಗತಂ ಜ್ಯೋತಿಃ । ಜ್ಯೋತಿರಂತರ್ಗತಂಮನಃ । ತನ್ಮನೋ ವಿಲಯಂಯಾತಿ । ತದ್ವಿಷ್ಣೋಃ ಪರಮಂ ಪದಂ ॥ ೪ ॥

ಆರು ಅನಾಹತಮಂಟಪಕೆ ದ್ವಾರ । ಶಾರ ದ್ವಾದಶವರ್ಣ ವರ್ಣಧನಂಜಯ। ಮೂರುಕಾಲಿನಭೃಂಗಿ ನಾಟ್ಯಾದಿ ಘೋಷಿಪ । ಭೇರಿನಾದವ ಕೇಳ್ವ ರುದ್ರರೂಪಗೆ । ಪರಂಜ್ಯೋತಿ ಬೆಳಗುವೆನು ॥ ೪ ॥

ಓಂಕಾರಶ್ಚಾಥ್ರಶಬ್ದಶ್ಚ ದ್ವಾವೇತೌಬ್ರಹ್ಮಣಃಪುರಾ । ಕಂಠಂಭಿತ್ವಾವಿನಿರ್ಯಾತೌ ತಸ್ಮಾನ್ಮಂಗಳಿಕಾವುಭೌ ॥ ೫ ॥

ವರವಿಶುದ್ಧಕಷೋಡಶಾರವಕ್ಷರವಲ್ಲಿ । ಯಿರೆಪದಿನಾರುವರ್ಣವುಧೂಮ್ರ ವೋಂಕಾರ । ಸ್ವರವರ್ಣಭೇದ । ತೋರುವ ಮಾರುತರೂಪ । ವರ ಈಶ್ವರಭಿದಾನವೆತ್ತ ಹಂಸೆಗೆ । ಪರಂಜ್ಯೋತಿ ಬೆಳಗುವನು ॥ ೬ ॥

ಶ್ರು ॥ ನೀಲತೋಯಮಧ್ಯಸ್ಥಾವಿದ್ಯುಲ್ಲೇಖೇವ ಭಾಸ್ವರಾ । ನೀವಾರಶೂಕವತ್ತನ್ವೀ ಪೀತಾಭಾಸ್ವತ್ಯಣೂಪಮಾ ॥ ತಸ್ಯಾಶ್ಶಿಖಾಯಾಮಧ್ಯೇಪರಮಾತ್ಮಾವ್ಯವಸ್ಥಿತಾ । ಸಬ್ರಹ್ಮಸಶಿವಸ್ಸಹರಿಸ್ಸೇಂದ್ರಸೋಕ್ಷರಃಪರಮಸ್ಸ್ವರಾಟ್ ॥ ೭ ॥

ಅವಿರಳಾಜ್ಞೇಯಮಂಟಪದ್ವಿದಳದಲ್ಲಿ । ನವರತ್ನಕಾಂತಿಶೋಭಿತ ಹಂ ಕ್ಷಂ ಅಕ್ಷರ । ಪ್ರವಿಮಲವರಬಿಂದುಕಾರರೂಪಿನ ಸದಾ । ಶಿವನೆಂಬುವಭಿಧಾನವೆತ್ತ ಹಂಸಗೆ॥ ಪರಂಜ್ಯೋತಿ ಬೆಳಗುವೆನು ॥ ೭ ॥

ಶ್ರು ॥ ಶತಾರಂಶತಪತ್ರಪ್ರಖ್ಯಂ । ವಿಪ್ರಕೀರ್ಣಾಬ್ಜಕರ್ಣಿಕಂ । ತತ್ರ ಚಂದ್ರಾರ್ಕವಹ್ನೀನಾ । ಮುಪರ್ಯುಪರಿಚಿಂತಯೇತ್ ॥ ಸಾಸಿರದಳಪದ್ಮವಾಸ ಸಂವಿನ್ಮಾತ್ರ ಸಾಸಿರಚಂದ್ರಾರ್ಕಭಾಸಮಾನಂ ಜಗ । ದ್ವಾಸನೆಪೊಗವ ಓಂಕಾರ ಸೌಕ್ಷಿಕನಾದ । ದೇಶಿಕಮಹಲಿಂಗರಂಗಹಂಸಗೆ ॥ ಪರಂಜ್ಯೋತಿ ಬೆಳಗುವೆನು ॥ ೮ ॥

ರಾಗ—ಸುರಟ—ಆದಿತಾಳ

೩೨. ಮಂಗಳವಾಗಿ ಇದೆ । ಜಯ ಜಯ । ಮಂಗಳವಾಗಿ ಇದೆ ॥ ಪ ॥ ಕಂಗಳ ಕೊನೆಯಲಿ ಥಳಥಳ ಹೊಳೆಯುವ । ತಿಂಗಳ ಬೆಳಕಿನ ತಿಳಿರಸವುಕ್ಕುತ ॥ ಮಂಗಳವಾಗಿ ಇದೆ ॥ ಅ ॥ ಆರುಚಕ್ರವ ಮೀರೀ ಸೂಕ್ಷ್ಮ । ದ್ವಾರದೊಳಗೆ ಸೇರೀ । ಏರಿ ಸಾಸಿರದಳಪದ್ಮ ಸಿಂಹಾಸನ । ಭೂರಿಬ್ರಹ್ಮಾನಂದ ಪದವಿಯ ಸೇರಲು॥ ಮಂಗಳ ॥೧॥ ವಿರತಿಯೆಂಬುವ ಬತ್ತಿ । ಭಕ್ತಿಯು ಎರಕವಾಗಿಹತೈಲ । ಎರಡು ವೊಂದಾಗಿರ ಲರುವೆಂಬ ಜ್ಯೋತಿಯು । ಉರಿಯಲು ತಾಮಸಕತ್ತಲೆಯಳಿದು ॥ ಮಂಗಳ ॥ ೨ ॥ ರವಿ ಶಶಿ ತಾರೆಗಳ ಬೆಳಗುವ । ಪ್ರವಿಮಲಚಿತ್ಕಳೆಯೆ । ಕವಿದೊಳಗೊರಗೆಂದೆಂಬುದು ತೋರದ । ಅವಿರಳ ಗುರುಮಹಲಿಂಗನತೇಜವೇ ॥ ಮಂಗಳವಾಗಿ ಇದೆ ॥ ೩॥

ಇತಿ ತೃತೀಯ ಪ್ರಕರಣಂ ಸಮಾಪ್ತಿಃ

ಗದ್ಯ ॥ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು ಸಾರ್ವ ಭೌಮ ಶ್ರೀದತ್ತಾತ್ರೇಯ ಕರಕಮಲ ಸಂಜಾತ ಶ್ರೀ ಸದಾನಂದ ಗುರುಮಹಲಿಂಗ ರಂಗ ಯತಿವರೇಣ್ಯ ಚರಣಕಮಲ ಭೃಂಗಾಯಮಾನ ಶ್ರೀಶಂಕರಾನಂದಯೋಗೀ ವಿರಚಿತ ಕೈವಲ್ಯನವನೀತವೆಂಬ ಗ್ರಂಥದಲ್ಲಿ ತಾರಕಯೋಗವೆಂಬ ತೃತೀಯ ಪ್ರಕರಣದಿ ತತ್ವಗಳು (೨೧-೧೧೨)

ವೃತ್ತಗಳು ೩, ಸೀಸಗಳು ೨, ಕಂದಗಳು ೫, ಶ್ಲೋಕಗಳು ೮,

ಅಂತು ವಚನಗಳು ೪೦-೧೧೨ಕ್ಕೆ

ಮಂಗಳಮಸ್ತು

ಶ್ರೀರಸ್ತು

ಚತುರ್ಥ ಪ್ರಕರಣ ಪ್ರಾರಂಭವು.

ಸಾಂಖ್ಯಯೋಗವು

ಬ್ರಹ್ಮಣೋವ್ಯಕ್ತ । ಅವ್ಯಕ್ತಾನ್ಮಹತ್ । ಮಹತೋಹಂಕಾರಃ । ಅಹಂಕಾ ರಾತ್ಪಂಚತನ್ಮಾತ್ರಾಣಿ । ಪಂಚತನ್ಮಾತ್ರೇಭ್ಯೋಪಂಚಮಹಾಭೂತಾನಿ । ಪಂಚ ಮಹಾ ಭೂತೇಭ್ಯೋಖಿಲಂ ಜಗತ್ ॥

೧. ಕಂದ ॥ ಸದಮಳ ಬ್ರಹ್ಮದೊಳವ್ಯ । ಕ್ತದರಿಂ ಮಹತ್ತತ್ವವದರಿಂ ಮಹ ದಹಂಕಾರಂ ॥ ಅದರಿಂದಲೆ ಮಾತ್ರೆಗಳೈ। ದದರಿಂ ಭೂತಂಗಳಾದಿ ಜಗಮುದಿಶಿರ್ಕುಂ॥

೨. ಶಾ ॥ ವೃ ॥ ಶ್ರೀಮನ್ಮಂಜುಳ ಸಾಂಖ್ಯಯೋಗಮಮಲಂ, ತತ್ವಪ್ರಭಾ ದರ್ಪಣಂ । ವ್ಯೋಮಾದ್ಯದ್ಭುತ ಭೂತ ಪಂಚಕಮಿದಂ, ಸೃಷ್ಟಿಪ್ರಮಾಣಂಗಳಂ ।

ಶ್ರೀಮನ್ಮಾಯೆಕೃತೀಶಜೀವಜಗಮಂ, ವೈಚಿತ್ರ ಚಿತ್ರಂಗಳಂ । ಶ್ರೀಮದ್ಬ್ರಹ್ಮವಿಚಾರಿಗಳ್ಗೆ ಕ್ರಮದಿಂ ತಾಂ, ತೋರಿ ಸಂತೈಸುಗುಂ ॥

೩. ಕಂದ ॥ ಸಿಹ್ಮದ ವದನದ ಮಾಂಸವ । ಗವ್ಮನೆಯುರಗುತಲಿವಕ್ಷಿ ಮೆಲುವಂದದಲಿ ॥ ಹವ್ಮಿನ ಜಗದೋಳ್ ರಂಜಿಪ । ಬೊಮ್ಮವನರಿತಾತ ಸಾಕ್ಷಾತ್ ಬೊಮ್ಮನೆಯೆನಿಪಂ ॥

೪. ಕಂದ॥ ಬೊಮ್ಮದ ಲಕ್ಷಣವರಿತಾ। ಬೊಮ್ಮದೊಳೊಗೆದಿರುವ ಮಾಯಾ ಲಕ್ಷಣ ಸಹಿತಂ ॥ ಬೊಮ್ಮ ಪ್ರತಿಪಾದಿತಶ್ರುತಿಗಳ । ಸಮ್ಮತದಿಂದರಿಯೆ ಜ್ಞಾನವು ನಿಲುಕಡೆಯಕ್ಕುಂ ॥

ವಾಚಾಮಗೋಚರ ಬ್ರಹ್ಮ ಲಕ್ಷಣ

ಏಕಮೇವಾದ್ವಿತೀಯಂ ಬ್ರಹ್ಮ, ನೇಹನಾನಾಸ್ತಿಕಿಂಚನ । ಸದೇವಸೋಮ್ಯೇದಮಗ್ರ ಆಸೀತ್, ನಿತ್ಯಾದಿ ಶ್ರುತಿಪ್ರಮಾಣಂ ॥

ಪದ್ಯಗಳು

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೫. ಜಗದುದಯದಂತ್ಯದೊಳು ತುಂಬಿದೆ । ಅಗಣಿತನುಪಮ ಬ್ರಹ್ಮವು ॥ಪ॥ ಸ್ವಗತಭೇದವು ಪೊಗದನಿರ್ಗುಣ । ನಿಗಮವಂದಿತಬ್ರಹ್ಮವು ॥ಅ॥ ಏಕಮೇವಾದ್ವಿತೀಯಮಚಲವು । ನಾಕನಿಳಿಯ ಪ್ರಕಾಶವು। ಶೋಕಹರಸರ್ವತ್ರ ಭರಿತವು । ಲೋಕಸಾಕ್ಷಿಯದೆನ್ನಿಸಿ ॥ ಜಗ ॥ ೧ ॥ ನಿತ್ಯ ಶುದ್ಧಪ್ರಬುದ್ಧಮುಕ್ತಂ ಸತ್ಯಸಂವಿನ್ಮಾತ್ರಕಂ। ಸತ್ತುಚಿತ್ತಾನಂದರೂಪಂ । ನಿತ್ಯಪೂರ್ಣರವೆನ್ನಿಸಿ ॥ ಜಗ ॥೨॥ ಉರುತರಾನಂದೈಕರಸಮಣಿ । ನಿರುತ ಶ್ರುತಿಯ ಶಿರೋಮಣಿ । ನೆರೆ ಅವಿದ್ಯಾಧ್ವಾಂತದಿನಮಣಿ । ನಿರಘ ನಿಶ್ಚಲವೆನ್ನಿಸಿ ॥ಜಗ॥೩॥ ಅನಘನಚ್ಯುತ ಅಪ್ರಮೇಯಂ। ಜನಿರಹಿತ ಜಗದಾಶ್ರಯಂ। ವಿನುತಜ್ಞಾನಾಜ್ಞಾನಸಾಕ್ಷಿಯು । ಪ್ರಣವಪರತರವೆನ್ನಿಸಿ ॥ ಜಗ ॥ ೪ ॥ ನೆರೆಯವಾಚ್ಯಮಸಂಗಭೇದ್ಯನು । ನಿರುತಬೋಧ್ಯಾಬಾಧ್ಯನು । ಪರಮ ಗುರುಮಹಲಿಂಗರಂಗನು । ನಿರುತ ಚಿನ್ಮಯನೆನ್ನಿಸಿ ॥ ಜಗ ॥ ೫ ॥

ರಾಗ—ಆನಂದಭೈರವಿ

೬. ಪರಮಾತ್ಮನರುವೆನೊಳಗಿರು ಮಾನಸೇಂದ್ರ ॥ ಪರಮಾತ್ಮನಹೆ ನೀದು ಯೋಗಿಕುಲ ಚಂದ್ರ ॥ಪ॥ ಘನ ಸುಪ್ತಿಯೊಳು ಬೆರಿಯುದಲೆನಸಿಯದಿರುವ । ಮನನ ವೃತ್ತಿಗಳೆಂಬ ಲಿಂಗತನುಲಯವಾ ವಿನಯದಿಂದಲಿ । ಹೊಂದಿ ಹೊಂದದಲೆಯಿರುವಾ। ಅನುಪಮಾದ್ವಯ ಜ್ಞಪ್ತಿಯೆನಿಸಿಭಾಸಿಸುವ ॥ ಪರ ॥ ೧ ॥ ನಿರುತಪ್ರಾರಬುದಗಳ ನುಣಲು ಬಂದಿರುವ । ಶರೀರ ಸುಖ ದುಃಖಗಳನನುಭವಿಸುತಿರುವ । ವರಜೀವ ಭೋಗಕ್ಕೆ ಮನೆಯೊಳಗೆ ಉರಿವ । ನೆರೆ ಸೊಡರಿನಂದದಲಿ ಸಾಕ್ಷಿಯಾಗಿರುವ ॥ ಪರ ॥

ವರಜಾಗ್ರ ಮೊದಲಾದ ಮೂರವಸ್ಥೆಯೊಳು । ನಿರುತನೇತ್ರವು ಕಂಠಹೃದಯಸ್ಥಾನದೊಳು । ಬೆರತು ಜೀವೇಶ್ವರರ ಪಾಲಿಸುತಲಿರುವ ನೆರೆಪ್ರಕೃತಿ । ಪರಮಗುರುವು ಲಿಂಗನೆನಿಸಿರುವ ॥ ಪರಮಾತ್ಮನರುವೆ ॥ ೩ ॥

ಅನಿರ್ವಚನೀಯಮಾಯಾಲಕ್ಷಣ

ಮಾಯಾಕಾರ್ಯ ವಿವರಣಂ

ರಾಗ—ಆನಂದಭೈರವಿ

೭. ಅಮಮ ಮಾಯಾ ಮಹಿಮೇ ಅರಿಯಲರಿದೆಂದು । ನಮಿಸಿ ಬ್ರಹ್ಮಾದಿಗಳು ವಂದಿಸಿದರೆಂದೂ ॥ ಪ ॥ ನಿರುಪಮಧ್ವಯ ನಿತ್ಯಪೂರ್ಣನಾದ । ಪರಮಾತ್ಮನೊಳಗುದಿಸಿತವ್ಯಕ್ತಮಾದ । ವರಶಕ್ತಿ ಮಣ್ಣಿನೊಳು ಕಲಶಗಳ ಶಕ್ತಿ।ಭರದಿತೋರುವ ಚಂದದಿಂದ ಚಿಚ್ಛಕ್ತಿ । ಅಮಮ॥೧॥ ಅದು ಸತ್ತುವಲ್ಲ ಮೇಣದು ಅಸತ್ತವಲ್ಲ । ಅದು ಭಿನ್ನವಲ್ಲ ಮತ್ತದು ಅಭಿನ್ನಲ್ಲ । ಅದಕೆ ಅವಯವವಿಲ್ಲ ನಿರವಯವು ಅಲ್ಲ । ಅದು ಅನಿರ್ವಚನೀಯವೆಂಬುವರುಯೆಲ್ಲ ॥ ಅಮಮ ॥ ೨ ॥ ಜಗವೆ ಸತ್ಯವು ಬ್ರಹ್ಮಮಿಥ್ಯವೆಂದೆನಿಸಿ ತ್ರಿಗುಣಗರ್ಭಿತವಾಗಿ ತ್ರೈಲೋಕರಚಿಸಿ। ಜಗದಿ ಸರ್ವರ ಹೊಂದಿ ಪೂಜೆಗೊಂಬುವುದು । ನಿಗಮಶಿರಗಳ ಮಾತೆಯೆನಿಸಿರಾಜಿಪುದು ॥ ಅಮಮ ॥ ೩ ॥ ಪಠವ ಬಿಚ್ಚಲು ವಿವಿಧ ಚಿತ್ರ ಕಾಂಬಂತೆ । ಪಠವ ಮುಚ್ಚಲು ಚಿತ್ರಕಾಣದಿರುವಂತೆ । ಕುಟಿಲದಿಂ ಜಗವ ತೋರುವದು ತಾನೆ । ಚಟುಲದಿಂ ಮರೆಮಾಡಿಕೊಳ್ಳುವದು ತಾನೆ ॥ ಅಮಮ ॥೪॥ ಪೂರ್ಣಬ್ರಹ್ಮದಿ ಮಿಥ್ಯವಾಗಿ ತೋರಿರುವ । ಹೀನಮಾಯಾತಮವು ಮುಚ್ಚಿ ಮೂಜಗವ। ಜ್ಞಾನಹೀನರ ಗೋಣು ಮುರಿದು ನುಂಗುವದು। ತಾನೆ ಗುರುಮಹಲಿಂಗನೊಳಗೆಯಡಗುವುದು ॥ ಅಮಮ

ಮಹದಾದಿ ಜಗದುತ್ಪತ್ತಿ

ರಾಗ—ಆನಂದಭೈರವಿ

೮. ಆದಿ ಅಂತ್ಯದೊಳಿಲ್ಲದಿರುವ ಪುಸಿಮಾಯ । ಆದಿಯಿಂದಾವರಿಸಿತಾತ್ಮನಿರ್ಮಾಯ ॥ಪ॥ ಸದಮಲಾತ್ಮನೊಳಾಯ್ತು ಶಕ್ತಿಯಲಿ ರಜತ । ಮುದದಿ ತೋರುವ ಪರಿಯುಮಾಯಾಸಂಜನಿತ । ಅದು ಅವಿದ್ಯಾವ್ಯಕ್ತವದು ತ್ರಿಗುಣಮಯವು । ಅದು ಮೋಹವಜ್ಞಾನ ಜಡ ದುಃಖಮಯವು ॥ ಆದಿ ॥ ೧ ॥ ಎಂದಿಗಿಲ್ಲದ ಪ್ರಕೃತಿಯಾತ್ಮಯಾನಾವರಿಸಿ। ಕುಂದು ಹೆಚ್ಚಿನ ಮಾಯಾವಿದ್ಯೆಯೆಂದೆನಿಸಿ। ಒಂದು ಸಾತ್ವಿಕ ಒಂದು ರಾಜಸವದೆನಿಸಿ । ಛಂದದಿಂದೆರಡಾಗಿ ಇಹುದು ನಿಜವೆನಿಸಿ ॥ ಆದಿ ॥ ॥ ೨ ॥ ಪರಮ ಸತ್ವ ಪ್ರಧಾನವೆನಿಪ ಮಾಯೆಯೊಳು । ವರಮೇಘ ಜಲಕೂಡಿಕೊಂಡು ಗಗನದೊಳು। ಎರಕವಾಗಿರುವಂತೆ ಪ್ರತಿಫಲಿಸಿ ಇಹನು । ಧರೆಗೆ ಸರ್ವಜ್ಞೆಂಬ ಪೆಸರೊಡೆದು ಆತ ॥

ಆದಿ ॥೩॥ ಮಲಿನ ಸತ್ವಪ್ರಧಾನಗುಣ ಅವಿದ್ಯೆಯೊಳು। ಕಲಶ ನಭಜಲದೊಳಗೆ ಅಭ್ರ ತಾರೆಗಳು । ಹೊಳೆಯುವಂದದಿ ತಾನೆ ಪ್ರತಿಫಲಿಸಿ ಇಹನು । ನಿರುತಕಿಂಚಜ್ಞೆಂಬಡಿಸ ರೊರೆದು ಆತ್ಮ ॥ಆದಿ ॥೪॥ ಭರದಿ ವಿದ್ಯಾ ವಿದ್ಯವೆಂಬುಪಾಧಿಯನು ಧರಿಸಿ । ಈಶನ ಜೀವನೆನಿಸಿ ತೋರುವನು । ಅರಿಯಲಿಬ್ಬರು ಮಾಯಾ ಮಕ್ಕಳೆಂಬಂತೆ । ಪರಮ ಗುರುಮಹಲಿಂಗ ಸಾಕ್ಷಿಯಂತೆ ॥ ಆದಿ ಅಂತ್ಯದೊಳಿಲ್ಲ ॥ ೫ ॥

ಜೀವೇಶ್ವರರುತ್ಪತ್ತಿಯು

ರಾಗ—ಭೈರವಿ

೯. ಜೀವ ಈಶ್ವರಿಬ್ಬರೂ । ಜನಿಸಿರುವ । ಭಾವ ಭೇದವನರಿಯಲೋ ವತ್ಸ। ಜೀವ ಈಶ್ವರರಿಬ್ಬರೂ ॥ ಪ ॥ ಸತ್ವಗುಣಪ್ರತಿಬಿಂಬಿತ । ಚೈತನ್ಯ ಮತ್ತೆ ಮಾಯಾ ಧಿಷ್ಠಿತ । ಬ್ರಹ್ಮ। ಸತ್ವಗುಣಮಾಯೆ ಮೂರು। ಒಂದಾಗಿ । ಪೃಥ್ವಿಗೀಶ್ವರನೆನಿಸಿದ। ಆತ್ಮ ॥ ಜೀವ ॥೧॥ ನಿರುತ ಮಾಯೋಪಾಧಿಯು ಎನಿಪೀಶ । ಗಿರವಾಯ್ತು ಕಾರ ಣಾಂಗ । ಸುಪ್ತಿ । ಸ್ಫುರಿಸುವಾನಂದಕೋಶ । ಘನವಾಗಿ । ಸರ್ವಜ್ಞನೆಂದೆನಿಸಿದ । ಆತ್ಮ ॥ ಜೀವ ॥೨॥ ಮಲಿನಗುಣ ಪ್ರತಿಬಿಂಬಿತ। ಚೈತನ್ಯಮನುವಿನಮಾಯಾಧಿಷ್ಠಿತ। ಬೊಮ್ಮ । ಮಲಿನಗುಣ ಮಾಯೆ ಮೂರೂ। ಒಂದಾಗಿ । ಮಲಿನಜೀವನು ಎನಿಸಿದ। ಆತ್ಮ ॥ಜೀವ ॥ ೩ ॥ ವರಚಿದಾಭಾಸನೆನಿಪ । ಆಜೀವ । ಗಿರವಾಯ್ತು ಕಾರಣಾಂಗ । ಸುಪ್ತಿ । ಸ್ಫುರಿಸುವಾನಂದಕೋಶ । ದೊಳು ಸೇರಿ ನಿರುತ ಕಿಂಚಿಜ್ಞನಾದಾ । ಆತ್ಮ ॥ ಜೀವ ॥೪॥ ಕಲಶ ಜಲಪ್ರತಿಬಿಂಬಿತ । ನಭದಂತೆ । ಸಲೆಯು ನಿತ್ಯೋಪಾಧಿಯುನಿಸಿ । ತಾನೆ । ಹೊಲೆತನುವಿನಭಿಮಾನದಿಂದ । ಬಳಲಿ ತಿಳಿವ ತಾ ಗುರುರಂಗನೆಂದು ಆತ್ಮ ॥ ಜೀವ ಈಶ್ವರರಿಬ್ಬರೂ ॥ ೫ ॥

ರಾಗ—ಕೇತಾರಗೌಳ-ದ್ವಿಪದೆ

೧೦. ಜೀವ ಕರ್ಮದ ಭೋಗದನುಭವಕೆ ಜಗವನ್ನು। ತಾವಿನೋದದಿಗೈಯ್ಯ ಲನುವಾದನೀಶ್ವರನೂ ॥ ಜೀವಿ ॥ ಪ ॥ ಶುದ್ಧ ಸತ್ವ ಪ್ರಧಾನ ಮಾಯೆಯೊಳು ಬೆರತೀಶ । ಶುದ್ಧ ತಾಮಸನಾದ ಗುಣ ಪ್ರಧಾನವದೆನಿಪ । ಮುದ್ದು ಮಾಯಾದೇವಿ ಯನು ಕಣ್ದೆರದು । ಬದ್ಧದೀಕ್ಷಿಸಿದ ಸೃಷ್ಟಿಯಂ ನೆನದು ॥ ಜೀವಿ ॥ ೧ ॥ ಧರಣಿ ಯೊಳು ವಟಬೀಜನಾಟ ನೀರೆರೆಯೆ । ಸುರಿಸುತಂಕುರಶಾಖೆ ವೃಕ್ಷವಾದಂತೆ । ಭರ ದಿಂದಲಾ ಬ್ರಹ್ಮಶಕ್ತಿಯಿಂದ ವಿಚಿತ್ರ । ತರವಖಿಳ ಬ್ರಹ್ಮಾಂಡ ವಿಜೃಂಭಣವದಾಯ್ತು ಜೀವಿ ॥೨॥ ಅದು ಮಹದಹಂಕಾರ ತ್ರಿಗುಣ ಗರ್ಭಿತವು । ಪದುಳ ಸತ್ವವು ರಜವು ತಾಮಸವು ಯೆನಿಸಿ । ಅದರಿಂದ ಶಬ್ದಾದಿ ಪಂಚತನ್ಮಾತ್ರೆಗಳು ವಿದಿತಮಾದವು ಸೂಕ್ಷ್ಮ ಭೂತಂಗಳೆನಿಸಿ ॥ಜೀವಿ॥೩॥ ವರಸತ್ವಗುಣದಿಂದ ಕರಣೇಂದ್ರಿಯಾದಿಗಳು । ನೆರೆ ರಜೋಗುಣದಿಂದ ಪ್ರಾಣ ಕರ್ಮೇಂದ್ರಿಯಗಳೂ । ಉರುತಮೋಗುಣದಿಂದ

ಲೊಂದೊಂದು ಕ್ರಮವಾಗಿ । ಭರಿತ ನಭ ಮೊದಲಾದ ಭೂತವೈದೊಗದವೊ ||ಜೀವಿ || ೪ || ಇದರೊಳಗೆ ಸ್ಥೂಲ ಕಿರಿಕಾರಣವು ಯೆನೆುತ । ವಿದಿತವಾದವು ತನುತ್ರಯುಂಗಳು ತಿಳಿಯ । ಲದರೊಳಗೆ ಜೀವಿ ಪರಮಾತ್ಮರಗಲದಲೇ । ಪದುಳದಿಂದಿಹರದಕೆ ಸಾಕ್ಷಿ ಗುರುಮಹಲಿಂಗನು || ಜೀವಿ ಕರ್ಮದ || ೫ ||

೧೧. ಕಂದ || ರವಿಯಿಂದುದಿಸಿದ ಮೇಘಂ । ರವಿಯಂ ಕಾಣ್ಗೊಣದಲಾವರಿಸಿರುವಂದದಲಿ || ಪ್ರವಿಮಲ ಆತ್ಮನೊಳುದಿಸಿದ । ತವಮಾಯೆಯು ಆತ್ಮನನ್ನು ಕಾಣಿಸಿಗೊಡದೈ ||

೧೨. ಕಂದ|| ಅಗ್ನಿಯು ಪ್ರಜ್ವಲಮಾಗಲು । ಅಗ್ನಿಗೆ ಮುಸುಕಿದ್ದ ಧೂಮವು ಅಡಗುವ ಚಂದದಿ || ತನ್ನಯ ನಿಜಮನ್ನರಿಯಲು । ತನ್ನೊಳಗಾ ಮಾಯೆಯಡಗಿ ನಿರ್ಮೂಳನಪ್ಪಂ ||

೧೩. ಕಂದ || ಕಬ್ಬಿಣ ಸಂಗದ ಅಗ್ನಿಗೆ । ದೆಬ್ಬೆಯಹತಿಯಿಲ್ಲದಂತೆ ಸಂತತಲಾತ್ಮಂ || ಕೊಬ್ಬಿದ ದೇಹದ ಸಂಗದಿ । ನಿರ್ಭೇದದಿಯಿರಲು ಅಂಟವು ಸುಖದುಃಖಂಗಳ್ ||

ರಾಗ—ಕೇತಾರಗೌಳ—ದ್ವಿಪದೆ.

೧೪. ಕೇಳು ವತ್ಸನೆ ಜೀವಗಾದ ಜನ್ಮಸ್ಥಿತಿಯ । ಪೇಳುವೆನು ಸೂಕ್ಷ್ಮದಿಂ ಶ್ರುತ್ಯಾನುಭವದಿಂದಾ || ಕೇಳು ||೧|| ತಾನೆ ತನ್ನನು ಮರೆತು ಕಲ್ಪಕೋಟಿಗಳಿಂದ । ಹೀನತನುವಭಿಮಾನದಿಂ ಸಗ್ಗನರಕದಿ ಕು । ಯೋನಿಯೆಂಬ ಕುಲಾಲಚಕ್ರದಲಿ ಶಿಲ್ಕಿಮುಂ । ಗಾಣದೆ ಭವಾರಣ್ಯ ಚರಿಸುತಿರೆ ಸುಕೃತದಿಂದ || ಕೇಳು || ೧ || ವರವೃಷ್ಟಿಯಿಂದಿಳಿದು ಜೀವ ನವಧಾನ್ಯದೊಳು । ಬೆರತುಂಬುವನ್ನರಸದೊಳಣುವಾಗಿ ನಿತ್ಯ । ಸುರಿವ ಮಾಯಾಬಿಂದು ಧಾರೆಯೊಳು ಕಳೆದುಳಿದು । ವರಜನಕನುದರದಲಿ ಮೂದಿಂಗಳಿರುವಂ || ಕೇಳು ||೨|| ಜನನಿ ಜನಕರ ಮೋಹಜನಿತ ಕಾಮಾಗ್ನಿಯೊಳು । ಕ್ಷಣಿಕ ಸಂಯೋಗದಲಿ ಬೆಣ್ಣೆ ಬೆಂಕಿಯುಶಖೆಗೆ । ಜಿನಿಗಿಳಿವ ಭಂಗಿಯಲಿ ಶುಕ್ಲರೂಪಿಂದಿಳಿದು ಜನನಿರುತು ಕಮಲವರಳಿರಲ್ಕದದೊಳಗೆ ನಿಲ್ವಂ || ಕೇಳು ||೩|| ವಿನುತಶೋಣಿತ ಶುಕ್ಲ ಬೆರೆತು ಬೊಬ್ಬುಳಿಯಾಗಿ । ಘನಶಕ್ತಿಯೊಳು ಸ್ವಾತಿಬಿಂದು ಮುತ್ತಾದಂತೆ । ತನು ನಯನಕರಬರಣ ಮುಂತಾದ ಸರ್ವಾಂಗ । ತನಗೆತಾನಾಗ್ಬುದೇಳು ಮಾಸಕ್ಕೆ ಜಠರದೊಳು || ಕೇಳು ||೪|| ವನಜವಿಕಸಿತವಾಗೆ ಗಂಧವುದಿಸುವಪಾಂಗು । ತನಪೂರ್ವ ಸುಜ್ಞಾನಮುದಿಸಿ ಚೇತಿಸುತ।ಜನನಿಯುಂಣನ್ನರಸವ ನಾಭಿಯು ಮುಖದೊಳುಣುತ್ತ। ಜನನಿ ಜಠರವದೆಂಬ ನರಕದೊಳಗಿರುವ । ಕೇಳು || ೫ || ಉರುಜರಾಯುಜವೆಂಬ ಚೀಲದಿಂ ಬಿಗಿವಡೆದು । ಅರಿತು ಪೂರ್ವಾಪರದಜ್ಞಾನಾನುಭವವನ್ನು । ಕೊರಗುತೀ ಭವ ಬಾಧೆ ನೆನೆಯುತ್ತ ಮನದೊಳಗೆ । ಹೊರಗೆ ಬರಲೆಡೆಗಾಣದಲೆ ದುಃಖಿಸುತಿರುವಂ || ಕೇಳು ||೬|| ತನ್ನ ಮರತಜ್ಞಾನದಿಂದ ಬಂದೆನು ಭವಕೆ । ಇನ್ನು ಜನನಿಯ ಜಠರ

ದಿಂದ ತಾ ಪೊರಮಟ್ಟು । ಉನ್ನತಾನ್ಮಜ್ಞಾನದಿಂ ಮುಕ್ತನಾಗುವೆನು । ಎನುತಲಿ ಶಿವಧ್ಯಾನನಿಷ್ಟನಾಗಿರುವಂ ॥ ಕೇಳು ॥೭॥ ನವಮಾಸದೊಳ್ ಯೋನಿಮುಖದಿ ಜನಿಸಿ ದಾಕ್ಷಣದಿ । ಕವಿದು ಮೋಹವು ಪೂರ್ವಜ್ಞಾನವಂ ಮರೆತು । ವಿವಿಧ ಬಾಲ ಕ್ರೀಡೆ ತೋರುತ ಯೌವನದಿ । ತನೆಗರ್ವದಿಂ ಪಾಪಗೈಯ್ಯುತ್ತ ನರಕಕಿಳಿಯುವನು ॥ ಕೇಳು ॥ ೮ ॥ ಇರುತಿರುತಲೀಪರಿಯಲಂತ್ಯ ಜನ್ಮಕ್ಕೆ । ವಿರತಿಯುಪರತಿಜ್ಞಾನ ಜನಿಸಿ ತನ್ನೊಳಗೆ । ಶರಧಿ ಜಲದೊಳು ಜಲವು ಬೆರತಪರಿಯಾ ಜೀವ । ಪರಮಗುರುಮಹ ಲಿಂಗರಂಗನೋಳ್ಬೆರೆವಂ ॥ ಕೇಳು ವತ್ಸನೆ ॥ ೯ ॥

ಪಂಚಕೋಶಗಳ ವಿವರ

ರಾಗ—ಕೇತಾರಗೌಳ—ದ್ವಿಪದೆ.

೧೫. ಪಂಚಕೋಶಗಳಿಂದ ಕೂಡಿರುವದೀಕಾಯ । ಪಂಚಕೋಶಗಳಂಟದಿಹನು ನಿರ್ಮಾಯ ॥ಪ॥ ಕ್ಷೋಣಿಯೊಳು ನಿಜಜನಕ ಜನನಿಯರ ಶುಕ್ಲ । ಶೋಣಿತದಿ ಜನಿಸಿರುವ ತನುವನ್ನಮಯಕೋಶ। ಪ್ರಾಣಕರ್ಮೇಂದ್ರಿಯಗಳ್ಹತ್ತು ಒಂದಾಗಿರುತ। ಪ್ರಾಣಮಯಕೋಶವೆಂದೆನಿಸಿಕೊಂಬುವದು ॥ ಪಂಚ ॥೧॥ ಮನವು ಜ್ಞಾನೇಂದ್ರಿಯಗಳೈದು ಒಂದಾಗಿರಲು । ಘನ ಮನೋಮಯ ಕೋಶವೆಂದೆನಿಸಿಕೊಂಬುದು । ವಿನುತ ಬುದ್ಧಿಯು ಪಂಚ ವಿಷಯಗಳೊಂದಾಗಿ । ಜನಜನಿತ ವಿಜ್ಞಾನಮಯಕೋಶವೆನ್ನಿಸುವುದು ॥ ಪಂಚ ॥ ೨ ॥ ನಿರುತ ಪ್ರಿಯ ಮೋದವು ಪ್ರಮೋದ ವೃತ್ತಿಗಳು। ಬೆರೆತ ಅಜ್ಞಾನವಾನಂದಮಯಕೋಶವೆನಿಸಿ । ವರಕೋಶವೈದಕ್ಕೆ ವೈಲಕ್ಷಣನುಯೆನಿಸಿ । ಪರಮಗುರುಮಹಲಿಂಗರಾಜಿಸುತಲಿಪ್ಪಂ ॥ ಪಂಚಕೋಶ ॥ ೩ ॥

ಓಂಕಾರ ವರ್ಣನೆ

೧೯. ಸೀಸಪದ್ಯ ॥ ನಿರುತ ಈಶನ ಕಾಯ ನಾಲ್ಕು ಜೀವನ ದೇಹ । ನಾಲ್ಕು ಈ ಪರಿಯಲಷ್ಟಾಂಗವೆನಿಸಿ । ನೆರೆ ನಾಭಿ ಹೃತ್ಕಂಠ ಭ್ರೂಮಧ್ಯಸುಸ್ಥಾನ । ಜಾಗ್ರಸ್ವಪ್ನವು ಸುಪ್ತಿ ತುರ್ಯಾಸ್ಥಾನ । ಉರು ಅವಿದ್ಯಾಪಾದ ಸಲೆ ಸುವಿದ್ಯಾಪಾದ। ಆನಂದತೂರ್ಯ ಚೌಪಾದವೆನಿಸಿ । ವರನಾದ ಕಳೆ ಬಿಂದು ಮಂಡಲಕ್ಷರತ್ರಯಂ । ಶಿವಶಕ್ತಿ ಐಕ್ಯತ್ರಿಸ್ಥಾನವೆನಿಸೆ ॥

ಗೀತೆ ॥ ಸ್ಫುರಿಪ ಅಜಹರಿರುದ್ರ ಈಶ್ವರ ಸದಾ । ಶಿವನ ಪಂಚದೇವ್ತೆಗಳುಯೆಂದೆನಿಸುತ । ಶರೀರದೊಳ್ ರಾಜಿಸುವ ಓಂಕಾರವನ್ನು ಅರಿತ ಸುಜ್ಞಾನಿ ವರ ಮುಕ್ತನೆನಿಸುವನೂ ॥

ಜೀವಹಂಸನು ಅಷ್ಟದಳಪದ್ಮದಲ್ಲಿ ಸಂಚರಿಸುವಿಕೆ.

೨೭. ಕಂದ ॥ ಅನುಪನು ಅದ್ವಯ ಬೊಮ್ಮವು ಘನ ಪ್ರಕೃತಿಯು ಸಂಗದಿಂದಾತ್ಮ್ಯನುತಾ ॥ ನೆನಿಸುತ ಹಂಸನರೂಪಿಂ । ಮನಪವನಕೂಡಿ ದೇಹದಿ ರಾಜಿಸುತಿರ್ಕುಂ ॥

೧೮. ಸೀಸಪದ್ಯವು ॥ ತನೆ ಸಪ್ತಧಾತುಗಳ್ ತ್ರಿಮಲಂ ತ್ರಿಯೋನಿಗಳ್ ಪಾದ ಹಸ್ತವು ಮಸ್ತಕವಪ್ಪುವಂಥ । ನವದ್ವಾರಪುರದಲ್ಲಿ ಗುದಮೇಢ್ರ ಮಣಿಪೂರ ಹೃದಯ ಕಂಠ ಸುನೇತ್ರ ಶಿರದಮಧ್ಯ । ನವಿನವಾಗಿರುವೇಳು ಕಂಜಗಳ । ನಡುವೆನಿಪ ಅಷ್ಟದಳ ಹೃತ್ಪದ್ಮವೊಪ್ಪುತಿರಲು । ರವಿಕೋಟಿ ತೇಜದಿಂ ಬೆಳಗುತ್ತ ಪುಷ್ಪದೋಳ್ ಗಂಧ ವಡಗಿಪ್ಪಂತೆ ಯಡಗಿರುತ್ತ ॥

ಗೀತೆ ॥ ಶಿವ ಪೊಮ್ಮಹ ಈಶ ವರ ಸದಾಶಿವರ । ಹೃಧ್ಯಾನಗೋಚರದ ಹಂಸ ಜೀವನೆನಿಸುತ್ತ। ತನೆ ಪಂಜರದ ಶುಕದಂತೆ ಹೋಗುವನು । ಇಂದ್ರಿಯಂಗಳ ಮುಖದಿ ಸುಖದುಃಖಗಳನು ॥

೧೯. ಸೀಸ ॥ ಶರೀರದೊಳಿರುವೇಳುಕಮಲ ಮಧ್ಯದ ಅಧೋ ಮುಖದ ಹೃತ್ಪದ್ಮದೊಳಾಡ್ವ ಜೀವ । ನೆರೆಪೂರ್ವದಳ ತುಳಿಯೆ ಪುಣ್ಯಮತಿ ಆಗ್ನೇಯ । ದಳದಿ ನಿದ್ರಾಲಸ್ಯಯಾಮ್ಯದಳದಿ । ಉರು ಕ್ರೂರಬುದ್ಧಿ ನೈಋತಿದಳದಿ ಪಾಪಗುಣವರುಣ ದಳದಲಿ ಕ್ರೀಡೆ ವಾಯುದಳದಿ । ಚರಿಪ ಬುದ್ಧಿಯ ಸೌಮ್ಯದಳದಿ ಸುರತಾನಂದ ಈಶಾನ್ಯದಳದಲ್ಲಿ ಧರ್ಮಬುದ್ಧಿ ॥

ಗೀತೆ ॥ ವರ ಕಮಲ ಮಧ್ಯದಲಿ ವೈರಾಗ್ಯವೆನಿಸಿ । ಜಾಗ್ರಸ್ವಪ್ನವು ಸುಪ್ತಿ ಯನ್ನನುಭವಿಸುತ । ನೆರೆ ಕರ್ಮತ್ರಯ ಫಲದಿ ಮೂರು । ಲೋಕಗಳ ಚರಿಸುವಂ ವರ ಮುಕ್ತಿ ಪದವಿ ಪರಿಯಂತರ ॥

೨೦. ಸೀಸ ॥ ವರಜಾಗ್ರದೊಳು ನೇತ್ರಸ್ಥಾನವಾಸಿಯು ಯೆನಿಸಿ ಇಂದ್ರಿಯಂಗಳ ಮುಖದುದಿಸುತಿಹನು । ನೆರೆ ಸ್ವಪ್ನದೋಳ್ ಕಂಠಸ್ಥಾನದಲಿ ತೈಜಸನು ಯೆನಿಸಿ ಜಾಗ್ರದ ವಿಷಯೆನೆಸಿಯುತಿಹನು । ಉರುಸುಪ್ತಿಯೋಳ್ ಹೃದಯದಲಿ ಪ್ರಜ್ಞನೆಂದೆನಿಸಿ ತಾನ್ಪ್ರಚೂಡನು ತನ್ನ । ಮರಿಗಳನುಭರದಿ ಪಕ್ಕದೊಳಿರಿಸಿ ನಿದ್ರೈಗೈಯುವ ತೆರದಿ ಕರಣವೃತ್ತಿಯ ಲೀನಮಾಡಿಕೊಂಡು ॥

ಗೀತೆ ॥ ಪರಮ ನಿದ್ರಾನಂದವನುಭವಿಪ ಈಶ್ವರನ । ಕೂಡಿ ಮಾಯಾವೃತ್ತಿಯೆಂಬ ಸಾಧನದಿಂ । ಮರಳಿ ಜಾಗರ ಹೊಂದಿ ಮದ ವಿಕಾರವನು ತೊರೆದಾತ್ಮನೆನಿಪಂ ವರಜೀವಹಂಸಂ ॥

ಪಂಚಕರಣಂಗಳ ವಿವರ

೨೧. ಕಂದ ಚರಿಸುವ ಮನವದು ಕಂಠದಿ । ವರಬುದ್ಧಿಯು ಮುಖದಿ ನಾಭಿಯು ಸ್ಥಾನದಿ ಚಿತ್ತಂ ॥ ಉರು ಹಮ್ಮು ಹೃದಯಮಧ್ಯದಿ । ನಿರುತಂ ಜೀವಾತ್ಮ ನೇತ್ರಸ್ಥಾನದೊಳಿರ್ಪಂ ॥

ಪಂಚಾಗ್ನಿ ವಿವರ

೨೨. ಸೀಸಪದ್ಯವು ॥ ಶರೀರವ್ಯಾಪಕವಾದ ಕಾಮಾಗ್ನಿ ವರಕಾಮಿ । ಲಿಂಗ ಸ್ಥಾನಕೆ ಬಂದು ಪ್ರಜ್ವಲಿಪುದು । ಪರರ ಕೊಲ್ಲುವೆನೆಂಬ ಕೋಪಾಗ್ನಿ ವೈರಿಗಳ ನೇತ್ರ

ಸ್ಥಾನಕೆ ವೊಮ್ಮೆ ಬಂದಿರುವುದು । ವರಸುತನು ಮೃತಿಯಾದ ಶೋಕಾಗ್ನಿಯು ಜ್ಞಾನಿ ನೆನಪಿನಲ್ಲಿಯೆ ಸದಾ ನಿಂತುರಿವುದು । ವರ ಚತುರ್ವಿಧದನ್ನವ ಪಚಿವಜಠರಾಗ್ನಿಯು ನಾಭಿಸ್ಥಾನದೊಳಡಗಿಕೊಂಡಿಪ್ಪುದು ॥

ಗೀತೆ ॥ ಪರಮ ಜ್ಞಾನಾಗ್ನಿ ತನ್ನೊಳುಜ್ವಳಿಪುದು । ಅರಿತು ಈ ಪಂಚಾಗ್ನಿ ಮಧ್ಯೆ ತಪಗೆಯ್ಯದೆ । ಹೊರಗಗ್ನಿ ಕಲ್ಪಿಸುತ ತನುವನ್ನು ಸುಡುವ । ಅರೆ ಮರುಳ ಗೊಲಿಯುವಳೆ ಜ್ಞಾನಾಂಬ ಮುದದಿ ॥

ಸಪ್ತಸಾಗರಗಳ ವಿವರ

೨೩. ಸೀಸಪದ್ಯವು ॥ ಲವಣ ಸಾಗರ ಮೂತ್ರವೆಂದಿಕ್ಷು ಸಾಗರಂ ವೈಬೆವರು ಯೆಂಬವರ್ ಆರ್ಯವರರು । ತವೆ ಸುರಾರ್ಣವ ಶುಕ್ಲ ಸರ್ಪಿ ಸಾಗರ ರಕ್ತದಧಿ ಸಿಧಿಯು ಶ್ಲೇಷ್ಮವದೆಂಬುವರು ಬುಧರು । ಭುವಿಯೊಳೆಲ್ಲರುಪೇಳ್ವ ಕ್ಷೀರಸಾಗರವನ್ನು ಸ್ತನ್ಯವೆಂಬರು ಬಲ್ಲ ಭಾವಜರು । ನವಖಂಡ ಬಳಿಸಿರ್ಪ ಜಲನಿಧಿಯ । ಆನಂದಭಾಷ್ಪ ವೆಂಬರು ಬಲ್ಲ ಸೂರಿವರರು ॥

ಗೀತೆ ॥ ವಿವರಿಸಲ್ಕೀಪರಿಯ ಸಪ್ತ ಶರಧಿಗಳನು । ತನ್ನೊಳಗೆ ಭಾವಿಸುತ ಗುಣ ಭೇದವಳಿದ । ಶಿವಜ್ಞಾನಸಂಪನ್ನ ಯರಡೆಂಬುದಳಿದು । ಜಗದೊಳುತ್ತಮ ಪುರುಷನಿವನೆನ್ನಿಸುವನು ॥

ಸಪ್ತದ್ವೀಪಗಳ ವಿವರ

೨೪. ವಚನ ॥ ಜಂಬೂದ್ವೀಪ ಹಿಂದಲೆಯೆಂತಲು, ಪ್ಲಕ್ಷದ್ವೀಪ ಅಸ್ತಿಯೆಂತಲು, ಶಾಖದ್ವೀಪ ಶಿರವೆಂತಲು, ಶಾಲ್ಮಲಿದ್ವೀಪ ಚರ್ಮವೆಂತಲು, ಪುಷ್ಕರ ದ್ವೀಪ ನಖವೆಂತಲು, ಕುಶಲದ್ವೀಪ ಪಲಲವೆಂತಲು, ಕ್ರೌಂಚದ್ವೀಪ ಊರೋಮ ವೆಂತಲು, ಇಂತು ಸಪ್ತದ್ವೀಪಂಗಳಂ ಸ್ಥೂಲದೇಹದಲ್ಲಿಯೇ ಸುಜ್ಞಾನಿಗಳು ಪರಿ ಭಾವಿಸುವರು.

೨೫. ವಚನ ॥ ಇನ್ನು ಸಾಂಖ್ಯ ಸಾಗರ ಸಂಗ್ರಹವಂ, ೧೬ ಸೂತ್ರಗಳಾಗಿ ವಿವರಿಸಲ್ಪಡುವದು.

೨೬. ಕಂದ ॥ ತತ್ವಗಳಿಪ್ಪತ್ತೈದರ । ಉತ್ಪತ್ತಿಯ ವಿವರವನ್ನು ಭಾಗಾಂಶ ಗಳಂ ॥ ಉತ್ತಮ ಅಧಿದೇವ್ತೆಗಳಂ । ವಿವರಿಸುವದೈಸೆ ಪಂಚೀಕರಣದ ಚಕ್ರಂ ॥

ಮಂಗಳಾರತಿ—ರಾಗ—ಕಲ್ಯಾಣಿ

೨೭. ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ಪ॥ ವರಕಾರ್ಯ ಸ್ವರಭಾಯು ಜಡೆಮುಡಿಯು ಶೋಭಿಸುತ । ಸಿರುತ ಪೊಂಬಣ್ಣದಗಜೆ ಪ್ರಿಯನೆನಿಸಿ । ಪೊರೆವ ಮೂಲೋಕವನುಯೆನುತ ಸಾರುತಲಿರುವ ।ಕಿರಿಸಗೆಯು ಸದ್ಯೋಜಾತ ಮುಖದೀಶಗೆ॥ ಜಯ ॥ ೧ ॥ ಧವಳುರುಗ ಕೊಡೆಯೆನಿಸಿ ಧವಳಮಣಿ ಧರಿಸಿ । ಧವಳ ವೃಷಭಾರೂಢ ನೆನಿಸಿ ಮುನಿಜನರ । ನವ ಹೃದಯ ಕುಮುದಕ್ಕೆ ವರಚಂದ್ರನೆನಿಸಿರುವ । ತವೆ ವಾಮ

ದೇವಮುಖದ ಪರಮೇಶಗೆ ॥ ಜಯ ॥ ೨ ॥ ಉರಿನಯನ ಭಗನೇತ್ರಘಾತ್ಕನೆನಿಸುತ್ತ । ಸ್ಫುರಿಪವೈಶ್ವಾನರಸಹಸಾಕ್ಷನೆನಿಸಿ । ಚರಣಭಕ್ತ ಕೋಟಿಕಲ್ಪಾಂತದಘ ವಿಪಿನ । ಉರುಹಿಪೊರೆವಾಘೋರಮುಖದ ಪರಶಿವಗೆ ॥ ಜಯ ॥ ೩ ॥ ನೀಲಕಂಠನು ನೀಲ ಕಂಠವಾಹನಪಿತನು ಮೂಲಬ್ರಹ್ಮ ಅಜಾತಶತ್ರುವೆಂದೆನಿಸಿ । ಬಾಲಕರ ಅಜ್ಞಾನ ಮೇಘಮಾರುತನೆನಿಸಿ । ಪಾಲಿಸುವ ಸತ್ಪುರಷಮುಖದ ಪಶುಪತಿಗೆ ॥ ಜಯ ॥ ೪ ॥ ಕರಿಯಚರ್ಮದಪೊದಿಕೆ ಕರಿವರದಸಖನೆನಿಸಿ । ವರಯೋಗಿ ಹೃದಯದಲಿ ಕ್ರೀಡಿಸುತ ಮುದದಿ । ಪರಮಗುರುಮಹಲಿಂಗನೆಂದೆನಿಸಿ ಭಕ್ತರಂ । ಪೊರೆಯುತಿಹ ಈಶಾನ್ಯ ಮುಖದ ಈಶ್ವರನಿಗೆ ॥ ಜಯ ॥ ೫ ॥

೨೮. ಸೀಸಪದ್ಯವು ॥ ನಿರುಪಮದ್ವಯ ನಿತ್ಯತೃಪ್ತ । ನಿರ್ಮಳಗಾತ್ರಪರಮ ಪುರುಷೋತ್ತಮಗೆ ಮಂಗಳಾರ್ತಿ । ಪರಬ್ರಹ್ಮ ಪರಮೇಶಪರಮಚ್ಯುತಾನಂದ । ಶರಧಿಚಂದಿರನಿಂಗೆ ಮಂಗಳಾರ್ತಿ । ನಿರಘನಿಶ್ಚಲತತ್ವಸಚ್ಚಿದಾನಂದಾತ್ಮ । ತ್ರಿಗುಣ ಕದಿದೂರಂಗೆ ಮಂಗಳಾರ್ತಿ । ನಿರುಪಾದಿನಿಶ್ಚಲಂ ನಿತ್ಯಮಂಗಳನಾಮ । ನಿರುತ ಜನದಾಶ್ರಯಗೆ । ಮಂಗಳಾರ್ತಿ ॥

ಗೀತೆ ॥ ಉರುಅವಿದ್ಯಾತದುರವಿಗೆ । ಮಂಗಳಾರ್ತಿ । ನೆರೆತತ್ವಬೋಧಕಗೆ ವರ । ಮಂಗಳಾರ್ತಿ ಪರಮಗುರುಮಹಲಿಂಗನಿಗೆ । ಮಂಗಳಾರ್ತಿ । ವರದಕ್ಷಿಣಾ ಮೂರ್ತಿಗಿದು । ಮಂಗಳಾರ್ತಿ ॥

ಇತಿ ಚತುರ್ಥ ಪ್ರಕರಣಂ ಸಮಾಪ್ತಂ

ಗದ್ಯ ॥ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು ಸಾರ್ವ ಭೌಮ ಶ್ರೀದತ್ತಾತ್ರೇಯ ಕರಕಮಲಸಂಜಾತ ಶ್ರೀಸದಾನಂದ ಗುರುಮಹಲಿಂಗರಂಗ ಯತಿವರೇಣ್ಯ ಚರಣಕಮಲ ಭೃಂಗಾಯಮಾನ : ಶ್ರೀಶಂಕರಾನಂದಯೋಗಿ ವಿರಚಿತ ಕೈವಲ್ಯನವನೀತವೆಂಬ ಗ್ರಂಥದಲ್ಲಿ ಸಾಂಖ್ಯಯೋಗವೆಂಬ ಚತುರ್ಥಪ್ರಕರಣದಿ ತತ್ವ ಗಳು (೯–೪೫)

ವೃತ್ತಗಳು ೩, ಸೀಸಗಳು ೭, ಕಂದಗಳು ೧೦, ಶ್ಲೋಕಗಳು ೩,
ಅಂತು ವಚನಗಳು ೮೬-೫೫ಕ್ಕೆ

ಮಂಗಳಮಸ್ತು

೧ನೇ ಸೂತ್ರ ಏಕವಸ್ತು ವಿವರವು

ಬ್ರಹ್ಮ—ಸಚ್ಚಿದಾನಂದಸ್ವರೂಪ ಗುರು—ಅಜ್ಞಾನರಹಿತ
ಶಿವ—ಮಂಗಳಸ್ವರೂಪನು ಹರಿ—ಭವಹರಿಯು

ಶಾಂತ—ಶುದ್ಧ ಸತ್ವ
ನಿತ್ಯ—ಶಾಶ್ವಿತನು
ಶುದ್ಧ—ನಿರ್ಮಲನು
ಬುದ್ಧ—ಜ್ಞಾನಸ್ವರೂಪನು
ಮುಕ್ತ—ಬಂಧರಹಿತನು
ಸತ್ಯ—ಯದಾರ್ಥನು
ನಿರಘ—ಪಾಪರಹಿತನು
ನಿಷ್ಕ್ರಿಯು—ಕ್ರಿಯಾರಹಿತನು
ನಿಷ್ಕಳ—ಕಳಾರಹಿತನು
ನಿರ್ಗುಣ—ತ್ರಿಗುಣರಹಿತನು
ನಿರ್ಮಾಯ—ಮಯಾರಹಿತನು
ಅಮೃತ—ಮೃತರಹಿತನು

ಏಕಾಕ್ಷರ ಸಪ್ತಕೋಟಿ ಮಹಾ ಮಂತ್ರಗಳಿಗೆ ಮಾತೃವೆನಿಪ ಓಂಕಾರವು.

೨ನೇ ಸೂತ್ರ ಪದಾರ್ಥದ್ವಯ ವಿವರವು.

ಬ್ರಹ್ಮಮಾಯ—ಮಹೇಂದ್ರಿಯಾದಿ ವಿಲಕ್ಷಣ ಬ್ರಹ್ಮನೆನಿಸುವನೂ ದೇಹೇಂದ್ರಿಯಾದಿಗಳೇ ಮಾಯ ಎನಿಸುವದು.

ಶಿವ, ಶಕ್ತಿ—ಜಗತ್ಸಾಕ್ಷಿಕನೆ ಶಿವನು, ಜಗದ್ರೂಪಾಗಿರುವದೇ ಶಕ್ತಿ.

ದ್ವೈತ, ಅದ್ವೈತ—ಜೀವೇಶ್ವರರ ಭೇದವೇ ದ್ವೈತ, ಜೀವೇಶ್ವರರಿಗಭೇದವೇ ಅದ್ವೈತವು.

ಜೀವ, ಈಶ್ವರ—ಕಿಂಚಜ್ಞೋಪಾದಿಜೀವ, ಸರ್ವಜ್ಞೋಪಾದಿ ಈಶ.

ಜಡ, ಅಜಡ—ಜಡವೆ ದೇಹೇಂದ್ರಿಯಾದಿಗಳು, ಅಜಡನೇ ಆತ್ಮನು.

ದೃಕ್ಕು, ದೃಶ್ಯ—ನೋಡುವ ಆತ್ಮಾ ದೃಕ್ಕು, ಕಾಣುವ ಪದಾರ್ಥ ದೃಶ್ಯ.

ಸುಖ, ದುಃಖ—ಅದ್ವೈತವೇ ಸುಖವು, ದ್ವೈತವೇ ದುಃಖವು.

ಜ್ಞಾನ, ಅಜ್ಞಾನ—ಜೀವೇಶ್ವರರಿಗಭೇದವೇ ಜ್ಞಾನ, ಭೇದವೇ ಅಜ್ಞಾನವು.

ವ್ಯಷ್ಟಿ, ಸಮಷ್ಟ್ಯುಪಾದಿಗಳು—ವ್ಯಷ್ಟ್ಯುಪಾದಿ ಜೀವ, ಸಮಷ್ಟ್ಯುಪಾದಿ ಈಶನು, ವಂದುವೃಕ್ಷದಂತೆ ವ್ಯಷ್ಟಿ, ವನದಂತೆ ಸಮಷ್ಟಿ.

ಸತ್ಯ, ಮಿಥ್ಯ—ಪರಬ್ರಹ್ಮವೆ ಸತ್ಯ, ಕಾಣುವ ಈ ಜಗವೆ ಮಿಥ್ಯವು.

ಜ್ಞಾನ, ವಿಜ್ಞಾನ—ಪ್ರಪಂಚದೃಷ್ಟಿ ಜ್ಞಾನ, ಪಾರಮಾರ್ಥದೃಷ್ಟಿ ವಿಜ್ಞಾನ.

ಪರೋಕ್ಷಜ್ಞಾನ—ಲೋಕದೊಳೊಬ್ಬಾತ್ಮ ಇರುವನೆಂದರಿಯುವುದು.

ಅಪರೋಕ್ಷಜ್ಞಾನ—ಆಯಾತ್ಮನೆ ತಾನೆಂದು ಗುರುವಿನಿಂದ ಅರಿಯುವದು.

ಹಂಸಲಕ್ಷಣ—ಹಂಕಾರವೆ ಈಶನೆನಿಸುವನು, ಸಕಾರವೆ ಜೀವನೆನಿಸುವನು, ಮಧ್ಯಬಿಂದುವೆ ಐಕ್ಯವೆನಿಸಿಕೊಳ್ಳುವದು.

೩ನೇ ಸೂತ್ರ ಗುಣತ್ರಯಾದಿ ವಿವರವು

ಗುಣತ್ರಯ—ಸಾತ್ವಿಕ, ರಾಜಸ, ತಾಮಸವೆಂಬ ಗುಣಗಳು.

ಅಕ್ಷರತ್ರಯ—ಅಕಾರ, ಉಕಾರ, ಮಕಾರವೆಂಬ ಅಕ್ಷರಗಳು.

ತನುತ್ರಯ—ಅಂಗತ್ರಯ, ಪುರತ್ರಯ, ಸ್ಥೂಲ, ಸೂಕ್ಷ್ಮ, ಕಾರಣ ತನುಗಳು.

ಜೀವತ್ರಯ—ವ್ಯಾವಹಾರಿಕ, ಪ್ರಾತಿಭಾಸಿಕ, ಪಾರಮಾರ್ಥಿಕ.

ಆತ್ಮತ್ರಯ—ಜೀವಾತ್ಮ, ಅಂತರಾತ್ಮ, ಪರಮಾತ್ಮ.

ಅವಸ್ಥಾತ್ರಯ—ಧಾತುತ್ರಯ—ಜಾಗ್ರ, ಯಚ್ಚರ, ಸ್ವಪ್ನ, ಕನಸು, ಸುಷುಪ್ತಿ, ನಿದ್ರೆ.

ಈಶತ್ರಯ—ವಿರಾಟ್, ಹಿರಣ್ಯಗರ್ಭ, ಅವ್ಯಾಕೃತ.

ಶಕ್ತಿತ್ರಯ—ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ.

ಮೂರ್ತಿತ್ರಯ—ಬ್ರಹ್ಮ, ವಿಷ್ಣು, ಮಹೇಶ್ವರ.

ವೃತ್ತಿತ್ರಯ—ಶಾಂತ, ಘೋರ, ಮೂಢ.

ಲೋಕತ್ರಯ—ಸ್ವರ್ಗ, ಮರ್ತ್ಯ, ಪಾತಾಳ.

ಈಷಣತ್ರಯ—ದಾರೇಷಣ, ಸತಿ, ವಿತ್ತೇಷಣ, ಹಣ, ಪುತ್ರೇಷಣ, ಮಗ.

ಪ್ರಾರಬ್ಧತ್ರಯ—ಸಂಚಿತ, ಇಚ್ಛೆ, ಆಗಾಮಿ, ಅನಿಚ್ಛೆ, ಪ್ರಾರಬ್ಧ, ಪರೇಚ್ಛೆ.

ಮಲತ್ರಯ—ಆಣವ, ಮಾಯ, ಕಾರ್ಮಿಕ.

ದೀಕ್ಷಾತ್ರಯ—ದೃಕ್‌ದೀಕ್ಷೆ, ವಾಕ್‌ದೀಕ್ಷೆ, ಸ್ಪರ್ಶದೀಕ್ಷೆ.

ಕಾಲತ್ರಯ—ಭೂತಕಾಲ, ಹಿಂದೆ ಆದದ್ದು, ಭವಿಷ್ಯಕಾಲ, ಮುಂದೆಬರುವದು, ವರ್ತಮಾನಕಾಲ, ಈಗ ನಡಿಯುವದು.

ಕರ್ಮತ್ರಯ—ಪಾಪಕರ್ಮ, ಪುಣ್ಯಕರ್ಮ, ಮಿಶ್ರಕರ್ಮ.

ವಾಸನತ್ರಯ—ದೇಹವಾಸನೆ, ಶಾಸ್ತ್ರವಾಸನೆ, ಲೋಕವಾಸನೆ.

ಭಕ್ತಿತ್ರಯ—ಬಾಹ್ಯಭಕ್ತಿ, ಸಾತ್ವೀಕಭಕ್ತಿ, ಅನನ್ಯಭಕ್ತಿ, ರಾಜಸಭಕ್ತಿ ಏಕಾಂತಭಕ್ತಿ, ತಾಮಸಭಕ್ತಿ.

ತಾಪತ್ರಯ—೧ ಅಧ್ಯಾತ್ಮಿಕ, ದೇಹದಿಂದುಂಟಾಗುವ ವ್ಯಾಧಿ.

ಆದಿಭೂತ—ಸರ್ಪವೃಶ್ಚಿಕಾದಿಗಳಿಂದುಂಟಾಗುವ ವ್ಯಾಧಿ.

ಆದಿದೈವಿಕ—ಶಿಡ್ಲು ಗುಡುಗಿನಿಂದುಂಟಾಗುವ ಹಾನಿಗಳು.

ಪದತ್ರಯ—(ತತ್, ತ್ವ, ಅಸಿ) ಎಂದು ಮೂರು ಪದಂಗಳುಂಟು.

ತತ್ ಅಂದರೆ—ಶಿವ, ತ್ವಂ, ಅಂದರೆ, ಜೀವ, ಅಸಿ ಅಂದರೆ, ಐಕ್ಯ.

ಕರಣತ್ರಯ—ಕಾಯ, ವಾಣಿ, ವಾಕ್ಕು, ಪಾಣಿ, ಮನಸ್ಸು, ಮಾಣಿ.

ಸ್ಥಾನತ್ರಯ—ನೇತ್ರ, ಕಂಠ, ಹೃದಯ.

ಮಾಯಾತ್ರಯ—ಹೆಣ್ಣು, ಹೊನ್ನು, ಮಣ್ಣು.

ಯೋನಿತ್ರಯ—ಸ್ವಾಧಿಸ್ಥಾನ, ಹೃದಯಸ್ಥಾನ, ನೇತ್ರಸ್ಥಾನ.

ಋಣತ್ರಯ—ದೈವ, ಋಷಿ, ಪಿತೃ.

ಋಣಗಳು ಅಂದರೆ: ದೈವ ಋಣವನ್ನು ಯಜ್ಞದಿಂ, ಋಷಿಋಣವಂ ವೇದಾಧ್ಯಯನದಿಂ, ಪಿತೃಋಣವನ್ನು ಪುತ್ರೋತ್ಪಾದನದಿಂ ಪರಿಹರಿಸಿಕೊಳ್ಳಬೇಕು.

ಮತತ್ರಯ—ದ್ವೈತ, ಅದ್ವೈತ, ವಿಶಿಷ್ಟಾದ್ವೈತ.

ತ್ರಿಪುಟಿಯ ವಿವರ—ದ್ರಷ್ಟೃ, ನೋಡುವವನು, ದರ್ಶ, ನೋಟ, ದೃಶ್ಯ ಅಂದರೆ, ರೂಪು, ಯಾ ಪದಾರ್ಥ, ಜ್ಞಾತೃ, ಜೀವನು, ಜ್ಞಾನ, ಮನದಿಹೊಳೆವ ಚೈತನ್ಯ, ಜ್ಞೇಯ, ವಿಷಯಂಗಳರಿಯುವನು, ಧ್ಯಾನ, ಧ್ಯಾನಮಾಡುವವನು ಧಾತ ಧ್ಯಾನ ಧ್ಯೇಯ ಧ್ಯಾನಮಾಡುವ ವಸ್ತುವು.

ದೋಷತ್ರಯ ೮೧ ತರೆಹ ವಾತ ೬೪ ಬಗೆ ಪಿತ್ತ ೨೧೫ ವಿಧದ ಶ್ಲೇಷ್ಮಗಳು.

ತಾರಕತ್ರಯ ವಿವರ

ತಾರಕತ್ರಯ—ಪಂಚವಿಂಶತಿ ತತ್ವಗಳ ಸಾಕ್ಷಿ ತಾನೆಂದರಿವುದೆ ಸಾಂಖ್ಯವು ಮಂಡಲತ್ರಯ ಮಧ್ಯ ಆತ್ಮಜ್ಯೋತಿ ಕಾಂಬುದೆ ತಾರಕವು, ಆಯಾತ್ಮನಲ್ಲಿ ಮನಸ್ಸು ಲೀನಗೈಯ್ಯುವದೆ ಅಮನಸ್ಕವು.

—ಪೌರ್ಣಮಿ, ಪಾಡ್ಯಮಿ, ಅಮಾವಾಸ್ಯೆ, ದ್ರಿಷ್ಟಿ.

—ಅಂತರ್ಲಕ್ಷ್ಯ, ಬಹಿರ್ಲಕ್ಷ್ಯ, ಮಧ್ಯಲಕ್ಷ್ಯ.

ಇಡಾ, ಎಡಭಾಗಪಿಂಗಳ, ಬಲಭಾಗ ಸುಷುಮ್ನನಾಡಿ ಮಧ್ಯ

ರ, ಬ್ರಹ್ಮರು, ಅಧಿದೇವತೆಗಳು, ಚಂದ್ರಸ್ವರ ಸೂರ್ಯಸ್ವರ

ಐಕ್ಯ.

ೂರ್ಯಮಂಡಲ, ಚಂದ್ರಮಂಡಲ, ಅಗ್ನಿಮಂಡಲ.

ಾ ಯಮುನಾ ಸರಸ್ವತಿ ಎಂದು ಮೂರು ನದಿಗಳು.

—ವಾಯು, ಮನಸ್ಸು, ದೃಷ್ಟಿ ಕೂಡುವಿಕೆ. ಇಂದ್ರ

ತ್ಕಳೆಯೆನಿಸುವದು ಈ ೩ ಕಳೆಯೆ ವಿಷ್ಣು, ಬ್ರಹ್ಮ, ರುದ್ರ

ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ, ರುದ್ರಗ್ರಂಥಿ.

ಲೋಕ ತಾಪತ್ರಯ, ಸುಕೃತ ಕ್ಷಯಿಸುವದೆಂಬದೊಂದು, ತನಗಿಂತಲು ಇತರರು ಅತಿಶಯ ಭೋಗ ಪಡುವರೆಂಬುದೊಂದು, ಮರಳಿ ಮರ್ತ್ಯಲೋಕಕ್ಕೆ ಬೀಳುವನೆಂಬುದೊಂದು, ತಾಪವು.

೪ನೇ ಸೂತ್ರ ಚತುರ್ವೇದಾದಿ ವಿವರಣವು.

ಚತುರ್ವೇದ–ಋಗ್ವೇದ, ಯಜುರ್ವೇದ, ಅಥರ್ವಣವೇದವು.

ಮಹಾವಾಕ್ಯ ಚತುಷ್ಟಯ—ಪ್ರಜ್ಞಾನಂ ಬ್ರಹ್ಮ ಅಂದರೆ, ಪೂರ್ಣಜ್ಞಾನವೇ ಬ್ರಹ್ಮವೆಂಬ ಅರ್ಥ. ಅಹಂ ಬ್ರಹ್ಮಾಸ್ಮಿ ಅಂದರೆ, ನಾನೆ ಬ್ರಹ್ಮನಾದೆನೆಂಬುವರ್ಥ.

ತತ್ವಮಸಿ ಅಂದರೆ—ಆ ಬ್ರಹ್ಮವೆ ನೀನಾದೆಯೆಂಬುವ ಅರ್ಥ. ಅಯಮಾತ್ಮಾ
ೃಹ್ಮ ಅಂದರೆ—ಈ ಆತ್ಮವೇ ಬ್ರಹ್ಮವೆಂದರ್ಥ.

ಚತುರ್ಯುಗ, ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ.

ಚತುರ್ವಿಧಜಾತಿ—ಅಂಡಜ, ಪಿಂಡಜ, ಉದ್ಭಿಜ, ಜರಾಯುಜ ಮತ್ತು
ೀಚರಿ, ಭೂಚರಿ, ವನಚರಿ, ಜಲಚರಿಯೆನಿಸುವವು.

ಚತುರ್ದಿಕ್ಕು—ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಶಿರದಮುಂಭಾಗ ಪೂರ್ವ,
ಂಭಾಗ ಪಶ್ಚಿಮ, ಎಡಕ್ಕೆ ಉತ್ತರ, ಬಲಕ್ಕೆ ದಕ್ಷಿಣ.

ಚತುಃಪೀಠ—ಶೃಂಗಾಟಕ ನಾಲ್ಕುದಾರಿ, ಶ್ರೋತ್ರದ್ವಾರ, ನಾಶಿಕದ್ವಾರ.

ಚತುಃಕರಣ—ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ.

ಚತುರ್ವಿಧಮುಕ್ತಿ—ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ.

ಚತುರಾಶ್ರಮ—ಬ್ರಹ್ಮಚರ್ಯ, ಗೃಹೀ, ವಾನಪ್ರಸ್ಥ, ಸನ್ಯಾಸ.

ಚತುರ್ವರ್ಣ—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನು.

ಚತುಷ್ಪಾದ—ಅವಿದ್ಯಾಪಾದ, ಸುವಿದ್ಯಾಪಾದ, ಆನಂದಪಾದ, ತುರ್ಯಪಾದ

ಯೋಗಚತುಷ್ಟಯ—ಮಂತ್ರ, ಲಯ, ಹಠ, ರಾಜಯೋಗ.

ಚತುರ್ವಿಧಶುಶ್ರೂಷೆವಿವರ—ಸ್ಥಾನಶುಶ್ರೂಷೆ,ಅಂಗಶುಶ್ರೂಷೆ,ಭಾವಶುಶ್ರೂಷೆ,
ತ್ಮಶುಶ್ರೂಷೆಯನ್ನು (ಗುರುವಿಗೆ ಮಾಡತಕ್ಕದ್ದು.)

ಚತುರ್ವಿಧ ಆಹಾರ—ಭಕ್ಷ್ಯ, ಭೋಜ್ಯ, ಲೇಹ್ಯ, ಚೋಹ್ಯ.

ಅಭಾವಚತುಷ್ಟಯ—ಪ್ರಾಗ್ಭಾವ, ಪ್ರಧ್ವಂಸಾಭಾವ, ಅನ್ಯೋನ್ಯಭಾವ,
ತ್ಯಂತ ಭಾವವೆಂಬುವೆ ಬ್ರಹ್ಮದಲ್ಲಿಲ್ಲದ ಅಭಾವಗಳು.

ಚತುರ್ವಿಧಬುದ್ಧಿ—ರಸಬುದ್ಧಿ, ತೈಲಬುದ್ಧಿ, ಘೃತಬುದ್ಧಿ, ಕಂಬಳಬುದ್ಧಿ.

ಅನುಬಂಧಚತುಷ್ಟಯ—ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿ,
ಗೆಂದರೆ :—೧. ಪರಶಿವರೂಪವಾದ ಬ್ರಹ್ಮವೇ ವಿಷಯವೆನಿಸುವದು. ೨. ಚತು
ಧ ಮೋಕ್ಷವೆ ಪ್ರಯೋಜನವು. ೪. ಬೋಧ್ಯಬೋಧಕಭಾವವೇ ಸಂಬಂಧವು.
ಸಾಧನಚತುಷ್ಟಯ ಸಂಪನ್ನವೇ ಅಧಿಕಾರಿ.

ಸಾಧನಚತುಷ್ಟಯ—ಆತ್ಮಾನಾತ್ಮವಿವೇಕ, ಇಹಾಮುತ್ರಾರ್ಥಫಲಭೋಗ
ಾಗ, ಸಮಾಧಿಷಟ್ಕಸಂಪತ್ತಿ ಮುಮುಕ್ಷತೆ.

ಚತುರ್ವಿಧವಾಕ್ಕುಗಳ ವಿವರವು—ಪರಾ, ಪಶ್ಯಂತಿ, ಮಧ್ಯಮ. ವೈಖರಿ
ಬ ಚತುರ್ವಿಧವಾಕ್ಕುಗಳು ಇದರಲ್ಲಿ ಯೋಗೀಶ್ವರನ ಶರೀರದ ಮೂಲಾಧಾರ
, ಸೂಕ್ಷ್ಮವಾಗಿ ಹುಟ್ಟುವನಾದವೇ ಪರಾ ; ಅದೇನಾದವೇ ನಾಭಿಸ್ಥಾನದಲ್ಲಿ
ಕ್ಕು ಪಶ್ಯಂತಿಯನಿಸುವದು. ಆ ಪಶ್ಯಂತಿಯ ಹೃದಯದಲ್ಲಿದ್ದು ಮಧ್ಯಮ

ಯೆನಿಸುವದು. ಆ ನಾದವೆ ಕಂಠಸ್ಥಾನದಲ್ಲಿ ಪ್ರಾಣವಾಯುವಂ ಸೇರಿ ಷೋಡಶ ಸ್ವರ ವ್ಯಂಜನಾದಿಶಬ್ದದಿಂ, ಬೋಧೆಗೆ ಕಾರಣವಾದ ವಾಣಿಯು ವೈಖರಿಯೆನಿಸುವದು.

೫ನೇ ಸೂತ್ರ ಪಂಚಭೂತಾದಿ ವಿವರಣಗಳು

ಪಂಚಾಕ್ಷರಿ—ಓನ್ನಮಶ್ಶಿವಾಯ, ಶಿವಪರವಾದ ಮಹಾಮಂತ್ರವು.

ಪಂಚವಕ್ತ್ರ—ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ್ಯ ಎಂಬ ಪಂಚಮುಖಗಳು.

ಪಂಚಬ್ರಹ್ಮ—ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ.

ಪಂಚಭೂತ—ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂದರೆ, ಭೂಮಿ, ನೀರು, ಬೆಂಕಿ, ಘಾಳಿ, ಗಗನ.

ಪಂಚಶಕ್ತಿ—ಪರಾಶಕ್ತಿ, ಆದಿಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ, ಯೆನಿಸಿಪ್ಪುದೊಂದೇ ಮೂಲಪ್ರಕೃತಿಯು.

ಪಂಚಮಾತ್ರೆ—ಅಕಾರ, ಉಕಾರ, ಮಕಾರ, ಇಕಾರ, ಏಕಾರ.

ಪಂಚವರ್ಣ—ಪೀತ, ಶ್ವೇತ, ರಕ್ತ, ಹರಿತ, ಕೃಷ್ಣವೆಂಬ ಭೇದಗಳು.

ಪಂಚಕರಣ-ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ, ಜ್ಞಾತೃ.

ಪಂಚಪ್ರಾಣ-ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ.

ಪಂಚಜ್ಞಾನೇಂದ್ರಿಯ-ಶ್ರೋತ್ರ, ತ್ವಕ್ಕು, ನೇತ್ರ, ಜಿಂಹಘ್ರಾಣ (ಅಂದರೆ ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗುಯೆನಿಸುವುದು.

ಪಂಚವಿಷಯ-ಶಬ್ದ, ಸ್ಪರ್ಶ, ರೂಪ, ರಸ, ಗಂಧ, (ಅಂದರೆ) ಕೇಳುವದು, ಮುಟ್ಟುವದು, ನೋಡುವುದು, ರುಚಿಸುವದು, ವಾಸನೆ ತಿಳಿಯುವದೆಂಬರ್ಥ.

ಪಂಚಕರ್ಮೇಂದ್ರಿಯ-ವಾಕ್ಕು, ಪಾದ, ಪಾಣಿ, ಪಾಯು, ಗುಹ್ಯ (ಅಂದರೆ) ಬಾಯಿ, ಕಾಲು, ಕೈಯ್ಯಿ, ಗುದ, ಉಪಸ್ಥ ಎಂಬ ಅರ್ಥವು.

ಪಂಚದೇಹ-ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣ, ತುರ್ಯ.

ಪಂಚ ಅವಸ್ಥೆ-ಜಾಗ್ರ, ಸ್ವಪ್ನ, ಸುಷುಪ್ತಿ, ತುರ್ಯ, ತುರ್ಯಾತೀತ.

ಪಂಚದಿಕ್ಕು-ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮಧ್ಯಪ್ರದೇಶ.

ಪಂಚಮಲ-ಆಣವಮಲ, ಮಾಯಾಮಲ, ಕಾರ್ಮಿಕಮಲ, ಮಾಯೇಯಮಲ, ತಿರೋಧಾನಮಲವೆಂದು ಅರಿಯಬೇಕು.

ಪಂಚಕ್ಲೇಶ-ಅವಿದ್ಯಾ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ ಹೀಗೆಂದು ತನ್ನ ಮರೆತದ್ದೆ ಅವಿದ್ಯ, ದೇಹತಾನೆಂಬುವದೇ ಅಸ್ಮಿತೆ, ಭೋಗವೆ ರಾಗ, ಅದ ದೊರೆಯಲಿಲ್ಲವೆಂಬುವದೆ ದ್ವೇಷವು, ಇವು ನಾಲ್ಕು ಕೂಡಿದ್ದೆ ಅಭಿನಿವೇಶವೆನಿಸುವದು.

ಪಂಚಕೋಶ–ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ವೆಂದೈದು ಕೋಶಗಳು.

ಪಂಚಾಗ್ನಿ—ಕಾಮಾಗ್ನಿ, ಕೋಪಾಗ್ನಿ, ಜಠರಾಗ್ನಿ, ಶೋಕಾಗ್ನಿ, ಜ್ಞಾನಾಗ್ನಿ ಇವು ದೇಹದಲ್ಲಿ ಇರುತ್ತವೆ.

ಪಂಚಕೃತ—ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ತನುಪ್ರವೇಶ.

ಪಂಚಾಕೃತಿ—ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ಬಿಂದುವಾಕೃತಿಯೆನಿಸುವದು ಪ್ರಣವಾಕ್ಷರ.

ಪಂಚಾಶ್ರಮ—ಬ್ರಹ್ಮಚಾರಿ, ಗೃಹೀ, ವಾನಪ್ರಸ್ಥ, ಸನ್ಯಾಸ, ಅವಧೂತ ಮತ್ತು ಕುಟೀಚಕ, ಬಹೂದಕ, ಹಂಸ, ಪರಮಹಂಸ, ಅತ್ಯಾಶ್ರಮಿ ಎಂದು ಆಶ್ರಮ ಭೇದಗಳು.

ಪಂಚಭಿಕ್ಷ–ಮಾಧೂಕರ, ಅಸಂಕ್ಲುಪ್ತ, ಪ್ರಾಕ್ಪ್ರಣೀತ, ಅಯಾಚಿತ, ತಾತ್ಕಾಲಿಕವೆಂದು ಯತಿಗಳ ಭಿಕ್ಷ.

ಪಂಚಮಹಾಪಾತಕ—ಬ್ರಹ್ಮಹತ್ಯೆ, ಗೋಹತ್ಯೆ, ಶಿಶುಹತ್ಯೆ, ಭ್ರೂಣಹತ್ಯೆ, ಸ್ವರ್ಣಸ್ತೇಯವೆಂದು ಪಾತಕ ಭೇದಗಳು.

ಪಂಚಕರ್ಮ—ನಿತ್ಯ, ನೈಮಿತ್ತಿಕ, ಪ್ರಾಯಶ್ಚಿತ್ತ, ಕಾಮ್ಯ, ನಿರ್ಮಲ, ಪಂಚಸ್ನಾನ, ಜಲಸ್ನಾನ, ಭಸ್ಮಸ್ನಾನ, ಮಂತ್ರಸ್ನಾನ, ಅಗ್ನಿಸ್ನಾನ, ಜ್ಞಾನಸ್ನಾನವೆಂದು ಸ್ನಾನಭೇದಗಳು,

ಪಂಚಬ್ರಹ್ಮ—ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣವೆ ಬ್ರಹ್ಮದ ಪಂಚಲಕ್ಷಣಗಳು.

ಪಂಚಮಾಯಾಲಕ್ಷಣ—ಅನೃತ, ಜಡ, ದುಃಖ, ನಿತ್ಯ, ಖಂಡಿತವೆ ಮಾಯಾ ಪಂಚಲಕ್ಷಣಗಳು.

ಪಂಚಗುರುಲಕ್ಷಣ—ದೇವಗುರು, ರಾಕ್ಷಸಗುರು, ಪೈಶಾಚಗುರು, ನರಗುರು ಪಶುಗುರು ಇದರಲ್ಲಿ ದೇವಗುರುವಧಿಕನು.

ಪಂಚಾಧಿಕಾರಿಗಳು—ಕರ್ಮಿ, ಮುಮುಕ್ಷು, ಅಭ್ಯಾಸಿ, ಅನುಭಾವಿ ಆರೂಢ ಮೆನಿಸುವರು.

ಪಂಚಮುದ್ರೆ—ಶಾಂಭವಿ, ಷಣ್ಮುಖಿ, ಖೇಚರಿ, ಭೂಚರಿ, ಮಧ್ಯಲಕ್ಷಣ

ಪಂಚಸೂತಕ—ಜಾತಿಸೂತಕ, ಜನನಸೂತಕ, ಮರಣಸೂತಕ, ರಜಸ್ಸೂತಕ, ಉಚ್ಛಿಷ್ಟಸೂತಕವೆಂದು ಭೇದಗಳು.

ಪಂಚಪ್ರಳಯನಿತ್ಯ–ಪ್ರಳಯ, ನೈಮಿತ್ತಿಕಪ್ರಳಯ, ದೈನಂದಿನಪ್ರಳಯ ಬ್ರಹ್ಮಪ್ರಳಯ, ಮಹಾಪ್ರಳಯವೆಂಬಿವೆ ಪಂಚಪ್ರಳಯಂಗಳೆನಿಸುವವು.

೬ ಸೂತ್ರ ಷಡಾಧಾರಾದಿ ವಿವರಣ

ಅಕ್ಷರ—ಓಂನಮಶ್ಶಿವಾಯ, ಶಿವಸಂಬಂಧ ಮಂತ್ರ.

ಆರುಚಕ್ರ—ಆಧಾರ, ಸ್ವಾಧಿಷ್ಟಾನ, ಮಣಿಪೂರಕ, ಅನಾಹುತ, ವಿಶುದ್ಧ ಆಜ್ಞೇಯವೆಂಬ ಚಕ್ರಗಳು ದೇಹದಲ್ಲಿ ಇರುವವು.

ಆರುಸ್ಥಾನ—ಗುದ, ಮೇಢ್ರ, ನಾಭಿ, ಹೃದಯ, ಕಂಠ, ನೇತ್ರ.

ಷಡ್ಚಕ್ರಗಳ ವಿವರ

ಸ್ಥಾನ	ದಳ	ವರ್ಣ	ಅಧಿಪತಿ	ವಿವರ
ಗುದ	೪ ದಳ	ಸುವರ್ಣ	ಗಣಪತಿ	ನಾಶಿಕಕ್ಕೆಕಾರಣ
ಲಿಂಗ	೬ ದಳ	ರಕ್ತ	ಬ್ರಹ್ಮ	ರಸನೆಗೆಕಾರಣ
ನಾಭಿ	೧೦ ದಳ	ಪೀತ	ವಿಷ್ಣು	ನೇತ್ರಕ್ಕೆ ಕಾರಣ
ಹೃದಯ	೧೨ ದಳ	ಶ್ವೇತ	ರುದ್ರ	ತ್ವಕ್ಕೆಗೆಕಾರಣ
ಕಂಠ	೧೬ ದಳ	ನೀಲ	ಈಶ್ವರ	ಶ್ರೋತ್ರಕಾರಣ
ನೇತ್ರ	೨ ದಳ	ಮಾಣಿಕ್ಯ	ಸದಾಶಿವ	ಕರಣಕ್ಕೆ ಕಾರಣ

ಷಟ್ ಶಾಸ್ತ್ರ, ಶಿಕ್ಷೆ, ವ್ಯಾಕರಣ, ಛಂದಸ್ಸು, ಮಿಾಮಾಂಸ ಜ್ಯೋತಿಷ.

ಷಡಾಧ್ವಗಳು—ಮಂತ್ರಾಧ್ವ-೧೧, ಪದಾಧ್ವ-೪೧, ವರ್ಣಾಧ್ವ-೫೧, ಭುವನಾಧ್ವ-೩೬, ಕಥಾಧ್ವ-೨೨೪.

ಷಡ್ರುಚಿ—ಲವಣ, ಆಮ್ಲ, ತಿಕ್ತ, ಕಟು, ಕಷಾಯ, ಮಧುರ.

ಷಡ್ಭಾವ—ಅಸ್ತಿ, ಜಾಯತೆ, ವರ್ದತೆ, ಪರಿಣಮಿತ, ಅಪಕ್ಷೀಯುತ, ವಿನಶ್ಯತಿ.

ಷೂಡರ್ಮಿಗಳು—ಜರಾ ಮರಣ ಎರಡು ದೇಹಕ್ಕೆ ಕ್ಷುತಿಪಾಸಗಳು ೨, ಪ್ರಾಣಕ್ಕೆ ಶೋಕ ಮೋಹ ಎರಡು ಮನಕ್ಕೆ ಈಷಣೂರ್ಮಿರಹಿತ ಆತ್ಮನು.

ಷಟ್ಕೋಶ—ರಕ್ತ, ಮಾಂಸ, ಚರ್ಮ, ಮಾತೃಸಂಬಂಧ, ವೀರ್ಯಮಜ್ಜೆ, ಮೇಧಸ್ಸು, ಪಿತೃಸಂಬಂಧ.

ಷಣ್ಮತಗಳು—ಶೈವ, ಶಾಕ್ತ, ವಿಷ್ಣು, ಗಾಣಾಪಥ್ಯ, ಸೌರ, ಕಾಪಾಲಿಕ.

ಷಡ್ವರ್ಗಗಳು—ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂದು ಕಾಮದಿಂದಲೆ ಕ್ರೋಧಾದಿ ಗುಣಗಳು ಹುಟ್ಟಿದವು.

ಶಮಾಧಿಷಟ್ಕ—ಶಮೆ, ದಮೆ, ಶಾಂತಿ, ತಿತೀಕ್ಷೆ, ಸಮಾಧಾನ, ಶ್ರದ್ಧೆ.

ಈಶನಕಲ್ಯಾಣ ಗುಣಷಟ್ಕ—೧ ಸರ್ವಜ್ಞತ್ವ ಸರ್ವವೂ ತಿಳಿಯೋಣ. ೧ ಸರ್ವೇಶ್ವರತ್ವ ಸರ್ವರಿಗು ಪ್ರಭು. ೧ ಸರ್ವಾಂತರಾಮಿತ್ವ ಸರ್ವದಲ್ಲಿ ತುಂಬಿರೋಣ. ೧ ಸರ್ವಸೃಷ್ಟೃತ್ವ ಸರ್ವವನ್ನು ನಿರ್ಮಾಣಮಾಡುವದು. ೧ ಸರ್ವರಕ್ಷತ್ವ ಸರ್ವವನ್ನು ಪಾಲಿಸುವದು. ೧ ಸರ್ವಸಂಹಾರತ್ವ ಸರ್ವವನ್ನು ಲಯಮಾಡುವದು.

೭ನೇ ಸೂತ್ರ ಸಪ್ತಾವಸ್ಥಾಗಿ ವಿವರಣ

ಸಪ್ತಾವಸ್ಥೆ—ಅಜ್ಞಾನ, ಆವರಣ, ವಿಕ್ಷೇಪ, ಪರೋಕ್ಷಜ್ಞಾನ, ಅಪರೋಕ್ಷ ಜ್ಞಾನ, ಶೋಕನಿವೃತ್ತಿ, ನಿರಂಕುಶತೃಪ್ತಿ.

ಸಪ್ತಜ್ಞಾನಭೂಮಿಕೆ—ಸುಖೇಚ್ಛ, ಆತ್ಮವಿಚಾರ, ನಿಸ್ಸಂಗ, ವಾಸನಾಕ್ಷಯ, ಆನಂದಿನೆ, ತುರ್ಯ, ತುರ್ಯಾತೀತ.

ಅಜ್ಞಾನಭೂಮಿಕೆ—ಬೀಜಜಾಗ್ರ, ಜಾಗ್ರ, ಮಹಾಜಾಗ್ರ, ಜಾಗ್ರಸ್ಸ್ವಪ್ನ, ಸ್ವಪ್ನ, ಸ್ವಪ್ನಜಾಗ್ರ, ಸುಷುಪ್ತಿ.

ಸಪ್ತವ್ಯಸನ—ತನುವ್ಯಸನ, ಮನೋವ್ಯಸನ, ಧನವ್ಯಸನ, ರಾಜ್ಯವ್ಯಸನ ವಿಶ್ವವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ.

ಸಪ್ತಾವರಣ—ಮನ, ಬುದ್ಧಿ, ಚಿತ್ತ, ಹಂಕಾರ, ಜೀವ, ತನುವು, ಮಾಯೆ.

ಸಪ್ತಮಾತೃಕಿ—ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿ.

ಸಪ್ತಜಿಹ್ವಯಜೇಶ್ವರನಿಗೆ—ಕಾಳಿ, ಕರಾಳಿ, ಮನೋಜವ, ಸುಲೋಹಿತೆ, ಸುಧೂಮ್ರವರ್ಣ, ಸ್ಫುಲಿಂಗಿ, ವಿಶ್ವರುಚಿ.

ಸಪ್ತಸಮುದ್ರ—ಲವಣ, ಇಕ್ಷು, ಸುರೆ, ಸರ್ಪಿ, ದಧಿ, ಕ್ಷೀರ, ಜಲ.

ಸಪ್ತಧಾತು—ರಸ, ರುಧಿರ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ, ರೇತಸ್ಸು.

ಸಪ್ತಲೋಕ—ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ.

ಸಪ್ತಪಾತಾಳ—ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳ.

೮ನೇ ಸೂತ್ರ ಅಷ್ಟಾಂಗಯೋಗಾದಿ ವಿವರಣ

ಅಷ್ಟಾಂಗಯೋಗ—ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ.

ಅಷ್ಟಾನಂದ,—ವಿಷಯಾನಂದ, ಬ್ರಹ್ಮಾನಂದ, ವಾಸನಾನಂದ, ಮುಖ್ಯಾನಂದ, ನಿಜಾನಂದ, ಆತ್ಮಾನಂದ, ಅದ್ವೈತಾನಂದ, ವಿದ್ಯಾನಂದವೆನಿಸುವವು.

ಅಷ್ಟಾದಳಪದ್ಮ—ಪೂರ್ವದಳದಿ, ಪುಣ್ಯಬುದ್ಧಿ, ಆಗ್ನೇಯದಿ, ನಿದ್ರೆ.

ಯಮದಳದಿ—ಕೋಪ, ನೈರುತ್ಯದಳದಿಪಾಪ, ವರುಣ ದಳದಿ ಕ್ರೀಡೆ.

ವಾಯುದಳದಿಗಮನ—ಕುಬೇರದಳದಿ ಸುರತ, ಈಶಾನ್ಯದಳದಿ ಧರ್ಮಗುಣ, ಈ ಮೇರೆ ಅಷ್ಟದಳದಲ್ಲಿ ಜೀವಹಂಸನು ಚರಿಸುತ್ತಾನೆ.

ಅಷ್ಟತನುವು—ಅಷ್ಟಮೂರ್ತಿ ಪುರ್ಯಷ್ಟಕ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮರೆಂದು ಶಿವನ ಅಷ್ಟತನುವುಗಳು.

ಅಷ್ಟಮದಗಳ ವಿವರವು—ಕುಲಮದ, ಶೀಲಮದ, ಧನಮದ, ರೂಪಮದ, ಯೌವ್ವನಮದ, ವಿದ್ಯಾಮದ, ರಾಜಮದ, ತಪೋಮದ.

ಅಷ್ಟಪಾಶ–ಕರುಣ, ಶಂಕೆ, ಭಯ, ಲಜ್ಜಾ, ಜಿಗುಪ್ಸಾ, ಕುಲ, ಶೀಲ, ಜಾತಿ. ಅಷ್ಟಾಂಗಪ್ರಣಾಮ–ಉರಸು, ಶಿರಸ್ಸು, ದ್ರಿಷ್ಟಿ, ಮನಸ್ಸು, ಶ್ರದ್ಧೆ, ಪಾದದ್ವಯ ಹಸ್ತದ್ವಯ, ಕರ್ಣದ್ವಯವೆನಿಸಿಹುದು.

ಅಷ್ಟಗುರುಗಳು—ಭೋದಕಗುರು, ವೇದಕಗುರು, ನಿಷಿದ್ಧಗುರು, ಕಾಮ್ಯ ಗುರು, ಸೂಚಕಗುರು, ವಾಚಕಗುರು, ಕಾರಣಗುರು, ವಿಹಿತಗುರು, ಇವರಲ್ಲಿ ಕಾರಣ ಗುರು ವಿಹಿತಗುರುವೆ ಮುಖ್ಯ.

ಅಷ್ಟಪುಷ್ಪ—ಅಹಿಂಸ, ಇಂದ್ರಿಯನಿಗ್ರಹ, ಭೂತದಯೆ, ಕ್ಷಮೆಧ್ಯಾನ, ತಪಸ್ಸು, ಯೋಗ, ಸತ್ಯ ಇಂತು ಅಷ್ಟಪುಷ್ಪ.

ಅಷ್ಟನರಕಗಳು—ರೌರವ, ಧ್ವಾಂತ, ಶೀತ, ಉಷ್ಣ, ಸಂತಾಪ, ಅಂಬುಜ, ಮಹಾಂಬುಜ, ಕಾಲಸೂತ್ರ.

೯ನೇ ಸೂತ್ರ ನವವಿಧಭಕ್ತ್ಯಾದಿ ವಿವರಣೆ

ನವವಿಧಭಕ್ತಿಯ ವಿವರ—ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ, ಇದಕ್ಕೆ ವಿವರ—ಪರಿಕ್ಷಿದ್ರಾಯಗೆ ಶ್ರವಣದಿಂ, ನಾರದಂಗೆ ಗಾನದಿಂ, ಪ್ರಹ್ಲಾದಂಗೆ ಸ್ಮರಣೆಯಿಂ, ಲಕ್ಷ್ಮಿಗೆ ಪಾದ ಸೇವೆಯಿಂ, ಪೃಥುರಾಜಂಗೆ ಅರ್ಚನೆಯಿಂ, ಅಕ್ರೂರಂಗೆ ವಂದನೆಯಿಂ, ಹನುಮಂತಗೆ ದಾಸತ್ವದಿಂ, ಪಾರ್ಥಂಗೆ ಸಖ್ಯತ್ವದಿಂ, ಬಲಿಗೆ ಆತ್ಮನಿವೇದನದಿಂ ಈ ಮೇರೆ ಭಕ್ತಿ ಸಿದ್ಧಿಸಿತು.

ನವಗುಣಗಳು–ಸಾತ್ವೀಕ, ರಾಜಸ, ತಾಮಸವೆಂಬ ಮೂರು ಗುಣಗಳಲ್ಲಿ ಒಂದೊಂದರಲ್ಲಿ ಇವೆ ಮೂರು ಗುಣಗಳು ಸೇರಿ ನವಗುಣವೆನಿಸುತ್ತೆ.

ನವಚಕ್ರಗಳು—ಆಧಾರ, ಸ್ವಾಧಿಷ್ಟಾನ, ಮಣಿಪೂರಕ, ಅನಾಹುತ, ವಿಶುದ್ಧ ಆಗ್ನೇಹು, ಸಹಸ್ರಾರ, ಶಿಖಾ, ಪಶ್ಚಿಮ.

ನವರತ್ನಗಳು—ಪೀತ, ಶ್ವೇತ, ರಕ್ತ, ಹರಿತ, ಕಿಷ್ಣ, ನೀಲ, ಕರ್ಬುರು, ವಯ ಜಿಷ್ಟ ಸುನೀಲ.

ನವವಿಧಪ್ರಪಂಚವು–ಪ್ರಾಣಪಂಚಕ, ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಭೂತಪಂಚಕ, ಅಂತಃಕರುಣಚತುಷ್ಟಯ, ಸ್ಥೂಲಶರೀರಕರ್ಮ ಅವಸ್ಥಾತ್ರಯ, ಇವಕ್ಕೆ ಕಾರಣವಾದ ಅಜ್ಞಾನ.

೧೦ನೇ ಸೂತ್ರ ದಶೇಂದ್ರಿಯಾದಿಗಳ ವಿವರ

ದಶೇಂದ್ರಿಯ—ವಾಗಾದಿ, ಕರ್ಮೇಂದ್ರಿಯ, ಶ್ರೋತ್ರಾದಿ, ಜ್ಞಾನೇಂದ್ರಿಯ

ದಶವಾಯುಗಳು—ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ,

ದಶನಾಡಿಗಳು—ಇಂಡಾಪಿಂಗಳ, ಸುಷುಮ್ನ, ಗಾಂಧಾರಿ, ಹಸ್ತಿನಿ, ಪೂಷ, ಅಲಂಬುದ ಯಶ್ವಿನಿ, ಕುರು, ಶಂಕಿನಿ,

ದಶಕಳೆಗಳು—ದ್ರೂಮಾರ್ಚಿ, ಉಷ್ಮಾ, ಜ್ವಲಿನಿ, ಜ್ವಾಲಿನಿ, ವಿಸ್ಫುಲಿಂಗಿನಿ ಸುರೂಪ, ಕಪಿಲ, ಹವ್ಯವಹ, ಕವ್ಯವಹಃ

ದಶನಾದಗಳು—ಛಿಣೀ, ಛಿಣಿಛಿಣಿ. ಘಂಟ, ಶಂಖ, ತಂತ್ರಿ, ತಾಳ, ವೇಣು ಭೇರಿ, ಮೃದಂಗ, ಮೇಘನಾದ.

೧೧ನೇ ಸೂತ್ರ ಏಕಾದಶೇಂದ್ರಿಯಾದಿ ವಿವರಣ

ಏಕಾದಶೇಂದ್ರಿಯಗಳು—ಸ್ತೋತ್ರಾದಿ ಪಂಚಜ್ಞಾನೇಂದ್ರಿಯ, ವಾಸನಾದಿ ಪಂಚಕರ್ಮೇಂದ್ರಿಯ, ಮನಸ್ಸು ಸೇರಿ ೧೧ ಇಂದ್ರಿಯಗಳು.

ಏಕಾದಶರುದ್ರರು—ವೀರಭದ್ರ, ಶಂಭು, ಗಿರೀಷ, ಅಜೈಕಪಾತ್, ಅಹಿರ್ಬುಧ್ನ, ಪಿನಾಕಿ, ಸ್ಥಾಣು, ಪಶುಪತಿ, ಭವ, ಉಗ್ರ, ತ್ರಿಪಟ್ಟ.

೧೨ನೇ ಸೂತ್ರ ಸೂರ್ಯಕಳಾದಿ ವಿವರಣ

ದ್ವಾದಶಕಳ—ಸೂರ್ಯನಿಗೆ ತಪನಿ, ತಾಪನಿ, ಧೂಮ್ರ, ಮರೀಚಿ, ಸುಸಮ್ಮ, ಭೋಗದೆ, ವಿಶ್ವಭೋದಿನಿ, ಧರಣಿ, ಕ್ಷಮೆ, ಪ್ರಭೆಯೆಂಬ ದ್ವಾದಶಕಳೆ ಒಪ್ಪುತಿಹುದು.

೧೩ನೇ ಸೂತ್ರ ತ್ರಯೋದಶ ವಿಶ್ವೇದೇವತೆಗಳು

ತ್ರಯೋದಶ ವಿಶ್ವೇದೇವರು—ಸತ್ಯ, ವಸು, ದಕ್ಷ, ಕ್ರತು, ಧುರಿ, ವಿಲೋಚನ, ಕಾಲ, ಕಾಮುಖ ಪುರೂರವ, ಆರ್ದ, ಧನು, ರುಚಿ, ಸಂಜ್ಞಿಕ.

೧೪ನೇ ಸೂತ್ರ ಚತುರ್ದಶಕರಣಾದಿಗಳ ವಿವರ

ಚತುರ್ದಶಕರಣಗಳು—ಮಾನಸಾದಿ ನಾಲ್ಕುಕರಣಗಳು ಪಂಚಜ್ಞಾನೇಂದ್ರಿಯಗಳು ಪಂಚಕರ್ಣೇಂದ್ರಿಯಗಳು.

ಚತುರ್ದಶ ಅಧಿದೇವತೆಗಳು—ದಿಕ್ಕು, ವಾತ, ಅರ್ಕ, ವರುಣ, ಅಶ್ವಿನಿ, ಅಗ್ನಿ, ಉಪೇಂದ್ರ, ಇಂದ್ರ, ಅಜ, ಮೃತ್ಯು, ಚಂದ್ರ, ಬ್ರಹ್ಮ, ವಿಷ್ಣು, ರುದ್ರ.

ಚತುರ್ದಶ ಭುವನಂಗಳು—ಸ್ವರ್ಗಾದಿ ಭೂಲೋಕಗಳು, ೭ ಪಾತಾಳಾದಿ ಲೋಕಂಗಳು ೭ ಅಂತು ಹದಿನಾಲ್ಕು ಲೋಕಂಗಳು.

೧೫ನೇ ಸೂತ್ರ ಪಂಚದಶಸ್ಥಾನಾದಿಗಳ ವಿವರಣ

ಪಂಚದಶಸ್ಥಾನಗಳು—ಹೆಬ್ಬೆಟ್ಟು, ಹಿಮ್ಮಡಿಹರಡು, ಮೊಳಕಾಲು, ಜಘನ, ನಾಭಿ, ಹೃದಯ, ಕುಚ, ಕಕ್ಷ, ಕಂಠ, ಕದಪು, ತುಟಿ, ಕಣ್ಣು, ಫಣೆ, ನೆತ್ತಿ.

ಪಂಚದಶಯೋಗಾಂಗ—ಯುಮ, ನಿಯಮ, ತ್ಯಾಗ, ಮೌನ, ಏಕಾಂತ, ಆನಂದ, ಕಾಲ, ಸುಖಾಸನ, ಮೂಲಬಂಧ, ದೇಹಸಾಮ್ಯ, ದೃಶ್ಯ, ಪ್ರಾಣಾಯಾಮ ಪ್ರತ್ಯಾಹಾರ, ಧ್ಯಾನ, ಧಾರಣ.

೧೬ನೇ ಸೂತ್ರ ಷೋಡಶಸ್ವರಾದಿ ವಿವರಣ

ಷೋಡಶಸ್ವರ—ಮನುಷ್ಯರ ಕಂಠಸ್ಥಾನದಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಒ ಓ ಔ ಅಂ ಎಂಬ ೧೬ ಸ್ವರಾಕ್ಷರಗಳ ಷೋಡಶಸ್ವರವೆನಿಸುವುವು.

ಷೋಡಶಕಳಾ—ಶಿನಿ, ಚಂದ್ರಿಕೆ,ಕಾಂತಿ, ಜ್ಯೋತ್ಸ್ನ, ಶ್ರೀ, ಅಂಗದೆ, ಪೂರ್ಣೆ, ಅಮೃತೆ, ಕಾಮದಾಯಿನಿ, ಎಂದು ಚಂದ್ರನಿಗೆ ಷೋಡಶಕಳೆಗಳೊಪ್ಪುತಿಹವು.

೯೬ ತತ್ವಗಳ ವಿವರ

ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪ್ರಾಣ ವಿಷಯಪಂಚಕ ಚತುಃಕರಣ ಶೇರಿ ೨೪ ತತ್ವಗಳು ಪ್ರಕೃತಿಸಮ್ಮಂಧವೆನಿಸುವದು. ೨೫ನೇ ತತ್ವಾತ್ಮಕ ಜೀವನು ೨೬ನೇ ತತ್ವಾತ್ಮಕ ಈಶನು ಈ ಜೀವೇಶ್ವರರ ಸಮ್ಮೇಳನವೇ ೨೬ನೇ ತತ್ವಾತ್ಮಕ ಪರಬ್ರಹ್ಮ. ಈ ಪರಬ್ರಹ್ಮವೇ ತಾನೆಂದರಿಯುವದೇ ಸಾಂಖ್ಯಯೋಗ ಸಾರಾಂಶವು.

ಮೇಲೆ ಹೇಳುವಂತೆ ಜೀವನು ಸೇರಿ ೨೫ ತತ್ವಗಳು ೫ ಭೂತಗಳು ೩ ತನುವುಗಳು ೩ ಅವಸ್ಥೆಗಳು ಶೇರಿ ೩೬ ತತ್ವಗಳೆನಿಸುವವು ಮತ್ತು ೬ ವರ್ಗ ೬ ಉರ್ಮಿ ೬ ಭಾವ ೬ ಕೋಶಕ ೩ ಜೀವರು ೩ ಗುಣ ೩ ಕರ್ಮ ವಚನದಾನಾದಿ ಪಂಚಾನಂದ ೪ ಕರಣಗಳ ವಿಷಯ ಮೈತ್ರಿಯಾದ ಚತುಷ್ಟಯ ೧೪ ಅಧಿದೇವತೆಗಳು ಸೇರಿ ೯೬ ತತ್ವಗಳೆನಿಸುವವು.

ಶ್ರೀರಸ್ತು.

ಪಂಚಮ ಪ್ರಕರಣ ಪ್ರಾರಂಭವು.

ಅಮನಸ್ಕ ರಾಜಯೋಗವು

ಶ್ಲೋ ॥ ಬೋಧೋನ್ಯಸಾಧನೇಭ್ಯೋಹಿ । ಸಾಕ್ಷಾನ್ಮೋಕ್ಷೈಕ ಸಾಧನಂ ಪಾಕಸ್ಯವಹ್ನಿವದ್ಜ್ಞಾನಂ । ವಿನಾಮೋಕ್ಷೋನಸಿಧ್ಯದಿ ॥

ಕಂದ ॥ ಜ್ಞಾನೊಂದಿಲ್ಲದೆಮುಕ್ತಿಯು । ನಾನಾಸಾಧನೆಗಳಿಂದಲಭಿಸಿದದೆಂತೆನೆ॥ ಜಾಣನು ಗೈಯುವ ಪಾಕಕೆ । ಮಾಣಪಾವಕನುಬೇಕೆಂತೆಂಬುವ ಸಾಮ್ಯಂ ॥

೨. ಶಾ ॥ ವೃ ॥ ಶ್ರೀಮದ್ಬ್ರಹ್ಮಪ್ರಬೋಧಪೂರ್ಣಲಹರಿ ತಾಂ ಪೇರ್ಚಿ ಮೇಲ್ವಾಯ್ದಿರಲ್ । ಈಕ್ಷಾ ಕ್ಷುಖಾದಿಜಗಪ್ರಭೇದಪ್ರಕೃತಿಂ ತೋರುತ್ತತಾಂಲೈಸುಗುಂ ಸಾವಯಾಕೃತಸಾಕ್ಷ್ಯವಸ್ಥತ್ರಯುಂ ರಾರಾಜಿಪಾತ್ಮೇಶ್ವರಂ । ಭೂಮಾನಂದಸುಧಾಬ್ಧಿ ಚಂದ್ರ ಸಲಹೈ ಶ್ರೀದಕ್ಷಿಣಾಮೂರ್ತಿಯೆ ॥

ಭುಜಂಗಪ್ರಯಾತವೃತ್ತ ಶಿವಸ್ತೋತ್ರವು

೩. ಪರಾನಂದಚಿದ್ರೂಪ ಹೃಧ್ಯಾನದೀಪ । ನಿರಾಧಾರನಿರ್ಲೇಪಸತ್ಯಸ್ವರೂಪ। ಪರಂಧಾಮನಿಷ್ಕಾಮಲೋಕಾಭಿಕಾಮ । ನಿರಾಕಾರಸಾಕಾರ ಮಾಂಪಾಹಿಪಾಹಿ ॥

೪. ಸದಾಜ್ಞಾನಸಿಂಧು ತ್ರಿಲೋಕಾಪ್ತಬಂಧು।ಚಿದಾಕಾಶಮಧ್ಯಸ್ಥದೇದೀಪ್ಯ ಬಿಂದು । ಬುಧೇಂದಾದಿಸಂಸ್ತುತ್ಯ । ಆತ್ಮೇಶ ನಿಮ್ಮ ಪದಾಂಭೋಜನಂಬರ್ಪೆ । ಮಾಂ ಪಾಹಿ ಪಾಹಿ ॥

೫. ಹರಿಬ್ರಹ್ಮಸಂಸ್ತುತ್ಯ ಇಂದ್ರಾದಿಸೇವ್ಯಂ । ಪರಬ್ರಹ್ಮನಿತ್ಯಾತ್ಮನಿರ್ದ್ವಂದ್ವ ನಿತ್ಯಂ । ಸ್ವರೂಪಾನುಸಂಧಾನ ಬೋಧಾರ್ಯವರ್ಯ । ಸ್ಮರೇನ್ನಿತ್ಯಚಿನ್ಮಾತ್ರ ಮಾಂ ಪಾಹಿ ಪಾಹಿ ॥

ಗುರುಪಾರಂಪರ್ಯಾಭಿ ವರ್ಣನವು.

೬. ಕಂದ ॥ ಧರೆಯೊಳ್ ಬ್ರಹ್ಮಜ್ಞಾನವ । ನರುಪುತೆಲ್ಲರನು ಮುಕ್ತರ ಗೈಯ್ಯಲಿಕೋಸುಗ ॥ ನಿರುಪಮ ನಿರ್ಗುಣ ಬೊಮ್ಮವೆ । ಗುರುಶಿಷ್ಯನರೂಪಿನಿಂದಲವ ತರಿಸಿರ್ಕುಂ ॥

೭. ಕಂದ ॥ ವರನಾರಾಯಣಪದ್ಮಜ । ಅರಿಯಲು ವಾಸಿಷ್ಠ ಶಕ್ತಿಪುತ್ರ ಪರಾ ಶರ ॥ ಗುರುವ್ಯಾಸಂ ಶುಕಮುನಿಸುತ।ನೆರೆಗೌಡಪದಂಮಹಾಂತಂ ಯತಿಗೋವಿಂದಂ ॥

೮. ಕಂದ ॥ ಧರೆಯೊಳ್ ಶ್ರೀಮಚ್ಛಂಕರ । ಗುರುಶಿಷ್ಯಂ ಪದ್ಮಪಾದಂ ಹಸ್ತಾಮಲಕಂ ॥ ವರತಂತ್ರೋಟಕವಾರ್ತಿಕ । ಗುರುಸಂತತಿಗಳ್ಗೆ ಮನದೊಳಗಭಿ ವಂದಿಸುವೇಂ ॥

೯. ಕಂದ ॥ ಇದುವರೆಗೊರೆದಿಹ ಯೋಗವು । ಮದಗುಣಹರ ಚಿತ್ತಶುದ್ಧಿ ಕರಮಾಗಿರ್ಕುಂ ॥ ವಿಧಿಸುವೆ ಬ್ರಹ್ಮಜ್ಞಾನಕೆ। ಸದಮಳದಮನಸ್ಕಯೋಗ ಜಗದೊಳು ಸೇವ್ಯಂ ॥

೧೦. ಕಂದ ॥ ಇದು ಶುದ್ಧರಾಜಯೋಗವು । ಇದು ನಿರ್ವಾಣಪದವಿಂಗುನ್ನತ ಮಾರ್ಗಂ ॥ ಇದಕಿನ್ನಧಿಕವಲ್ಲವು । ಇದುತಿಳಿ ಈರೇಳುಲೋಕಂಗಳೊಳುಪ್ರಸಿದ್ಧಂ ॥

ಜ್ಞಾನಮಾಹಾತ್ಮ್ಯಂ

ಶ್ಲೋ ॥ ಯೋಗಿನೋಭೋಗಿನೋವಾಪಿ । ತ್ಯಾಗಿನೋರೋಗಿನೋಪಿವಾ । ಜ್ಞಾನಾನ್ಮೋಕ್ಷೋನಸಂದೇಹ । ಇತಿವೇದಾಂತಡಿಂಡಿಮಃ ॥

೧೧. ಕಂದ ॥ ಯೋಗದಿ ಚಿತ್ತವು ಲೈಸಲಿ । ಭೋಗಿಸುತ್ತೆಲ್ಲವನು ತ್ಯಾಗದಿ ಕೀರ್ತಿಯಪಡಿಯಲಿ॥ ರೋಗದಿ ಕೊರಗಲಿ ಜ್ಞಾನವ।ಶ್ರೀಗುರುವಿಂದರಿಯೆ ಮುಕ್ತಿಯು ತಪ್ಪದು ಸತ್ಯಂ ॥

ಗುರುಶಿಷ್ಯ ಲಕ್ಷಣ

ರಾಗ—ಭೋಗಷಟ್ಪದಿ

೧೨. ಮೂರುವಿಧದಿ ಶಿಷ್ಯರಿಂಗೆ । ಚಾರುಬ್ರಹ್ಮಬೋಧೆಗೈವ । ದೀರಾಗುರುವರನವುಳ ಮಹಿಮೆ । ಬಹಳಚೋದ್ಯ ॥ ಪ ॥ ಗುರುವಿನಾಜ್ಞೆಯನ್ನೂ ಮಿರಾರದಿರುವ ಶಿಷ್ಯನನ್ನು ಒಮ್ಮೆ । ಕರುಣದಿಂದ ನೋಡೆ ಶರಧೀಯೊಳಗಣಂಡವೂ ಹರಿವ ಮತ್ಸ್ಯವ್ಯ ಕಂಡಕ್ಷಣದೊಳಿರದೆ । ಮತ್ಸ್ಯಗಳಾಗ್ವಪಾಂಗು । ಗುರುವೇ ಆಗಿಚರಿಸುತಿಪ್ಪಾ। ಸ್ವಪ್ರಕಾಶದಿ ॥ ಮೂರು ॥ ೧ ॥ ದಿನವುಸೇವೆಯಗೈಯುತ್ತಿರಲು । ಮನದಿನೆನೆಯೇ ಶಿಷ್ಯನನ್ನು । ಘನದಿ ಜಲದೊಳಿರುವ ಕಮಠಾ । ಒಂದು ದಿವಸದಿ । ನೆನೆದಕ್ಷಣದೊಳಂಡಗಳೊಡದು । ವಿನುತ ಕಮಠವಾಗುವಂತೆ । ಅನುಪಮಅದ್ವಯ ಗುರುವೇ ಆಗೀಚರಿಸುತಿಪ್ಪನು ॥ ೨ ॥ ಗುರುವು ಮುಟ್ಟಲಾಗಿ ಶಿಷ್ಯ । ಪರಮಗುರುವೇ ಆಗುತಿಹನು । ಸ್ಪರಿಶದಿಂದ ಅಂಡಗಳೊಡೆದು । ಪಕ್ಷಿಯಾದಂತೆ । ಧರೆಯೊಳಿಂತು ದೃಷ್ಟಿ ಧ್ಯಾನ । ಸ್ಪರ್ಶವೆಂಬ ಮೂರುವಿಧದಿ । ಕರುಣಿಸುವನು ಒಬ್ಬ ಶ್ರೀಗುರುರಂಗನೆನ್ನಿಸಿ॥ ಮೂರು ॥ ೩ ॥

ಚತುರ್ವಿಧ ಗುರುಶುಶ್ರೂಷೆ

ರಾಗ—ಕೇತಾರಗೌಳ—ದ್ವಿಪದೆ

೧೩. ಗುರುಪರಬ್ರಹ್ಮೆಂದು ಚತುರ್ವಿಧದಶುಶ್ರೂಷೆ । ಗುರುವಿಗನುದಿನಗೈಯುವವನೆ ಸಚ್ಛಿಷ್ಯಂ ॥ ಪ ॥ ಗುರುವರನಗೃಹಕ್ಷೇತ್ರ ಪಶುಧನಾದಿಗಳಂ । ಗುರುಭಕ್ತಿಯಿಂರಕ್ಷಿಪುದೆಸ್ಥಾನಶುಶ್ರೂಷೇ । ಗುರುಚರಣದರ್ಚನೆಯು ಅಭ್ಯಂಜನಾದಿಗಳು । ಗುರುವಿಗನುಮೋದದಲಿವಗೈವುದಂಗಶುಶ್ರೂಷೆ ॥ ಗುರುವ ॥ ೧ ॥ ಗುರುವೆಮಾತಾಪಿತರು । ಗುರುವೆ ಸತ್ಕುಲಗೋತ್ರ । ಗುರುದೈವವೆಂದರಿಯುವದೆ ಭಾವಶುಶ್ರೂಷೆ । ಗುರುವಿನಿಷ್ಟಾರ್ಥಗಳ ಭಿನ್ನವಿಲ್ಲದೆಸಲಿಸಿ । ಗುರುವರನ ತುಷ್ಟಿಪಡಿಸುವದಾತ್ಮಶುಶ್ರೂಷೆ ॥ ಗುರು ॥ ೨ ॥ ಗುರುವಾಕ್ಯವೇವೇದ । ಪ್ರಾಮಾಣ್ಯವೆಂದರಿ । ಗುರುವಿಗೀ ಪರಿಸೇವೆಗೈಯ್ಯುತಲಿ ತತ್ವಾರ್ಥ।ಗುರು ನಂಬಿ ತಿಳಿಯುವದೆ।ಭ್ರಮರಕೀಟದ ಪರಿಯು ಗುರುರಂಗ ಮಹಲಿಂಗಯಾಗುವದರಿಂದ ॥ ಗುರು ॥ ೩ ॥

ಜ್ಞಾನಾಧಿಕಾರಿ ಲಕ್ಷಣ

ರಾಗ—ಕೇತಾರಗೌಳ—ದ್ವಿಪದೆ

೧೪. ಸಾಧನಚತುಷ್ಟಯಗಳುಳ್ಳ ಸಂಪನ್ನಾ । ಸಾಧಿಸಲು ಮೋಕ್ಷವನು ಮುನ್ನಾಧಿಕಾರಿ ॥ಅ ಪ॥ ಇದು ಅನೃತ ಜಡ ದುಃಖಮಯ ದೇಹವೆನುತ । ಸದವು

ಲಾದ್ವಯ ಬೊಮ್ಮನಿದರೊಳಿಹನೆನುತ । ವಿದಿತ ಶಾಸ್ತ್ರವಿವೇಕದಿಂದ ಮನನೀಯ । ಜದಲದಲೆ ನಿಲೆ ಮನದಿ ಪ್ರಥಮ ಸಾಧನೆಯು ॥ ೧ ॥ ಧರೆಯಭೋಗವೆ ರೋಗವಿದ ಕಧಿಕ ಮುಂದೆ । ಸುರಲೋಕ ಸುಖಭೋಗ । ಬಲುರೋಗವೆಂದೇ । ತೊರೆದೆರಡು ಭೋಗ ಸುಖ ಮಲ ಮೂತ್ರಪ್ರಾಯ।ಮರಳಿ ನೆನೆಯದವಿರತಿ ದ್ವಿತೀಯಸಾಧನೆಯೂ ॥ ೨ ॥ ವರಶಮೆಯುದಮೆಶಾಂತಿದ್ವಂದ್ವದ ತಿತಿಕ್ಷೆ।ಉರುತರ ಸಮಾಧಾನಶ್ರದ್ಧೆಯೊಳು ಲಕ್ಷ ।ಇರೆಶಮಾದಿಯಷಟ್ಕವೆಂಬ ವಾಸನೆಯು । ವರಮುಮುಕ್ಷುಗಳಿಂಗೆ ತೃತೀಯ ಸಾಧನೆಯು ॥೩॥ ಉರಿಯ ಮನೆಯಿಂ ಪೊರಟು ಪ್ರಾಣರಕ್ಷಣೆಗೆ ಹೊರಬೀಳ್ವನಂತ ಖಿಳ ಸಂಸಾರಬೇಗೆ । ಭರಿಸಲಾರದೆ ಪಿಡಿದು ಗುರುವರನ ಅಡಿ ಕಮಲ । ವರಮುಕ್ತಿ ಬಯಸಲದು ಚತುರ್ಥಸಾಧನೆಯು ॥ ೪ ॥ ಅರಿಯಲೀಪರಿ ನಾಲ್ಕು ಸಾಧನೆಯ ಮಹ ಲಿಂಗ । ಗುರುಹೊಂದಲಿಕೆ ಮೊದಲು ತರುವಾಯಲಾದರು ಸ್ಥಿರವಾಗಿ ನೆಲೆಗೊಳೆ ಮುಮುಕ್ಷುವಾದವಗೆ । ವರಮೋಕ್ಷ ಸಾಂಬ್ರಾಜ್ಯಪದವಿ ಲಭಿಸುವದು ॥ ೪ ॥

ರಾಗ—ಕಲ್ಯಾಣಿ—ಅಟತಾಳ

೧೫. ಶಾಂತಿತಪವ ಮಾಡಿರೋ । ಬ್ರಹ್ಮಾನಂದ । ಸ್ವಾಂತರಂಗದಿ ನೋಡಿರೋ ॥ಪ॥ ಶಾಂತಿಯಾತ್ಮಜ್ಞಾನ ಶಾಂತಿ ಮುಕ್ತಿಸ್ಥಾನ । ಶಾಂತನಾಗದೆಯಿರಲ್ಯಾತರ ಜ್ಞಾನ ॥ಅ॥ ಅಮಿತ ತಾಮಸರಾಜಸ । ಗುಣಗಳಿಗೆಲ್ಲ । ವಿಮುಖಮಾನಸನಾಗುತ ಅಮಲ ಸಾತ್ವಿಕ ಬುದ್ಧಿಯಿಂದಾತ್ಮನನುಕಂಡ । ಕ್ಷಮೆಯೆ ರೂಪವು ತಪಸ್ವಿಗೆಯೆನ್ನ ಲಾಗಿ ॥ ಶಾಂತಿಯೆಸುರಭಿಚಿಂತಾಮಣಿಯನಿಪುದು । ಶಾಂತಿಯೆ ಶಿವತತ್ವವೆನಿಸಿ ಕೊಳ್ಳುವದಾಗಿ ॥ ಶಾಂತಿ ॥ ೨ ॥ ಅಂತರಂಗದಿತಲೆಯಾತೋರುವದುಷ್ಟ । ಸಂತತ ನೆರೆಹೊರೆಯಾ । ಶಾಂತಿ ಎಂಬುವ ಖಡ್ಗದಿಂದಲಿ ಶೀಳಿ ನಿ । ರಂತರ ಗುರುಮಹಲಿಂಗ ನಾಗಿರುವಂಥ ॥ ಶಾಂತಿ

ರಾಗ—ಕೇತಾರಗೌಳ—ದ್ವಿಪದೆ.

೧೬. ಬಂಧಮೋಕ್ಷದ ವಿವರ ಮೊದಲರಿಯಾ ಕಂದ। ಬಂಧಮೋಕ್ಷಕೆ ಮನವೆ ಮೂಲವದರಿಂದ ॥ಪ॥ ಜನಿಮುಶಣದಿಟವೆಂಬ ಮರವಿಯೇ ಭವಬಂಧ । ಜನಿಮರಣ ಸಟಿಯೆಂಬ ಅರಿವವರ ಮೋಕ್ಷ । ಘನವಿರತಿ ಬಿಡೆನೆಂಬ ಸಂಕಲ್ಪವೇ ಬಂದ । ಘನವಿರ ತಿಯು ಪರತಿಯ ನಿಜದರುಮೋಕ್ಷ ॥ ಬಂಧ ॥೧॥ ಮಾನ ಅಭಿಮಾನದಲಿ ಕೊರಗು ವದೆ ಭವಬಂಧ । ಮಾನ ಅಭಿಮಾನಳಿದ ನಿಲುಕಡೆಯೆ ಮೋಕ್ಷ । ಜ್ಞಾನ ಅಭ್ಯಾಸ ವನು ಗೈವೆನೆಂಬುದೆ ಬಂಧ । ಜ್ಞಾನ ಅಜ್ಞಾನಕ್ಕೆ ಸಾಕ್ಷಿಯಿರೆಮೋಕ್ಷ ॥ ಬಂಧ ॥೨॥ ಕರ್ಮ ಧರ್ಮಗಳೆರಡು ಬಿಗಿದಯಮಬಂಧ । ಕರ್ಮಧರ್ಮವ ಗುರುವಿನಿಂದುಳಿಯೆ ಮೋಕ್ಷ । ಕರ್ಮಜ್ಞಾನೇಂದ್ರಿಯವ ಗೆಲುವೆನೆಂಬುದಬಂಧ । ಕರ್ಮಜ್ಞಾನೇಂದ್ರಿ ಯಕೆ ಸಾಕ್ಷಿಯೇ ಮೋಕ್ಷ ॥ ೩ ॥ ಆಶ್ರಮಂಗಳ ವರ್ಣಧರ್ಮಗಳಧಿಬಂಧ । ಆಶ್ರ

ಮಂಗಳವರ್ಣ ಧರ್ಮಸಾಕ್ಷಿಯೆಮೋಕ್ಷ ವಾಸನಾತ್ರಯದಾಸೆ ಬಿಡದಿಹುದೆಬಂಧ। ವಾಸನಾತ್ರಯ ನಾಶವಾಗಲದು ಮೋಕ್ಷ॥ ಬಂಧ ॥ ೪ ॥ ಸರ್ವಸಂಕಲ್ಪಗಳ ಪಿಡಿದಿಹುದೆ ಬಂಧ। ಸರ್ವಸಂಕಲ್ಪಳಿಯೆ ಕರತಲದಮೋಕ್ಷ । ಸರ್ವಬೇರಿಹನೆಂಬುವ ಜ್ಞಾನವೇ ಬಂಧ। ಸರ್ವಗುರುಮಹಲಿಂಗನೊಳು ಬೆರಿಯೆ ಮೋಕ್ಷ ॥ ೫ ॥

ವಸ್ತು ನಿರ್ದೇಶ್ಯ ವಚನಗಳು

ರಾಗ—ಶ್ಯಾಮಕಲ್ಯಾಣಿ— ದ್ವಿಜಾವಂತಿ

೧೭. ತನ್ನೊಳರಿಯಲುಬೇಕು ಆತ್ಮದ। ಮುನ್ನ ಸಮ್ಯಜ್ಞಾನದಿಂ ॥ ಪ ॥ ತನ್ನೊಳರಿಯದೆ ಇರಲು ಲೋಕದ। ಭಿನ್ನವಾಸನೆಯಡಗದು॥ ತನ್ನೊ ॥ ಅ ॥ ವೇದವೇದ್ಯನು ಜ್ಞಾನಸಾಧ್ಯನು। ವೇದಪುರುಷಾವ್ಯಕ್ತನು। ಭೇದಭಾವನ ಷಣ್ಮತಂಗಳವಾದ ತರ್ಕಕಸಾಧ್ಯನು॥ ೧॥ ವೇದಜನಕನು ಕ್ರೋಧರಹಿತನು। ಆದಿಮಂಗಳ ಮೂರ್ತಿಯು। ಪಾದನಾಲ್ಕರ ಪ್ರಣಪರತರ। ವಾದನಿರ್ಗುಣಬ್ರಹ್ಮನ॥ತನ್ನೊ ॥೨॥ ನೆನೆಯದೊಣಗದ ಮಳೆಗೆ ಬಿಸಲಿಗೆ। ಮೊನೆಕತಾರಿಗೆ ಸೀಳದ ಜನಿಸಿದಳಿಯದ। ಸುಡದ ಸುಳಿಯದ ಘನಚಿದಂಬರನಾತ್ಮನಂ ॥ ೩ ॥ ದುಃಖವಂಟದ ನಿಜಸುಖಡಗದ। ಉಕ್ಕಿದಾನಂತೆನಿಸುವ ಠಕ್ಕುಮಾಯಾ ಕಟಿಲಜಗವನು। ಮಿಕ್ಕುರಾಜಿಸುವಾತ್ಮನಂ। ಪರೆಯು ಪಶ್ಯಂತ್ಯಾದಿವಾಕ್ಕಿಗೆ। ಅರಿವ ಮನಸಿನ ಊಹೆಗೆ। ಪೆರತೆನಿಸಿ ಪರಿಪೂರ್ಣವಾಗಿಹ। ಪರಮಗುರುಮಹಲಿಂಗನಂ ॥ ೫ ॥

ರಾಗ—ಸುರಟ—ಆದಿತಾಳ

೧೮. ಯಾಕೆ ತಿಳಿಯದೋದೇ। ಮನುಜನೀ। ಯಾಕೆ ತಿಳಿಯದೋದೇ ॥ಪ॥ ಯಾಕೆ ತಿಳಿಯೆನೀನಾತ್ಮಜ್ಞಾನವ। ಮೂಕನ ಪರಿಯಲಿ ಮೂಲೆಯಹಿಡಿದು ॥ ಅ ॥ ಗಾಣವತಿರುಗುತಲೀ। ಬಳಲುವ। ಕೋಣನಪರಿಯಲ್ಲಿ। ಕ್ಷೋಣಿಯ ತಿರುಗುತ ಬಳಲಿದೆಯಲ್ಲದೆ। ಕ್ಷೋಣಿಯ ಬೆಳಗುವ ಆತ್ಮನನಿನ್ನೊಳು ॥ ಯಾಕೆ ॥೧॥ ಕರತಲರತ್ನವನು। ಅರಿಯದೆ। ನೆರೆಮನೆ ಮಕ್ಕಳನು। ಶಿರಗೊಡ್ಡಿ ಬೇಡುವನಂದದಿ ದೇಹದಿ। ಪರಮನು ಇರುತಿಹ ನೆಲೆಯನುನಿನ್ನೊಳು ॥ ಯಾಕೆ ॥ ೨ ॥ ಜಲದೊಳು ಮುತ್ತಾದ। ಬಳಿಕದು। ಜಲದೊಳು ಬೆರಿಯುವದೇ ತಿಳಿಯಲಿಕಾಪರಿತತ್ವದಿ ಬೆರೆತವ। ಇಳೆಯೊಳು ಪುಟ್ಟನುಯೆಂಬುದನಿನ್ನೊಳು ॥ ಯಾಕೆ ॥ ೩ ॥ ಕುಲಚಲದಭಿಮಾನ। ಕೂಪದಿ। ಮುಳುಗಿತು ನಿನಜ್ಞಾನ ಛಳಿಮಳೆ ಬಿಸಲಿಗೆ। ಅಳುಕದೆ ಹೊಳೆಯೊಳು। ಮುಳುಗುವೆಯಲ್ಲದೆ ಆತ್ಮನನಿನ್ನೊಳು ॥ ಯಾಕೆ ॥೪॥ ಕರ್ಮಕೋಟೆಯನು ಬಿಡಿಸಿ। ಜ್ಞಾನದಮರ್ಮವನೆರೆತಿಳಿಸಿ। ಕರ್ಮದಧರ್ಮದಭೀತಿಯ ಬಿಡಿಸುವ। ನಿರ್ಮಲಗುರುಮಹಲಿಂಗನನಿನ್ನೊಳು ॥ ಯಾ ॥ ೫ ॥

ರಾಗ—ವರಾಳಿ

೧೯. ತನ್ನೊಳಿರುವಾತ್ಮನನು ತಾಕಾಣದವನು। ಕಣ್ಣಿದ್ದು ಕಾಣದಿಹ ಕುರುಡನೆನಿಸುವನು ॥ ಪ ॥ ಶರೀರದೊಳು ಪ್ರಾಣಗಳು ಇಂದ್ರಿಯಂಗಳು ವಿಷಯ । ಮರವೆರೂಪಿನಮನವು ಅರುವಿನಾಮತಿಯು । ವರಚಿತ್ತಹಂಕಾರ ಕರಣದ ವಿಕಾರ । ಇರುವ ದೇಹದೊಳಾತ್ಮ ತಾನಿರ್ವಿಕಾರ ॥ ತನ್ನ ॥ ೧ ॥ ಕರಣಇಂದ್ರಿಯಗಳಿಗೆ ಪ್ರೇರಕನು ಯೆನಿಸಿ । ಅರಿವನೆಲ್ಲವತಾನೆ । ಸಾಕ್ಷಿಯೆಂದೆನಿಸಿ । ವರಮುಕುರದೊಳು ಮುಖವು ಎಸೆದುತೋರ್ಪಂತೆ । ಪರಮಸಾತ್ವಿಕಬುದ್ಧಿಯಲ್ಲಿ ಪರಮಾತ್ಮ ॥ ತನ್ನ ॥ ೨ ॥ ಅದುನೀನೆ ಅಹುದೆಂದು ತತ್ವಮಸಿವಾಕ್ಯ । ವಿಧಿಸಿಹುದು ಅದು ಬ್ರಹ್ಮವದು ಅಪ್ರತರ್ಕ್ಯ । ಅದುಜ್ಞಾದವದುಜ್ಞೇಯವದುವೆ ಅವಿನಾಶಿ । ಅದಕನ್ಯವಿಲ್ಲೆನಲು ವೇದಗಳರಾಶಿ ॥ ತನ್ನ ॥೩॥ ವರಜಾಗರವು ಸ್ವಪ್ನಸುಪ್ತಿಯೊಳು ಕ್ರಮದಿ । ನೆರೆವಿಶ್ವತೈಜಸನು ಪ್ರಾಜ್ಞನಾಮಕಧಿ । ಉರುವಿಷಯವನುಭವಿಪ ಮೂರುಜೀವರನು । ಪರತಾಗಿರಾಜಿಸುವ ತುರ್ಯವೆನಿಸುವನು ॥ ತನ್ನ ॥ ೪ ॥ ಭೂತಭೌತಿಕವರ್ತಮಾನಕಾಲದೊಳು । ಖ್ಯಾತಿ ಪ್ರಾಗ್ಭಾವಾನಿಘಟವಿಭೇದಗಳು । ಆತ್ಮನೊಳುಪೊಗದಿರಲು ಅವ್ಯಕ್ತನಾಗಿ । ಸಾತಿಶಯಮಹಲಿಂಗಗುರುವೆತಾನಾಗಿ ॥ ತನ್ನೊಳು ॥ ೫ ॥

ಸದ್ರೂಪಲಕ್ಷಣ

ರಾಗ—ಪಂತುರಾವಳಿ—ಅಟತಾಳ

೨೦. ಇಲ್ಲೇ ಕೈವಲ್ಯ ಕಾಣಿರೋ । ಮತ್ತಿನ್ನೆಲ್ಲಿ ಹುಡುಕಿನೋಡಿದೊಡಿಲ್ಲ ಕೈವಲ್ಯ । ಇಲ್ಲೇ ಕೈವಲ್ಯ ಕಾಣಿರೋ ॥ಪ॥ ದೇಹವೆ ದೇವಾಲಯವದರೊಳು ಸೂಕ್ಷ್ಮ ದೇಹದೊಳಿಹ ಜೀವಶಿವನೆಂದು ಭಾವಿಸಿ।ಮೋಹರಾಗವುಯೆಂಬ ನಿರ್ಮಾಲ್ಯ ತ್ಯಜಿಸಿ । ಸೋಹಮೆನ್ನುತ ಪೂಜೆಗೈವ ಸುಜ್ಞಾನಿಗೆ ॥ ಇಲ್ಲೇ ॥ ೧ ॥ ವರಚಿದ್ರುಘಟದಿ ರಾಜಿಸುತಿಪ್ಪ ಜ್ಯೋತಿಯು । ಉರಿಯಂತತನುನೇತ್ರಮೊದಲಾದಿಇಂದ್ರಿಯ । ಕಾರಣಾದಿಗಳಿಗೆ ಸಾಕ್ಷಿಕನಾಗಿ ಸರ್ವತ್ರ । ಪರಿಪೂರ್ಣಭಾವದಿ ಸುಖಿಪಾತ್ಮನಿಷ್ಟಂಗೆ ॥ಇಲ್ಲೇ ॥೨॥ ಸುಪ್ತಿಜಾಗರದೊಳು ತೋರುತ್ತಲಿರ್ಪ । ಚಿತ್ತಹಂಕಾರಾದಿಗುಣಕೆ ಬೇರಿಪ್ಪ । ಜ್ಞಪ್ತಿ ಸಂವಿನಾತ್ರತುರ್ಯಲಕ್ಷದಿನಿತ್ಯ । ತೃಪ್ತನಿರಂಜನನಾದಚಿನ್ಮಾತ್ರಂಗೆ ॥ ಇಲ್ಲೇ ॥ ೩ ॥ ಉರುಪುಣ್ಯಪಾಪದ ತೊಡಕಿಲ್ಲವಾಗಿ । ನೆರೆಮಿತ್ರಶತೃಭಾವವತೋರದಾಗಿ । ವರಬಂಧಮೋಕ್ಷದಕಲ್ಪನೆಯುಡಗಿ । ಪರತತ್ವದೊಳು ಬೆರೆತಿಹ ಶಿವಜ್ಞಾನಿಗೆ । ಇಲ್ಲೇ ॥ ೪ ॥ ಬಹುನಾಮರೂಪಿನ ಜಗಭ್ರಾಂತಿಯುಡುಗಿ । ಸಹಜಬ್ರಹ್ಮಾನಂದಶರಧಿಯೋಳ್ಮುಳಿಗಿ ಮಹಲಿಂಗರಂಗಸದ್ಗುರುವೆತಾನಾಗಿ । ಇಹಪರಸಾಕ್ಷಿಯಾದ ಪರೋಕ್ಷಜ್ಞಾನಿಗೆ ॥ ಇಲ್ಲೇ ॥ ೫ ॥

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೨೧. ನೋಡುನೋಡಲಿ ಮಾನಸಂದ್ರನೆ । ನೋಡುಮುನಿಕುಲಚಂದ್ರನೆ । ನಾಡುನಾಡುಗಳಿಸಿಬಳಲದೆ । ನೋಡುನಿನ್ನೊಳುಬ್ರಹ್ಮವಾ ॥ ನೋಡು ॥ ಪ ॥

ನಿರುಪಮಮದ್ವಯನಿರಘನಿಷ್ಕ್ರಿಯ । ಭರಿತಸರ್ವಜಗಾಶ್ರಯ । ನಿರುತ ನಿಷ್ಕಳ ನಿತ್ಯ ನಿಜಪದ । ಪರಮನಿರ್ಗುಣಬ್ರಹ್ಮವಾ ॥ ನೋಡು ॥೧॥ ಶಶಿಯುರವಿಯುವಿಂಚುಗ್ರಹ ಗಳ । ಎಸೆವತಾರಾಗಣಗಳ । ಬಸುರಿನೊಳಹೊರಗೆಸದುಬೆಳಗುವ । ಅಸಮ ಜ್ಯೋತಿ ಪ್ರಕಾಶವ ॥ ನೋಡು ॥ ೨ ॥ ತ್ರಿಗುಣವಲ್ಲದ ತ್ರಿಮಲವಲ್ಲದ । ಸ್ವಗತಭೇದಗಳೊಗೆ ಯದ ಅಗಣಿತನುಪಮ ಅಪ್ರತರ್ಕ್ಯದ । ನಿಗಮವಂದಿತಬ್ರಹ್ಮವ ॥ ನೋಡು ॥ ೩ ॥ ಕರಣನೇಂದ್ರಿಯಗಳಿಗೆ ಪ್ರಭುವು । ಕರಣದೋಷಗಳಿಲ್ಲವು । ಅರಿವುಮರವೆಯಮೇಲಣ ರಿವು । ಪರಮಸಚ್ಚಿದ್ರೂಪವು ॥ ನೋಡು ॥ ೪ ॥ ಜನನಮರಣದ ಜಡರುಸೋಂಕದ । ಪ್ರಣವಪರತನವೆನಿಸಿದ । ಅನಘ ಗುರುಮಹಲಿಂಗರಂಗನು । ಎನಿಸಿ ರಾಜಿಪ ಬ್ರಹ್ಮವಾ ॥ ನೋಡು ॥ ೫ ॥

ರಾಗ—ಮಧ್ಯಮಾವತಿ—ಆಟತಾಳ

೨೨. ನಿನ್ನಲ್ಲೇನೋಡೋ ಪರಬ್ರಹ್ಮವ । ನಿನ್ನಲ್ಲೇನೋಡೋ ॥ಪ॥ ನಿನ್ನನು ಭವಜ್ಞಾನದೃಷ್ಟಿಯಿಂದಲಿ ನೋಡು । ನಿನ್ನಲ್ಲೇಸಾವಧಾನದಿ ತೋರುತ್ತಿಹುದು ॥ ನಿನ್ನಲ್ಲೆ ॥ ಅ ॥ ಚಿನ್ನಾವಬಿಟ್ಟು ಆಭರಣಗಳ್ಮನ್ನ ಇಲ್ಲಾಗಿ । ಮಣ್ಣುಬಿಟ್ಟರೆ ಮಡಿಕೆಯೇಯಿಲ್ಲವೆಂಬಂತೆ । ತನ್ನಬಿಟ್ಟರೆದೇವರಿಲ್ಲವೆಂಬನುಭೂತಿ ॥ ನಿನ್ನಲ್ಲೆ ॥ ೧ ॥ ಕೆನೆವಾಲಿನಲ್ಲಿ । ನವನೀತವು । ಜನಿಸಲಿಕ್ಕದನು । ಅನುವಾಗಿಕಾಸಿದತುಪ್ಪದಿ ಮುಖವಾ । ಕ್ಷಣದಿಕಾಣುವಪರಿಶಿವತತ್ವಕಾಂಬು ॥ ನಿನ್ನಲ್ಲೆ ॥ ೨ ॥ ತನುವಿಂದ್ರಿಯ ಗಳ । ತಾಮಸ ರಜೋ । ಗುಣಗಳಿಗಧಿಕವೆನಿಪಸಾತ್ವಿಕ । ಮನಕುರುಹಿಟ್ಟು ನೋಡಲಾ । ಮನಗೊನೆಯೊಳು ತುಂಬಿತುಳುಕಾಡುತ್ತಿಹುದು ॥ ನಿನ್ನಲ್ಲೆ ॥ ೩ ॥ ಹುಟ್ಟುಸಾವಿಲ್ಲ । ಮಾಯಾಂಗನೆಕಾಟದಕ್ಕಿಲ್ಲ । ಎಂಟುದಿಕ್ಕಿನೊಳಂಟೆಅಂಟಾದೆ ತುಂಬಿಹು । ದಂಟುಮುಟ್ಟೆ ಶಿಕ್ಕದಲೆ ದೃಕ್ಕಾಗಿಹುದು ॥ ನಿನ್ನಲ್ಲೆ ॥೪॥ ಕನ್ನಡಿಯಲ್ಲಿ। ಪ್ರತಿಬಿಂಬಿಸಿ । ತನ್ನ ಕಾಂಬಂತೆಉನ್ನಾತಸಾತ್ವಿಕಬುದ್ಧಿಯೋಳ್ಬೆಳಗುವ । ಚನ್ನಶ್ರೀ ಗುರುಮಹಲಿಂಗಸದ್ರೂಪನ ॥ ನಿನ್ನಲ್ಲೆ ॥ ೫ ॥

ಚಿತ್ತುಲಕ್ಷಣ

ರಾಗ—ವರಾಳಿ

೨೩. ಜ್ಞಾನಿಯಜ್ಞಾನಿಗಳಾ ಭವಲಕ್ಷಣವಂ । ಸಾನುರಾಗದಿನೋಡಿ ಅರಿಯುವನಭಿಜ್ಞಂ ॥ ಪ ॥ ಹಾಲುನೀರೊಂದಾಗಿಬೆರೆಯೆ ಲೋಕದಲಿ । ಹಾಲುನೀರಿನ ಭೇದತಿಳಿಯದಂಪದಲಿ । ಖೂಳದೇಹದೊಳಾತ್ಮಬೆರೆತುಕೊಂಡಿಹನು । ಜಾಳು ಕರ್ಮಿಯು ಕಣ್ಗೆ ಕಾಣದಡಗಿಹನು ॥ ೧ ॥ ಪಾರಮಾತ್ಮನಕಳೆಯನರಿಯದೆ ಸತತ । ತೋರ್ಪಜಡತನುವಾನು । ಎಂದು ಅರಿವಾತ ಕ್ಷೀರ ನೀರಿನಗುಣವ ಅರಿಯದಲೆ ಕುಡಿಪ । ಚಾರುಬಕದಂತೆಯಜ್ಞಾನಿಯೆನ್ನಿಸುವ ॥ಜ್ಞಾನಿ॥೨॥ ಲೀಲೆಯಿಂತನುಗುಣ

ಗಳನ್ನು ಕಳೆದಿಡುತ್ತ । ಲೋಲಆತ್ಮನ ಲಕ್ಷಣವನು ಅರಿವಾತ । ಹಾಲುಮಾತ್ರವ ಕುಡಿದು ನೀರನ್ನು । ಬಿಡುವ ಮೇಲುಹಂಸವಪರಿಯಜ್ಞಾನಿಯೆನ್ನಿಸುವ ‖ಜ್ಞಾನಿ‖೩‖ ಧೊರೆಯು ಅಂತಃಪುರದೊಳಿರಲು ದುರ್ಮತಿಯು ಕರಣಿಕನ ಧೊರೆಯೆಂದು ವಂದಿಸುವ ಪರಿಯ । ವರಹೃದಯ ಭರಿತಾತ್ಮನರಿಯದಲೆಪೊಳೆವ । ಶರಿರಾತ್ಮಭಾವಿಯಜ್ಞಾನಿ ಯೆನ್ನಿಸುವ ‖ ಜ್ಞಾನಿ ‖ ೪ ‖ ದೇಹವೆಲ್ಲವನಾಸಿದ್ಧವಾಗಿರುವ । ಸೋಹಮೆಂಬುವ ಬೋಧೆಯೊಳಗೆ ಮುಳುಗಿರುವ । ದೇಹಿಗುರುಮಹಲಿಂಗರಂಗನಾಗಿರುವ । ಮೋಹ ರಹಿತನೆ ಜಗಜಗದೆ ಜ್ಞಾನಿಯೆನ್ನಿಸುವ ‖ ಜ್ಞಾನಿಗಳ ‖ ೫ ‖

ರಾಗ—ಮಧ್ಯಮಾವತಿ—ಅಟತಾಳ

೨೪. ಬ್ರಹ್ಮವತಂದು । ತೋರಲುಳ । ಬ್ರಹ್ಮಬೇರಿಹುದೆ ‖ ಪ ‖ ಕರ್ಮ ಕೋಟಲೆಯಲ್ಲಿ ಕೊರಗಿ ಸಾಯದೆ ಪರ । ಬ್ರಹ್ಮವೆ ತಾನೆಂದು ಅರಿಯಬೇಕಲ್ಲ ‖ ಅ ‖ ಕ್ಷಣಿಕಸಂಸಾರ । ಕಲ್ಪಿತಮಾಯ । ಗುಣಕತಿದೂರ । ಮಣಿಗಣಸೂತ್ರದಂತಿರುತ್ತೆಲ್ಲ ದೇಹದಿ । ಗಣನೆಗೆಬಾರದದ್ವಯನೆನ್ನಿಸಿರುವ ‖ ಬ್ರಹ್ಮ ‖ ೧ ‖ ನಿಗಮಾಗಮನಕ್ಕೆ । ಸಿಕ್ಕದೆ ಮೂರು । ಜಗದಿತುಂಬಿರುವ । ಸ್ವಗತಾತಿಭೇದತ್ರಯದ ಬಾಧೆಯಿಲ್ಲದೆ। ಗಗನ ದಂದದಿನಿರವಯವಾಗಿ ಇರುವ ‖ ಬ್ರಹ್ಮ ‖ ೨ ‖ ತೆಗೆದು ಅಜ್ಞಾನ । ಆವರಣವ । ನೆರೆವಿಕ್ಷೇಪವನು । ಅರಿತಪರೋಕ್ಷಜ್ಞಾನದಿ ತನ್ನ ನಿಜವನು । ಗುರುಮಹಲಿಂಗನೆಂದ ರಿಯಬೇಕಲ್ಲದೆ ‖ ಬ್ರಹ್ಮವತಂದು ‖ ೩ ‖

ರಾಗ—ಸುವ್ವಾಲೆವರ್ನ—ರೂಪಕತಾಳ

೨೫. ತಿಳಿಯಬಾರದೆ । ಹೀಗೆ । ತಿಳಿಯಬಾರದೆ ‖ ಪ ‖ ಅಳಿವುದೆಲ್ಲ ಜಗವು ತಾನೆ । ಉಳುಮೆಯಾದಬ್ರಹ್ಮವೆಂದು । ತಿಳಿಯಬಾರದೆ ‖ ಅ ‖ ನೂರುವರುಷದೊಳಗೆ ನುಡಿದು । ಭಾರಿಭಾರಿ ಭವಕ್ಕೆಬರುವ । ತೋರದೇಹಮಯಕೆ ದೂರಸಾಕ್ಷಿಬ್ರಹ್ಮ ನೆಂದು ‖ ತಿಳಿ ‖ ೧ ‖ ಪ್ರಳಯವಾಗುವತನಕ । ಬಳಲಿಮೋಹರಾಗದಲ್ಲಿ । ಅಳಿವ ಲಿಂಗದೇಹನೋಡ್ವ । ಉಳುಮೆ ಬ್ರಹ್ಮತಾನೆಯೆಂದು ‖ ತಿಳಿ ‖ ೨ ‖ ನೂರುಜನ್ಮ ಸುಕೃತಫಲದಿ । ಚಾರುಜ್ಞಾನವುದಿಸಲಳಿವ । ಕಾರಣಾಂಗಸಾಕ್ಷಿಯಾದ । ಪೂರ್ಣಬ್ರಹ್ಮ ತಾನೆಎಂದು ‖ ತಿಳಿ ‖ ೩ ‖ ಮೂರುತನವು ಮೂರುಶಕ್ತಿ । ಮೂರವಸ್ಥೆಮೂರುಜೀವ। ಮೂರುಗುಣಗಳಂಟದಿರುವ । ಸಾರಚಿನ್ಮಯಬ್ರಹ್ಮವೆಂದು ‖ ತಿಳಿ ‖ ೪ ‖ ಕರುಣಿ ಶ್ರೀ ಗುರುರಂಗಲಿಂಗ । ವರದತತ್ವಸಾರತಿಳಿಯೆ । ನಿರಘನಿತ್ಯಮುಕ್ತತಾನೆ । ನಿರುಪ ಮಶುದ್ಧಯಬ್ರಹ್ಮವೆಂದು ‖ ತಿಳಿ ‖ ೫ ‖

ಆನಂದ ವಚನಂಗಳು

ರಾಗ—ಮಧ್ಯಮಾವತಿ—ಅಟತಾಳ

೨೬. ಅರಿವುದೆಚಂದ । ಬ್ರಹ್ಮಾನಂದ । ಅರಿವುದೆಚಂದ ‖ ಪ ‖ ಅರಿವುದೆ ತಂದ ನಿರ್ಮಲಪ್ರಜ್ಞೆಯಿಂದ । ಅರಿವುತಾನಲ್ಲದೆ ಬೇರಿಲ್ಲವೆಲೊಕಂದ । ಅರಿವುದೆ ‖ಅ‖

ಹೇಳುವದಲ್ಲ । ಕವಿಕೊಟ್ಟನ್ನು । ಕೇಳುವದಲ್ಲ । ಹೇಳದೆಯಿರಲದು । ತಿಳಿಯುವ ದಲ್ಲ । ಹೇಳಿವಾಚಕದಿಂದ ಕೆಡಿಸುವದಲ್ಲ ॥ ಅರಿವುದೆ ॥ ೧ ॥ ಪರಿಪರಿನಾಮರೂಪು ಗಳಿಲ್ಲ । ನೆರೆಗಳಿದುಳಿದ । ವರದ್ರುಷ್ಟೃದರ್ಶನ ದೃಶ್ಯಾದಿಗಳಿಗೆಲ್ಲ । ಪೆರತಾದನಿರುಪಮ ನಿರ್ಗುಣ ಬ್ರಹ್ಮವ ॥ ೨ ॥ ಹೆಣ್ಣುಗಂಡಲ್ಲ । ಹೊನ್ನಲ್ಲವು ಮಣ್ಣೆಂಬೊದದಲ್ಲ ಹೆಣ್ಣು ಗಂಡಾಗಿ ತುಂಬಿ ಜಗವೆಲ್ಲ । ಕಣ್ಣಿಗೆ ಕಾಣಿಸುವದು ನಿಜವಲ್ಲ ॥ ಅರಿ ॥ ೩ ॥ ಧ್ಯಾನದೊಳೀ । ಧಾರಯೋಗ । ಮೌನದೊಳಿಲ್ಲ । ಧ್ಯಾನಧಾರಣೆಯೋಗಕ್ಕಾಗಿ ಅಂತ್ಯದೊಳು । ತಾನೊಂದೆ ಸಾಕ್ಷಿಯಾಗಿಹುದು ನಿಶ್ಚಲವಾಗಿ ॥ ಅರಿ ॥೪॥ ವರಶಾಂತ ನಾಗಿ । ಮಾನಾಭಿಮಾನೆರೆಡನ್ನುನೀಗಿ । ನಿರುತ ಅಖಂಡೈಕರಸಮಯನಾಗಿ ಶ್ರೀ ॥ ಗುರುಮಹಲಿಂಗರಂಗನೆ ತಾನೆಯಾಗಿ ॥ ಅರಿದೆವು ॥ ೫ ॥

ರಾಗ—ಕಲ್ಯಾಣಿ—ಅಟತಾಳ

೨೭. ಜ್ಞಾನಾಮೃತಶಿಕ್ಕಿತು । ಹೃನ್ನಾಳದಿ । ಜ್ಞಾನಾಮೃತಶಿಕ್ಕಿತು ॥ ಪ ॥ ನಾನುನೀನೆಂಬ ಕತ್ತಲೇ ಹರಿದೋಗಲು । ಪೂರ್ಣಚಂದ್ರಾನಂದಬೆಳಕಿನೊಳ್ಬೆಳಕಾಗಿ । ಜ್ಞಾನಾ ॥ ಅ ॥ ಕುಹಕಕುಟಿಲವಡಗಿ । ಶಾಂತಿಯು ಮೌನ ಸಹಜಸದ್ಗುಣಬೆಳಗಿ । ಇಹಭೋಗಸಾಂಬ್ರಾಜ್ಯತೃಣಗಣವಾಗೀ । ಬಹುಜನ್ಮಸುಕೃತದ ಫಲ ಲಭ್ಯವಾಗೀ ॥ ಜ್ಞಾನಾ ॥ ೧ ॥ ಚಿನುಮಯಾತ್ಮನಅರಣೀಮಾಡುತಮೂಲ । ಪ್ರಣವಮೇಲರಣಿ ಮಾಡಿಮನದಿ । ಸೋಹಂಭಾವದಿಂದಲಿ ಮಥಿಸಿ । ಅನುಭವಜನಿತಚೆನ್ನಾದಚಿತ್ಕಳಿ ಯೆಂಬ ॥ ಜ್ಞಾನಾ ॥ ೨ ॥ ವರಸಿಂಧುಮಥನದೊಳು । ಕೂಡಿದ ರಾಕ್ಷಸರಪಡೆಯಡಗ ಲಾಗಿ .। ವರದೇವ್ತೆಗಳಿಗೆ ದಿವ್ಯಾಮೃತ ಬಂದಂತೆ । ಉರುಜೀವತ್ವಳಿಯೆಚಿದಾಂ ಬುಧಿಯಿಂ ಬಂದ ॥ ಜ್ಞಾನಾ ॥ ೩ ॥ ಇದು ದಿವ್ಯಸಿದ್ಧರಸ । ಚಂದ್ರಾಮೃತ । ವಿದು ಬ್ರಹ್ಮಬೋಧರಸ । ಇದು ಭವರುಜೆಗೌಷಧವುನಿಜವೆನ್ನುತ್ತ । ಮುದದಿಸೇವಿಶೆ ವರ ಮುಕ್ತಿಯನೀವಂಥ ॥ ಜ್ಞಾನಾ ॥ ೪ ॥ ಕರ್ಮನಿಷ್ಟಗೆಶಿಕ್ಕದ । ಸಾಧಿಪವ್ರತ । ಕರ್ಮ ಭ್ರಷ್ಟಗೆ ದಕ್ಕದ । ಕರ್ಮದಬೀಜ ಜ್ಞಾನಾಗ್ನಿಯಿಂ ದಹಿಸುವ । ಮರ್ಮವರಿತ ಗುರು ರಂಗನಕೃಪೆಯೆಂಬ ॥ ಜ್ಞಾನಾಮೃತ ॥ ೫ ॥

೨೮. ಆನಂದಪದವಿಯನುಹೇಳಲಾರಿಂದಹುದು । ಆನಂದದೊಳ್ಮುಳುಗಿಮನ ಮೌನವಾಗಿರಲು ॥ ಪ ॥ ಹಸಿವಿಗನ್ನವುದೊರೆಯಲಾನಂದಸರ್ವರಿಗೆ । ಪಶುವುಗಳಿಗಾ ನಂದವೆಳೆಗರುವನೆಕ್ಕಲ್ । ವಿಷಯನಿದ್ರಾನಂದ ಮೃಗಪಕ್ಷಿಪಶುಗಳಿಗೆ । ಅಸಮ ಯೋಗಾನಂದ ವರಯತೀಶ್ವರಗೆ ॥ ಆ ॥ ೧ ॥ ವರಚಕ್ರವರ್ತಿಮಾನುಷದೇವ ಗಂಧರ್ವ । ಪರಮದೇವರ್ಕಳಿಂದ ಬೃಹಸ್ಪತಿಯು । ಪರಮೇಷ್ಟಿನವಬ್ರಹ್ಮಗುರು ಗಳ ಮಹದಾನಂದ । ವಿರುವವೊಂದಕ್ಕೊಂದು ನೂರುಮಡಿಯಧಿಕವೆನಿಸಿ ॥ ಆ ॥ ಅರಿಯಲಿಂತಾನಂದಪದವಿಗಳು ಜಗದೊಳಗೆ । ನರಸ್ವಪ್ನದಂತೆ ತೋರಡಗುವದರಿಂದ । ನಿರುಪದ್ವಯಪೂರ್ಣ ಬೋಧೆಯಿಂದೊಗೆದ । ಪರಬ್ರಹ್ಮಾನಂದದೊಳು ಲವ

ಮಾತ್ರವೆನಿಸದಾಗಿ ॥ ಆ ॥ ೩ ॥ ಪೊಳಹೊರಗೆ ಪರಿಪೂರ್ಣಕುಂಭಜಲದಂತೆ । ಪೊಳ ಹೊರಗೆ ಮಿಗೆ ಶೂನ್ಯಕುಂಭನಭದಂತೆ । ಸಲೆಕರಣವೃತ್ತಿ ಬ್ರಹ್ಮಾನಂದ ಶರಧಿಯೊಳು। ಮುಳುಗಿ ವೈಮರೆದ ನಿಜಸ್ವಾನುಭವದನುಪಮದ ॥ ಆ ॥ ೪ ॥ ಸತ್ತೆನಿಸಿ ಜಗದಾದಿ ಮಧ್ಯದಲಿ ತುಂಬಿರುವ । ಚಿತ್ತೆನಿಸಿ ಮೂರವಸ್ಥೆಗಳು ಬೇರಿಟ್ಟರಿಯುವ । ಮತ್ತೆ ಆನಂದವೆನಿಸಿ ಪೆರತೊಂದು ತೋರದಿಹ । ನಿತ್ಯ ಪರಿಪೂರ್ಣಪರಮಗುರುಲಿಂಗನಾಗಿರುವ ॥ ಆನಂದಪದವಿಯನು ॥ ೫ ॥

೨೯. ಕಂದ ॥ ಬ್ರಹ್ಮಜ್ಞಾನವ ಪಡಿವರೆ । ಪೊಮ್ಮನೆ ಈ ಪಂಚರತ್ನವ ಪಠಿಸಿದ ಪುರುಷನ ಹಮ್ಮಿನ ಮಾಯೆಯನುರುಹುತ । ತಮ್ಮೊಳಗಾನಂದಪೇರ್ಮಡು ಉಕ್ಕಿಸುತಿರ್ಕುಂ ॥

ರಾಗ—ಭೈರವಿ

೩೦. ಶಿವೆಯೆಂಬ ಕಾಮಧೇನು । ಇರಲಾಗಿ ಭವವೆಂಬರವು ಉಂಟೇ ವತ್ಸ ಶಿವೆಯೆಂಬ ॥ಪ॥ ಆದಿಪ್ರಣವಾಕೆ ಮುಖವು । ಪಾದಗಳು । ವೇದನಾಲ್ಕಾರು ಶಾಸ್ತ್ರ ಸ್ಮೃತಿಯು । ವಾದತರ್ಕಗಳಯಿದರಿಂ । ಪುಚ್ಛದಿಂದಾದರೈವರು ಬ್ರಹ್ಮರು ವತ್ಸ ॥ ಶಿವೆ ॥ ೧ ॥ ಮೂಲಕುಂಡಲಿ ಎಬ್ಬಿಸಿ । ವರಬ್ರಹ್ಮನಾಳವನು ದೂರದಲ್ಲಿ । ತಾನೆ । ಲೀಲೆಯಿಂ ಕಾಣುತಿಹಳು । ಪರಬ್ರಹ್ಮನೀಲತೋಯದಮಧ್ಯದಿ ವತ್ಸ ॥ ಶಿವೆ ॥ ೨ ॥ ನರಧರ್ಮ ಅರ್ಥಕಾಮ ಮೋಕ್ಷವಂ । ಕರೆದು ಭಕ್ತರಿಗೀವುದಂ ಕಂಡು । ಸುರಲೋಕದವರ ಪೊರೆಯುತ್ತಿರುವಂಥ । ಸುರಧೇನು ನಾಚುತಿಹುದೈ । ವತ್ಸ ॥ ಶಿವೆ ॥ ೩ ॥ ಮೂಲಶಿವಜೀವರೆಂಬ ಮಕ್ಕಳನು । ಲೀಲೆಯಿಂಪಡದು ಜ್ಞಾನವೆಂಬ । ಪಾಲಿತ್ತು ಎಡೆಬಿಡದಲೆ ಪ್ರೀತಿಯಿಂ ಪಾಲಿಸುವ ಲೋಕಜನನೀ । ವತ್ಸ ॥ ಶಿವೆ ॥ ೪ ॥ ಮೃತ್ಯುಹರಕಾಮಧೇನು ಗುರುರಂಗ । ನೊತ್ತಿನೊಳುಯಿರುವದಾಗಿ ನಿತ್ಯ ಭಕ್ತಿಯಿಂದಾಶ್ರೈಸಿದವರು ಪೊರೆವಂಥ । ಸತ್ತುಚಿತ್ತಾನಂದಳು ॥ ವತ್ಸ ॥ ಶಿವೆ ॥ ೫ ॥

ರಾಗ—ಭೈರವಿ.

೩೧. ಶಿವನೆಂಬ ಕಲ್ಪವೃಕ್ಷ ಇರಲಾಗಿ । ಭವವೆಂಬ ತಾಪವುಂಟೆ । ವತ್ಸ ॥ ಶಿವನೆಂಬ ಕಲ್ಪವೃಕ್ಷ ॥ ಪ ॥ ಏಳು ಲೋಕಗಳಡಗಿಹ ಈ ವೃಕ್ಷ । ಮೂಲದಲಿ ಬ್ರಹ್ಮ ಮಧ್ಯಾದಲ್ಲಿ । ಲೀಲೆಯಿಂ ವಿಷ್ಣು ರುದ್ರ ಅಗ್ರದಲಿ । ಆಲಯವ ಮಾಡಿ ಇಹರು । ವತ್ಸ ॥ ಶಿವ ॥ ೧ ॥ ಆರುನೆಲೆಗಳ ಭೇದಿಸೀತೊಂಭತ್ತು । ಆರುಶಾಖೆಗಳೊಳಾಡಿ ಸೂಕ್ಷ್ಮ । ದ್ವಾರದೊಳಗೆರಡುಪಕ್ಷೀ ಶೇರಿ ಸುಖ । ಸಾರ ಉಣ್ಣುತಲಿಪ್ಪವು । ವತ್ಸ । ಶಿವ ॥೨॥ ವರಜಗತ್ತೆಂಬ ಬನದಿ ರಾಜಿಸುವ । ಮರದಿ ಪೊಂಭತ್ತು ಪುಷ್ಪ । ಅರಳೀ ವರಬಿಂದು ಕಳೆನಾದವು ಎಂತೆಂಬ । ಪರಿಮಳವು ಪೊತ್ತೆಸೆವುದು ॥ ವತ್ಸ ॥ ಶಿವ ॥

ಪುದಿದ ಅಜ್ಞಾನವೆಂಬ । ಪಣ್ಣೆಲೆಗಳುದುರಿ ಪರಬೊಮ್ಮಬೋಧ ಎಂಬ । ಮೃದುವಾದ ಚಿಗುರೆಲೆಗಳು ನೆರಳಾಗಿ । ಹೃದಯಕಾನಂದಪೂರ್ಣ್ಣಂ ವತ್ಸ ॥ ಶಿವ ॥ ೪ ॥ ಪರಮಜ್ಞಾನಾಮೃತವನೇ ತುಂಬಿರುವ । ವರಮೋಕ್ಷವೆಂಬ ಫಲವಂ ಇತ್ತು । ಗುರುಮಹಲಿಂಗನಾಭಕ್ತರ್ಗೆ । ಕರದು ಕೊಡುವದರಿಂದಲಿ ವತ್ಸ ॥ ಶಿವ ॥ ೫ ॥

ರಾಗ—ಕಲ್ಯಾಣಿ—ಅಟತಾಳ

೩೨. ಚಿಂತಾಮಣಿ ಸಿಕ್ಕಿತು ಶ್ರೀಗುರುವೆಂಬ । ಚಿಂತಾಮಣಿ ಸಿಕ್ಕಿತು ॥ ಪ ॥ ಚಿಂತಿಸಲು ಅಜ್ಞಾನ ಪಟಲವ ಮುಂದೆ ಭೇದಿಸಿ ಜ್ಞಾನಬೋಧೆಯ । ಸ್ವಾಂತರಂಗದಿ ತುಂಬಿಹಿಂದಣ । ಭ್ರಾಂತಿಯಲ್ಲವ ಕಳೆದು ರಾಜಿಪ ॥ ಚಿಂತಾ ॥ ಅ ॥ ಪರುಷ ವೇದಿಯ ಸೋಂಕಿದ ಕಬ್ಬಿಣ ತಾನೆ । ವರ ಅಪರಂಜಿಯಾದ ಪರಿಯು ವರ ಅಮೃತ ಮಸ್ತಕ । ಸ್ಫುರಿಶದಿಂ ತನ್ನಂತೆ ಮಾಡುತ ತರಿದು ಭವಪಾಶವನು ಕರುಣದಿ । ಸ್ಥಿರ ಮುಕುತಿ ಸಾಂಬ್ರಾಜ್ಯವಿತ್ತು ॥ ಚಿಂತಾ ॥೧॥ ಶರೀರವು ನಶ್ವರವು ಇಂದ್ರಿಯಪ್ರಾಣ। ಕರಣಗಳ್ ಚಂಚಲವು । ಅರಿಯಲಿವಕಾಧಾರವಾಗಿಯೆ । ಮೆರೆವಮುವ್ವತ್ತೆಂಟು ಕಳೆಗಳ್ । ಬೆರತು ಬೆಳಗುವ ಸ್ವಪ್ರಕಾಶದ । ಪರಮತ್ಯಗ್ವಸ್ತುವೆಂಬುವ ಚಿಂತಾ ॥ ೨ ॥ ಕಾಣುವ ನಾದಬಿಂದೂ ಚಿತ್ಕಳೆಯೊಮ್ಮೆ ಕಾಣದೆ ಪೋಪುದೆಂದು । ಭಾನುವಿಗೆ ವರದೀಪದಾರತಿ ಜಾಣರತ್ತವಪರಿಯ ಯೋಗದಿ । ಏನು ಫಲವಿಲ್ಲಮಲಬ್ರಹ್ಮ । ಜ್ಞಾನವೇ ಶ್ರೇಷ್ಟನುತವರದ ॥ ೩ ॥ ಪುಂಸ್ತ್ರಿನಪುಂಸಭೇದ ರೂಪನ ಭ್ರಾಂತಿ । ದ್ರಂಶಗೈಯುತ ಪೂರ್ವದ । ಸಂಶಯದ ಕರ್ಮವನುದಹಿಸುತ । ಹಂಸಹಂಸೋಹಮೆನ್ನುತ। ಶಿಂಶುಮಾರದಿ ಆಡುತಿರುವ । ಹಂಸಪಕ್ಷಿಯು ಶಿರದಿ ಥಾಳಿಪ ॥ ಚಿಂತಾ ॥ ೪ ॥ ಕ್ಷುಧೆ ತೃಷೆ ಮೊದಲಾದ ಅರೂರ್ಮಿಗೆ । ಮೊದಲೆ ತಾ ಸಾಕ್ಷಿಯಾದ ಪದುಳಗುರುಮಹಲಿಂಗ ನೆನ್ನಿಸಿ । ಹೃದಯದೊಳಹೊರಗೆ ಭರಿತದಿ । ಪದುಳ ಶತಕೋಟಿಯುಂದದಿ । ವದಗಿ ಥಳಥಳ ಬೆಳಗುವಂಥ ॥ ಚಿಂತಾ

ರಾಗ—ಭೈರವಿ

೩೩. ಪರುಷಕಣಿಯೆಂಬ ರತ್ನ ದೊರತವನೆ । ಧರೆಯೊಳಗೆ ಪುಣ್ಯಾತ್ಮನು ವತ್ಸ ಪರುಷಕಣಿಯೆಂಬ ॥ಪ॥ ಬ್ರಹ್ಮಗಿರಿಯೊಳಗಿರ್ಪುದು। ಅದನರಿತ ಬ್ರಹ್ಮ ಇಂದ್ರಾದಿ ಸುರರು । ಮುನಿಗಳ್ । ಪೇರ್ಮೆಯಿಂ ಖುಷಿಸಿದ್ಧರು ಕಾದಿಹರು । ತಮ್ಮ ಉಜ್ಜೀವನವುಯೆಂದು । ವತ್ಸ ॥ ಪರುಷ ॥ ೧ ॥ ದೃಷ್ಟಿಯೊಳು ಶ್ರೇಷ್ಟವೆನಿಸಿ । ಸುಕೃತಿಗಳ ದೃಷ್ಟಿಗೋಚರಮಪ್ಪುದು । ಇದನು । ಮುಟ್ಟಿದವರಘವ ಸುಟ್ಟು । ತನ್ನಂತೆ ಶ್ರೇಷ್ಟತೆಯುಗೈಯುತಿಹುದು । ವತ್ಸ ಪರುಷ ॥ ಪರಮತುರ್ಯನಿಮದು । ಇದು ಸತ್ಯ । ವಿರತಿ ಉಪರತಿಯು ಬೋಧವೆಂಬ । ಪರಮ ಕಲ್ಯಾಣಗುಣದಿಂ । ಬೆಳಗುತಿಹ । ವರಚಿಹ್ನೆಯಿಂದಿರುವದೂ । ವತ್ಸ ॥ ಪರುಷ ॥ ೩ ॥ ವರಜ್ಞಾನಭೂಮಿಯೆಂಬ ಥಳಥಳಿಪ । ಪರಮಜ್ಯೋತಿರ್ಲತೆಗಳು । ನಿತ್ಯ ಉರು ಸಮಾಧಿಗಳೆಂಬುವ

ಅಮೃತಲತೆ । ಸ್ಫುರಿಸಿ ಪರಿವೇಷ್ಟಿಸಿಹವು । ವತ್ಸ ॥ ಪರುಷ ॥ ೪ ॥ ಕಲ್ಲುಕಣಿಯಲ್ಲ ಬ್ರಹ್ಮವೆಂತೆಂಬ । ಸಲ್ಲಲಿತಜ್ಞಾನರತ್ನ ಜಗದಿ । ಕಲ್ಲ ಬೆಲ್ಲವಮಾಡಿ। ಗುರುರಂಗನಲ್ಲಡಗಿ ಕೊಂಡಿರ್ಪುದು । ವತ್ಸ ॥ ಪರುಷ ॥ ೫ ॥

ರಾಗ—ಭೈರವಿ

೩೪. ಮರುಜಮಣಿಯೆಂಬರತ್ನ ದೊರತವಗೆ । ಮರಣಬಾಧೆಗಳಿಲ್ಲವು । ವತ್ಸ ಮರುಜಮಣಿಯೆಂಬ ॥ ಪ ॥ ಚಿನುಮಲಾದ್ರಿಯೊಳಿರ್ಪುದೂ । ರವಿಯಂತೆ । ನಿರ್ಮ ಲದಿ ಬೆಳಗುತಿಹುದು । ಇದಕೆ । ಮನ್ಮುನಿಗಳಜಮುಖ್ಯರೂ । ಕಾದಿಹರು । ನೆಮ್ಮಿ ತಪವನುಗೈಯುತ । ವತ್ಸ ॥ ಮರು ॥ ೧ ॥ ಸತ್ತವರಬದುಕಿಸುವದು । ತೃಣವೆನಿಸ । ದುತ್ತಮದಜೀವರತ್ನ । ಇದನು । ಅರ್ಥಿಯಿಂ ಪೂರ್ವದವರು । ಪಡದು ತಮಮೃತ್ಯು ಬಾಧೆಯನಳಿದರು । ವತ್ಸಮರು ॥ ೨ ॥ ಹಿಂದೆ ರಾವಣಯುದ್ಧದೀ ಸೌಮಿತ್ರ । ಕಂದಿ ಮೂರ್ಛಿತನಾಗಿರೆ । ಹನುಮ । ತಂದ ಸಂಜೀವನಗಿರಿಯಿಂ । ದೆಚ್ಚತ್ತ । ನೆಂದು ಕೊಂಬರು ಜಗದೊಳು ॥ ೩ ॥ ಇಂದು ಆತ್ಮಾರಾಮನು । ಪುಸಿಮಾಯ । ಬಂದಿ ಯಿಂತಾಮರತಿರೇ । ಗುರುವು । ಬಂದು ಪ್ರತ್ಯಕ್ಷಕೊಟ್ಟ । ವಾಕ್ಯದಿಂಬಂಧನವೆ ಬಯ ಲಾಯಿತು । ವತ್ಸ ॥ ಮರು ॥ ೪ ॥ ಮಿಾರಿರುವ ಜಾಡ್ಯಕಿದರ ಸುಳಿಗಾಳಿ । ದೂರ ಬೀಸಿದಮಾತ್ರದಿ । ಅವನ ಪ್ರಾರಬ್ಧವೆಲ್ಲನಸಿದು ನಿರ್ಮಲದಿ । ಧೀರಗುರುರಂಗನಪ್ಪಂ । ವತ್ಸ । ಮರುಜಮಣಿಯೆಂಬರತ್ನ । ವತ್ಸ ॥ ಮರು ॥ ೫ ॥

ಇತಿ ಜ್ಞಾನಪಂಚರತ್ನ ಸಮಾಪ್ತಿಃ

o o o

ಅಮನಸ್ಕ ರಾಜಯೋಗ ನಿರೂಪಣೆ

೩೫. ಕಂದ ॥ ನಿತ್ಯಸಮಾಧಿಯ ನಿಲುಕಡೆ । ಗುತ್ತಮವಾದಮನಸ್ಕರಾಜ ಯೋಗವನೀಗಳ್ ॥ ವಿಸ್ತರಿಸುವೆ ನೀನಾಲಿಪುದೈ । ಚಿತ್ತವು ಏಕಾಗ್ರದಿಂದ ವತ್ಸನೆ ಮುದದಿಂ ॥

೩೬. ಕಂದ ॥ ಆಸನಮುದ್ರೆಯಬಂಧಿಪ । ಘಾಸಿಯುಇದಕಿಲ್ಲ ಹಸ್ತಾಮಲ ಕದಛಂದದಿ ॥ ಭಾಸುರಬ್ರಹ್ಮವೆ ತನ್ನೊಳ್ । ಲೇಸಿಂದಲಿ ಕಾಣ್ಬುದೈಸೆ ನಿರು ಪಾಧಿಕದಿಂ ॥

೩೭. ಕಂದ ॥ ಧರೆಯೊಳಗಮೃತಪಾನದ । ವರಸುಖದಮನಸ್ಕಯೋಗಾ ಸಾಧಿಪ ಪುರುಷಂ ॥ ನೆರೆಮಾಯಾಂಗನೆ ಉರುಹುತ । ಪರಮಾನಂದಾಮೃತಪದವಂ ಪಡೆವಂ ಘನದಿಂ ॥

ಮನೋಲಕ್ಷಣ

೩೮. ಅಮನಸ್ಕಯೋಗವಿದು । ಮಾನಸರಾಜ । ಕ್ರಮದಿ ನೀ ಸಾಧಿಪುದು ॥ ಪ ॥ ಅಮಲಬ್ರಹ್ಮಜ್ಞಾನನಿಧಿಬ್ರಹ್ಮಇಂದ್ರಾದಿ । ಪ್ರಮುಖರಿಂಪೂಜಿತನಿರ್ವಾಣ ಪಥವು ॥ ಅಮ ॥ ಅನು ॥ ಧರೆಯೊಳು ಪ್ರಖ್ಯಾತಿಯು ಯೋಗಂಗಳ್ । ಮೆರೆವ ಶಿಖಾಮಣಿಯು । ವರಸೂಕ್ಷ್ಮಬುದ್ಧಿಗೆ ಸುಲಭವು ಸಾಧ್ಯವು । ಉರುಮಂದಬುದ್ಧಿಗೆ ಕಠಿಣವಸಾಧ್ಯವು ॥ ಅಮ ॥ ೧ ಮನವೆವಾಸನಮಯವು । ಸರ್ವಾರಂಭ । ಮನವೆ ಮಾಯಾಗುಣವು । ಮನವೆ ಸಂಶಯರೂಪು ಜಡವಣುಮಾತ್ರವು । ಮನವೆ ನಾಶನ ವಾಗಲಮನಸ್ಕವೆನಿಪುದು ॥ ಅಮ ॥ ೨ ॥ ಅರಿವರ್ಗಮದಗುಣವುನಾಶವುಕೆಟ್ಟ । ದುರಿತಕರ್ಮವು । ಪರಮಗುಹ್ಯಾದ್ಗುಹ್ಯವೆನಿಸಿಕೊಂಡಿಹುದಿದು । ಗುರುಮಹಲಿಂಗ ಗಬೋಧಿತಬ್ರಹ್ಮವಿದ್ಯವು ॥ ಅಮನಸ್ಕ ॥ ೩ ॥

ರಾಗ—ಸುರಟಿ—ಆದಿತಾಳ

೩೯. ಮನವಜೈಸಲರಿದು । ಜೈಸದೆ । ಘನಸುಖವಳವಡದು ॥ ಪ ॥ ಕ್ಷಣ ದೊಳನರ್ಗವ ಕಾರ್ಯವಗೈವನು । ಮನುಜ ಮಾಡದ ಕೆಲಸಿನ್ನೇನಿಹುದು ॥ ಮನವ ಜೈಸ ॥ಅನು॥ ಹುಲಿಯಹಾಲುತಂದು । ಸಾಸಿರ । ಕೊಳಗದಿತಂದೊಯ್ದು ಇಳೆಯೊಳ ಗುತ್ತಮ ಶಿವರಾತ್ರಿ ದಿವಸದಿ । ಮಲಹರಗಭಿಷೇಕಮಾಡಲುಬಹುದು ॥ ಮನ ॥ ೧ ॥ ಮೊಲದಗಿಣ್ಣುತಂದು ಪಾಯಸ । ನಲವಿಂದಲಿಗೈದು । ಸಲೆ ದ್ವೀಪಾಂತ್ರದಿ ಪರುಷ ಲಿಂಗಕ್ಕೆ । ನಲವಿಂದನೈವೇದ್ಯಮಾಡಲುಬಹುದು ॥ ಮನ ॥ ೨ ॥ ಜೀವದಕೇಸರಿಯ ನಖಗಳ । ಸಾವಧಾನದಿತಂದು । ಭಾವಿಸಿಬಿಲ್ವಪತ್ರೆನುತಗಜೇಶನಿಗೆ । ಸಾವಿರ ಮಂತ್ರದಿ ಪೂಜಿಸಬಹುದು ॥ ಮನ ॥ ೩ ॥ ಉರುಗನಹೆಡೆಯೊಳಗೆ ರಾಜಿಪವರ ಜೀವರತ್ನವನು । ಧರೆಯೊಳಗನ್ಮೃತೇಶ್ವರನಿಗೆ ಉನ್ನತ । ಸರವನುಪೋಣಿಸಿಅರ್ಪಿಸ ಬಹುದು ॥ ಮನ ॥ ೪ ॥ ಏನುಮಾಡಿದಡೇನು । ಮನಸಿಗೆ । ತಾನೆಸಾಕ್ಷಿಇರುವ ಜ್ಞಾನಿ ಶ್ರೀಗುರುಮಹಲಿಂಗನಕಾಣ್ಪರೆ । ಕೋಣ ಗಾಣವಸುತ್ತಿ ಸತ್ತಂತಹುದು ॥ ಮನವ ಜೈಸಲರಿದು ॥ ೫ ॥

ರಾಗ—ಸುರಟಿ—ಅಟತಾಳ

೪೦. ಕೋತಿಮನವ ನಂಬಬಹುದೆ । ಇಂಥ । ಕೋತಿಮನದ ಚೇಷ್ಟೆಗೊಳ ಗಾಗಬಹುದೆ । ಕೋತಿಮನವ ॥ ಪ ॥ ತನುವೆಂಬವೃಕ್ಷದೊಳಿಹುದು ದುಷ್ಟ । ಗುಣ ವೆಂಬ ಕೊಂಬೆಗಳಿಗೆ ಹಾರುತ್ತಿಹುದು । ಅನುಮಾನಗಳೆರೂಪಾಗಿಹುದು । ಬಂದು । ಕ್ಷಣದಿಈರೇಳುಲೋಕವಸುತ್ತುತ್ತಿಹುದು ॥ ಕೋತಿ ॥ ೧ ॥ ದಶದಿಕ್ಕುಗಳ ನೋಡು ತ್ತಿಹುದು । ಒಮ್ಮೆ । ಬಿಸಜಾಕ್ಷಿಯರ ನೋಡಿ ಪಲ್ಕಿಸಿಯುವದು । ವ್ಯಸನವೇಳರ ಪಾಲಾಗಿಹುದು । ಕೆಟ್ಟ । ವಿಷಯಂಗಳೆಂಬಪಣ್ಗಳನೆಲ್ಲುತ್ತಿಹುದು ॥ ಕೋತಿ ॥ ೨ ॥ ವರಜ್ಞಾನದರಮನೆಸೇರದು । ನಿತ್ಯದುರಿತಕರ್ಮದಬನದೊಳಾಡುತಿಹುದು । ನರ

ಕಾದಿಬಿದ್ದುಹೋಗುವದು ನಮ್ಮ । ಗುರುಮಹಲಿಂಗನಮರತುಕೊಂಡಿಹುದು ॥ ಕೋತಿ ಮನವನಂಬಬಹುದೆ ॥

ರಾಗ—ಮಾರವಿ—ಆಟತಾಳ

೪೧. ಮನವ ಜರಿಯಬೇಡಣ್ಣ । ನಿನ್ನ । ಮನವನೀನರಿತರೆ ನೀನೆ ಮುಕ್ಕಣ್ಣ । ಮನವಜರಿಯಬೇಡಣ್ಣ ॥ ಪ ॥ ಮನವ ಭಕ್ತಿಯ ಮಾಡುತಿಹುದು ಮತ್ತೆ ಮನವೆ ವಿರಕ್ತಿಯಿಂದೆಲ್ಲ ತೋರುವದು । ಮನವೆ ಸದ್ಗುರು ಹೊಂದುತ್ತಿಹುದು । ಇಂಥ । ಮನವೆ ಮಾನಸ ಪೂಜೆಯೊಳು ರಮಿಸುವದು ॥ ೧ ॥ ಮನವೆ ಹಠವ ಸಾಧಿಸುವದು । ಒಮ್ಮೆ । ಮನವೆ ಯೋಗದಿ ಸಿದ್ಧಿಹೊಂದುತಲಿಹುದು । ಮನವೆ ಮಂತ್ರವ ಜಪಿಸುವದು । ಇಂಥ । ಮನವೆ ದೈವವಸ್ವಾತಂತ್ರದೊಳಿರಿಸುವದು ॥ ಮನ ॥ ೨ ॥ ಮನವೆ ಮುದ್ರೆಯ ಸಾಧಿಸುವದು । ನಿತ್ಯ । ಮನವೆ ತಾರಕಬ್ರಹ್ಮದೊಳು ಬೆರೆಯುವದು । ಮನವೆ ಮೌನದಿ ಕೂಡಿರುವದು । ಇಂಥ । ಮನವೆ ಆತ್ಮನ ನೆನದಾನಂದಿಸುವದು ॥ ಮನ ॥೩॥ ಮನವೆ ತತ್ವಗಳರಿಯುವದು । ಮತ್ತೆ ಮನವೆ ಸರ್ವೇಂದ್ರಿಯರಾಜನಾಗಿಹುದು । ಮನವೆ ಸೂಕ್ಷ್ಮದಿ ಸುಳಿಯುವದು । ಇಂಥ । ಮನವೆ ಬ್ರಹ್ಮಾಂಡ ಪಿಂಡಾಂಡವಾಗಿಹುದು ॥ ಮನ ॥ ೪ ॥ ಮನವೆ ಜ್ಞಾನವ ಸಾಧಿಸುವದು । ಖ್ಯಾತಿ । ಮನವೆ । ಮುಕ್ತಿಯ ರಾಜ್ಯವನ್ನು ಆಳುವದು । ಮನವೆ ಬ್ರಹ್ಮನಹೊಂದುತಿಹುದು । ಇಂಥ । ಮನಗುರುಮಹಲಿಂಗನೊಳಗೈಕ್ಯವಹುದು ॥ ಮನ ॥ ೫ ॥

ಮನೋನಾಶವು

ರಾಗ—ಭೋಗಷಟ್ಪದಿ

೪೨. ಮನವು ನಾಶವಾಗವನ್ನ । ಜನಿಸದಾತ್ಮಜಾನಮುನ್ನಾ । ಮನವ ನಾಶಗೈದಧಾಪುರುಷಾ ಜ್ಞಾನಸಂಪನ್ನ ॥ ಪ ॥ ನಿರುತ ನೀರು ಕ್ಷೀರೊಂದಾಗಿ । ಬೆರತಿರುವ ಪರಿ ವಾಯುಮನವು । ಎರಡು ಬೆರತೊಂದಾಗಿ ಚರಿಸುತಿಪ್ಪವದರಲ್ಲಿ । ಚರಿಸಲೊಂದು ಬಳಿಕಿನ್ನೊಂದು । ಬರಿಸುತ್ತಿಹುದು । ಮತ್ತಿನ್ನೊಂದು। ಚರಿಸದಿರಲು ಸುಮ್ಮನಿರವವೆರಡು ಒಂದಾಗಿ ॥ ಮನವು ॥ ೧ ॥ ವಿನುತಾಷ್ಟಾಂಗಯೋಗದಿ ನಿತ್ಯ । ತನುವ ದಂಡಿಸುತ್ತಲೆಷ್ಟು । ಎಣಗಿದರು ವಾಯು ಸಾಧ್ಯನಾಗದೆಂದಿಗು। ಮನವು ನಾಶವಾಗುವದೊಂದೆ ಕ್ಷಣಕೆ ಸದ್ಗುರುಕರುಣಾದಿಂದ । ಮನವು ನಶಿಸಿ ಯಾಲಮನಸ್ಕವೆಂದೆನಿಪೂದೆಂತೆನೆ ॥ ಮನ ॥೨॥ ವರಮಾನಸಾಸರೋವರದೀ । ಭರದಿ ಮುಳುಗಿದ ವಾಯಸವೂ । ಪರಮ ಹಂಸನಾಗುವಂತೇ ಹೀನಮನವಿದು । ಉರುತರಮೃತಾಕೊಳದಿ ಒಮ್ಮೆ ಹರುಷದಿಂದಾ ಮುಳುಗಲ್ಯಾಗಿ । ಪರಮಾತ್ಮನೆ ಆಗಿ ನಿತ್ಯ ಬೆಳಗುತಿಪ್ಪುದು ॥ಮನ॥೩॥ ನಾನಾ ಪುಷ್ಪಕ್ಕೆರಗುವ ಭ್ರಮರ । ತಾನೆ ಸಂಪಿಗೆ ಪುಷ್ಪಕ್ಕೆರಗಿ । ಪ್ರಾಣಬಿಟ್ಟಪರಿಯ ನಾನಾಕರ್ಮಧರ್ಮದಿ । ತಾನೆ ತಿರುಗುವ ಮನವು । ಪೂರ್ವಬ್ರಹ್ಮದಿ ಮುಳುಗಲಾಗೀ । ಹೀನವಿಷಯ ಮರತು ಮಗ್ನತೆಯಾಗುತಿರ್ಪುದು ॥ ಮನ ॥ ೪ ॥ ವನವು

ನಶಿಸಿಯೆ ಪ್ರಾಣೇಂದ್ರಿಯ । ಗುಣಗಳಳಿದು ಕೆಡುವುದು ಕರ್ಮ । ವಣಗಸುಪ್ತಿಯಲ್ಲಿ ಕರದಪುಷ್ಪವ ಮರತಂತೆ । ಮನವದಳಿಯಾಲದ್ವೈತವು ತನಗೆತಾನೆ ಸಿದ್ಧಿಸುವುದು । ಅನುಪಮದ್ವಯ ಗುರುರಂಗನು ತಾನೆಯಾಗುವ ॥ ಮನ ॥ ೩ ॥

ರಾಗ—ಕುಸುಮಷಟ್ಪದಿ

೪೩. ಜ್ಞಾನಹದ ನಿರ್ಣಯವ । ಜ್ಞಾನಗುರುವೆಬಲ್ಲ । ಜ್ಞಾನವಿಲ್ಲದ ಮರ್ತ್ಯ ಮನುಜೇನುಬಲ್ಲ । ಜ್ಞಾನಹದ ॥ಪ॥ ಧರೆಯೊಳೊಜ್ರದಗಿರಿಯಾ । ವರವಜ್ರಮೊಳೆಯಿಂದ । ಕೊರದು ಚೂರ್ಣಕೃತವಾಗೈದು ಬಿಡುವಂತೆ । ಗಿರಿಯಂತೆ ಬೆಳದಿರುವಾ ಉರುಕಲ್ಪಿತದ ಮನವ । ವರಸೂಕ್ಷ್ಮಮನದಿಂ । ಕೊರೆದುಬಿಡುವಂಥ ॥ ಜ್ಞಾ ॥೧॥ ಭುವಿಯೊಳುಕ್ಕಿ ಘಟ್ಟ । ತವೆಯುಕ್ಕಿನುಳಿಯಿಂದ ತವಕದಿಂ ಕತ್ತರಿಸೀ । ಹಾಕುವಂದದಲಿ । ವಿವಿಧ ಸಂಕಲ್ಪಗಳೂ ಕವಿದೆ ತಾಮಸಮನನ । ನವಿನಮಾನಸದಿಂದಾ ಕತ್ತರಿಸುವಂಥ ॥ಜ್ಞಾನ॥ ೨ ॥ ಜಲನೊಳುದಿಸಿದಕೆಸರ । ಜಲದಿಂದ ತೊಳೆಸುತೆ । ಹೊಲೆಮನದಿ ಜನಿಸಿರುವ ಮಲತ್ರಯಕೆಸರ । ನಲಿದು ಮನದಿಂ ತೊಳೆಯೆ । ಸಲೆ ಬ್ರಹ್ಮಮಯವಾಗಿ । ಇಳೆಗಧಿಕಮಹಲಿಂಗ ಗುರುವಾಗುವಂಥಾ ॥ ಜ್ಞಾನಹದ ನಿರ್ಣಯವ ॥ ೩ ॥

೪೪. ಸೀಸಪದ್ಯ ॥ ಕಷ್ಟಒಟ್ಟಾಸನವು ಪಂಚಮುದ್ರೆಯುನಾದ । ಬಿಂದುಕಳೆ ನೋಡ್ವೆ ಸಂಕಲ್ಪ ಸಲ್ಲ । ನಿಷ್ಟವಿರತಿಯು ಇಂದ್ರಿಯಗಳ ನಿಗ್ರಹ ನಿತ್ಯ । ಜಪತಪಾನುಷ್ಠಾನ ಕರ್ಮಸಲ್ಲ । ದ್ರಿಷ್ಟಿಯಂ ಸುಜ್ಞಾನಮಯವನಿಶೆ ಭ್ರಾಂತಿಯು । ಉಡುಗಿ ಬ್ರಹ್ಮಾಕಾರತೋರ್ಪುದಾಗಿ । ದ್ರಷ್ಟೃದರ್ಶನದೃಶ್ಯವೆಂಬ ತ್ರಿಪುಟಿಯು ತಾನೆ । ಯಾವ ಪರಬ್ರಹ್ಮದೋಳ್ ಲಯಿಸುತಿಹುದೋ ॥

ಗೀತೆ॥ ದ್ರಿಷ್ಟಿ ಆ ಸ್ಥಳದಲ್ಲಿ ನಿಲಿಸೆಂದು ಮುನ್ನಿನ । ನಾಸಾಗ್ರದ್ರಿಷ್ಟಿಯಂಬಿಡಿಸಿ ಮೂಲೋಕದಿ ಶ್ರೇಷ್ಟವಾಗಿಹ ಜ್ಞಾನದ್ರಿಷ್ಟಿಯಂಕರುಣಿಸಿ । ವಸ್ತು ಸಾಕ್ಷಾತ್ಕರಿಸುವಂ ದೇಶಿಕೇಂದ್ರಂ ॥

ಸಮಾಧಿ ಲಕ್ಷಣ

೪೫. ಕಂದ ॥ ಗುರುವರಯನ್ನಯಚಿತ್ತದಿ । ಉರುಸಂಶಯಜನಿಸಿ ಕಾಡುತಿದೆ ನೀಕರುಣದಿ ॥ ಪರಿಹರಿಸೆನ್ನಯ ಸಂಶಯ । ಗಿರಿಯಂ ಛೇದಿಸವಪದವಿಯೆಂದೆರಗಿದವತ್ಸಂ ॥

೪೬. ಕಂದ ॥ ಇದು ಅನೃತೆನಿಸುವ ಜಗವು । ಇದು ಬ್ರಹ್ಮವು ನಾನು ಯೆಂಬುವ ಕಾಲದಿ ಪುಸಿಮನ ಚಲಿಸದೆಯಿಹುದೋ ಇಲ್ಲವೋ । ವಿದಿತದಿಯನ ಗೊರೆದು ರಕ್ಷಿಸು ಕರುಣಾಸಿಂಧು ॥

೪೭. ಕಂದ ॥ ದಿನವು ಸಮಾಧಿಯೊಳಿಪ್ಪಗೆ । ಮನವಂದಿರೆ ಸರ್ವವಿಷಯ ಸಂಸಾರಿರ್ಬ್ಯ । ಮನವಿರಲೆಂತು ಸಮಾಧಿಯು । ಕ್ಷಣವಗಲದೆ ರಾಜಯೋಗಿಗೆ ಸಿದ್ಧಿಪುದೈಸೆ

೪೮. ಕಂದ ॥ ವಿನುತಸಮಾಧಿಯನಿಷ್ಠಗೆ । ಮನನೆಂಬುವದಿಲ್ಲದಿರಲು ಶಿಷ್ಯಗೆ ಜಗದೋಳ್ ॥ ಅನುಪಮಬ್ರಹ್ಮವಬೋಧಿಪ । ಘನಗುರುವಿಲ್ಲೆಂದು ಸರ್ವರು ನಿಶ್ಚಿಸವೇಳ್ಕುಂ ॥

೪೯. ಕಂದ ॥ ಜ್ಞಾನಿಯು ಮನ ಕೆಲಕಾಲವು । ಆನಂದದಿಮುಳುಗಿ ಪುನರಪಿ ಬಾಹ್ಯಕೆಬಂತೆನೆ ॥ ಜ್ಞಾನಿಗೆ ಜನ್ಮವು ಘಟಿಸುತ ।ನ್ಯೂನತೆಎನಿಸುವದು ಜೀವನ್ಮುಕ್ತಿಗೆ ಧರೆಯೋಳ್ ॥

೫೦. ಕಂದ ॥ ಅದರಿಂದೆನ್ನಯಹೃದಯದಿ । ಪುದಿದಿಹಸಂಶಯವ ಛೇದಿಶಿ ಕರುಣದಿ ಗುರುವೇ ॥ ಸದಮಲಬೋಧಾನಂದದ । ಸುಧೆಯೊಲಿದೀಂಟಿಸುವದೆಂದಂ ಮಾನಸರಾಜಂ ॥

೫೧. ಕಂದ ॥ ವರಶಿಷ್ಯನ ಕುಶಲತೆಯಂ । ಉರುತೀವ್ರಸೂಕ್ಷ್ಮಬುದ್ಧಿ ವಿವೇಕಕೆ ಮೆಚ್ಚುತ ಭರಿತಾಂತಃಕರುಣದಿ ಶ್ರೀ । ಗುರುಮಂದಸ್ಮಿತವದನದೊಳೀಪರಿ ನರೆದಂ ॥

೫೨. ಕಂದ ॥ ವರಶಿಷ್ಯಶಿಖಾಮಣಿ ಕೇಳ್ । ಅರಿವುದೆ ಜಡಮನವು ಆತ್ಮದು ಜಗವಿದುಯೆಂಬುದ ॥ ಪರಮನೆಬುದ್ಧಿಯಮುಖರಧಿ । ವರದಾರಪ್ರಕಾಶಮನೆಲ್ಲವನೂ॥

೫೩. ಕಂದ ॥ ಮನವತಿಚಂಚಲ ದೃಶ್ಯವು । ಚಿನುಮಯನೆನಿಸಿರುದನಿನಗೀ ಸಂಗವುವುಂಟೆ ॥ ದಿನಕರನಿಗೆಶಶಿಶೃಂಗದ । ಗುಣದೋಷಂಗಳಂಟದಿರುವಪರಿಯಂದ ಯ್ಯೆ ॥

೫೪. ಕಂದ ॥ ಧರಣಿಯವ್ಯಾಪಿಸಿಕೊಂಡಹ । ವರಗಗನಕೆ ಶಶಿವಿಷಾಣಕೆ ಸಂಗವದುಂಟೆ ॥ ಅರಿಯಲಿಕಾಪರಿ ಆತ್ಮಗೆ । ಚರಿಸುವ ಮನಸಿಂಗೆ ಸಂಗವೆಪುಸಿ ಯೆಂದರಿಯೈ ॥

೫೫. ಕಂದ ॥ ಚಲಿಸಲು ಮನವಿಂದ್ರಿಯಗಳ್ । ಚಲಿಸಿದೆನಾನೆಂದು ಮುಂದಿಗು ತಿಳಿಯಲುಸಲ್ಲ ॥ ಚಲಿಸುವ ಮನದ ವಿಕಾರಕೆ ಸಲೆ । ಸಾಕ್ಷಿಕಬ್ರಹ್ಮನಾ ನೆಂದರಿಯಲೊ ಕಂದಾ ॥

ರಾಗ—ಕಲ್ಯಾಣಿ—ಅಟತಾಳ

೫೬. ಮನದವಿಕಾರವಿಲ್ಲ । ಸುಜ್ಞಾನಿಗೆ ತನುಗುಣದೋಷವಿಲ್ಲಾ ॥ ಪ ॥ ಮನಚಂಚಲಣುಮಾತ್ರಜಡದೃಶ್ಯವೆನಿಪುದು । ತನುಮನಸಾಕ್ಷಿಯಾಗಿಹಚಿದ್ರೂಪಗೆ ತ್ಯ ॥ ಮನದ ॥ ಅ ಮೊದಲಂತೆಕರಣೇಂದ್ರಿಯಗಳ ದೋಷಂಗಳು । ಮೊದ ಲಂತೆ ಕಾಮಾದಿವಿಷಯದ್ವೇಷಗಳು । ಮೊದಲಂತೆ ಜೀವಭಾವನಗುಣವಂಟವು । ಸದ ಮಲಬ್ರಹ್ಮದಿಮುಳುಗಿರುವದರಿಂದ ॥ ಮನ ॥ ೧ ॥ ಮುಳುಗಿ ಗುಡುಗು ಮಿಂಚು ದಾರ್ಭಟಿಗಳು ಗಗನವಂಟದಪರಿ ಮೂರುಕಾಲದೊಳು । ಬಗೆಬಗೆಯವಿಷಯ ಸಂಸಾರದೊಳಿದ್ದರು । ಜಗದೊಳು ನಿರ್ಲೇಪನಾಗಿರುವದರಿಂದ ॥ ಮನ ॥ ೨ ॥ ರವಿ

ಶಶಿಯೆದುರಿಗೆ ರಾಹುಸಂಚರಿಪಂತೆ ತವೆಮನಸುಳಿದಾಡುತ್ತಳಿದುಪೋಗುವುದು ॥ ಪ್ರವಿಮಲಾದ್ವಯನಚಲಾವ್ಯಕ್ತನೆನಿಸುವ । ಶಿವಗುರುಮಹಲಿಂಗನಾಗಿರುವದರಿಂದ ಮನದವಿಕಾರ ॥ ॥ ೫ ॥

ರಾಗ—ಯಾಲಪದ

೫೭. ಸೀತಾರಾಮಾಂಜನೇಯನಿಗೆ । ಖ್ಯಾತಿಬ್ರಹ್ಮೋಪದೇಶವನ್ನು ಪ್ರೀತಿಯಿಂದಾಗೈದಾಮರ್ಮವ । ಓ ಮಾನಸೇಂದ್ರ । ನೀತಿಳಿಯೆಂದೊರೆದ ಶ್ರೀಗುರುವೂ ॥ ಪ ॥ ಘನದಂಡಕಾರಣ್ಯದಿ ಋಷೀ । ಮುನಿಮಾನ್ಯರ ಸಭೆಯಮಧ್ಯ । ವಿನುತ ಋಷಿಯ ವೇಷವನು ಧರಿಸಿ । ಓಮಾನಸೇಂದ್ರ । ಘನದಿ ರಾಮಚಂದ್ರನಿದ್ದಾನು ॥೧॥ ಆತನನ್ನು ನೋಡಲರಸೀ । ಓತುಬಂದಋಷಿಪತ್ನಿಯರು । ಸೀತೆ ನಿನ್ನ ಪುರುಷನು ಯಾರೆಂದು । ಓಮಾನಸೇಂದ್ರ । ಪ್ರೀತಿಯಿಂದಾ ನುಡಿಸೀದಾರಂದು ॥ ೨ ॥ ಇವನೋ ಅವನೋಎಸುತ ತೋರೋ । ಇವನಲ್ಲವನಲ್ಲೆನುತಿದ್ದವಳು । ಜವದಿ ರಾಮನನ್ನು ತೋರಲೂ । ಓಮಾನಸೇಂದ್ರ । ತವೆ ಮೌನಗೊಂಡಳೂ ನಾಚುತ ॥ ೩ ॥ ಅರಿಯಾಲಾಪರಿ ಕರುಣಾದಿಗಳಾ । ಭರದೀನೇತಿಗಳಿದಾತ್ಮನನ್ನೂ । ಅರಿತೂಮೌನಗೊಳ್ಳಬೇಕೈಸೆ । ಓಮಾನಸೇಂದ್ರ । ನಿರುತಸೀತಾದೇವಿಯಛಂದದಿ ॥ ೪ ॥ ಚರಿಪಮನವು ಪ್ರತ್ಯಕ್ಷದೀ ಪರಮಾತ್ಮನನ್ನು ಕಾಂಬುವನ್ನ । ದೊರಿಯದಮಲಬೋಧೆಯದರಿಂದ । ಓಮಾನಸೇಂದ್ರ । ವರವೆ ಬ್ರಹ್ಮದಲಕ್ಷ್ವಾರ್ಥವಹ್ನು ॥ ೫ ॥ ಸತ್ಯಚಿದಾನಂದವುಎನಿಪ । ವಸ್ತುವಿನೋಳ್ಮನಮುಳುಗಲು । ಮಿಥ್ಯನಾಮರೂಪುಓಲೈಸುತ । ಓಮಾನಸೇಂದ್ರ। ಚಿತ್ರಪ್ರಥಮೆಯಂತೆನಿಲ್ಲುವುದು ॥೬॥ ಇದು ಜೀವೇಶಾರೈಕ್ಯವೆನುತ । ಚದುರ ಸೀತಾಭಗವತೀಯ । ಎದುರೀಗಿದುವೇ ಸಮರಸಾವೆಂದು । ಓಮಾನಸೇಂದ್ರ । ಮುದದಿ ಹನುಮಂಗೊರೆದಶ್ರೀರಾಮ ॥ ೭ ॥ ವರಸಮಾಧಿಇದು ನಂಬೆನುತ । ವರದಾ ರಾಮನ ಮುಖವನೋಡಿ । ಪರಮಪಾತಿವ್ರತೇಸೀತೆಯು । ಓಮಾನಸೇಂದ್ರ । ನೆರೆಬಯ್ಯಾರದಿ ನಗುತಲಿದ್ದಾಳು ॥ ೮ ॥ ಹರುಷದಿಂದಲಾಕೆಯನೋಡಿ । ಪರಮಗುಹ್ಯಾದ್ಗುಹ್ಯಾವಿದಕೆ । ವರಜ್ಞಾನಶಕ್ತಿಯೂಅವಳೆಂದು । ಓಮಾನಸೇಂದ್ರ । ಕರುಣ ರಾಮಚಂದ್ರನಕ್ಕಾನು ॥ ೯ ॥ ಈಕೆಸಾಕ್ಷಾತ್ಪರಬ್ರಹ್ಮಿಯೂ । ಈಕೆಗೆನಗೆಭೇದವೇಇಲ್ಲ । ಈಕೆಯಮೃತಾಂಗನೇಎನ್ನುತ । ಓಮಾನಸೇಂದ್ರ । ಲೋಕಾಭಿರಾಮನು ಪೇಳಿದಾ ॥ ೧೦ ॥ ಸತಿಯುಪತಿಗಳಿಂತು ಮುದದಿ । ಅತುಳಬ್ರಹ್ಮವಬೋಧಿಸೆ ಹನುಮ । ಮತಿಯೊಳರಿತೂತಾಧನ್ಯಾನೆಂದು । ಓಮಾನಸೇಂದ್ರ । ಅತಿಭಕ್ತಿಯೊಳಭಿವಂದಿಸಿದಾನು ॥ ೧೧ ॥ ಧರೆಯೊಳಾರಾದರೀಬೋಧೇ । ಅರಿತುಶ್ರೀಗುರುರಂಗನಿಂದ । ನಿರುತ ಸಾಧಿಸಿದವಗೆ ಕೈವಲ್ಯ । ಓಮಾನಸೇಂದ್ರ । ಕರತಲಾಮಕವಪ್ಪುದು ॥ ಸೀತಾರಾಮಾಂಜನೇಯನಿಗೆ ॥ ೧೨ ॥

ನಿಶ್ಚಯಜ್ಞಾನ

೫೮. ಸೀಸ ॥ ಜ್ಞಾನವಂದರೆಸರ್ವಬ್ರಹ್ಮವೆಂಬುವಅರಿವು । ಸ್ವಾನುಭವಸಂವೇದ್ಯವೆನ್ನಿಸುವದು । ನಾನದ್ವಯಾನಂದನಿತ್ಯನಿಷ್ಕ್ರಿಯೆ ಮಾಯಕಲ್ಪಿತಖಿಳವಿಕಾರಜಗಕೆ ದೂರ । ತನಪ್ರತರ್ಕ್ಯೆಂಬನಿಶ್ಚಲಿತನಿಷ್ಟಂಗೆ । ಯಾವಯೋಗವು ಮಂತ್ರವ್ರತಗಳಿಲ್ಲ । ಏನುಮಾಡುತಯಾವದೇಶಕಾಲದೊಳಿರಲು । ಯಾವಪುಣ್ಯಪಾಪಲೇಶವಿಲ್ಲ.

ಗೀತೆ ॥ ದಾನಕರ್ಮವುಯಜ್ಞವ್ರತಕೋಟಿಇಂದ । ಜನ್ಮಗತವಾದರುಇಲ್ಲಜೀವನ್ಮುಕ್ತಿ । ಜ್ಞಾನವಂದಿರೆವಂದೆಜನ್ಮದಲಿಮುಕ್ತಿಯ । ತಾನೆಘಟಿಸುವದೈಸೆವರಮಾನಸೇಂದ್ರ ॥

ರಾಗ—ನಾದನಾಮಕ್ರಿಯ—ಆದಿತಾಳ

೫೯. ಇಲ್ಲಇಲ್ಲಇಲ್ಲ ಮುಕ್ತಿ ಒಬ್ಬರಿಗೂ । ಸತ್ಯವಾಗಿ । ಅಲ್ಲವಾದ್ದು ಬೆಲ್ಲವಾಗಿ ಬೆರತಬೇವುಆಗೊತನಕ । ಇಲ್ಲಇಲ್ಲ ॥ಪ॥ ಭೋಗಭಾಗ್ಯಆಶೆಮೋಹವಿಷವಾಗೀ॥ ತೋರಲಾಗೀ । ಕಾಗೆಗೂಗೆನಾಯಿಹಂಸವಿಯಾಗಿ । ಮೊಲ್ಲೆತನಕ । ಇಲ್ಲ ॥ ೧ ॥ ಅತ್ತೆಸೊಸೆಯಾಗಿ ಹತ್ತುಐದುಆಗಿ । ಸುಖವಾಗಿ । ಹತ್ತುಮಂದಿಸತ್ತುಹೋಗಿ ಬೆತ್ತಲಾಗಿ । ನಿಲ್ಲೊತನಕ ॥ ಇಲ್ಲ ॥ ೨ ॥ ಕಂಣುಯಿದ್ದು ಕಾಣದಿಹಕುರುಡನಾಗಿ । ಮೂಕನಾಗೀ । ತನ್ನೊಳಿಹ ಗುರುರಂಗನನ್ನು ತಾನೆ । ಕಾಣೊತನಕ ॥ ಅಲ್ಲ ॥ ೩ ॥

ರಾಗ—ಭೋಗಷಟ್ಪದಿ

೬೦ ಬಲುಸುಲಭವುಬ್ರಹ್ಮವಿದ್ಯ । ಗುರು । ಒಲಿದ್ದೇಳದಿರಲದುಬ್ರಹ್ಮಗೆಸಾಧ್ಯ । ಬಲುಸುಲಭವು ಬ್ರಹ್ಮವಿದ್ಯೆ ॥ ಪ ॥ ಶರೀರಾಭಿಮಾನವನಳಿದವಗೇ ಒಮ್ಮೆ ಉರುಕರ್ಮಜ್ಞಾನಾಗ್ನಿಯಲಿ ದಹಿಸಿದಗೆ । ಪರಮಉನ್ಮನೆಯೊಳಾಡುವಗೆ । ನಿತ್ಯ । ವರಶಾಂತಿಸಿಹ್ಮಾಸನಏರಿದವನಿಗೆ ॥ ಬಲು ॥ ೧ ॥ ರಾಗದ್ವೇಷವನಳಿದವಗೆ । ಸರ್ವತ್ಯಾಗಮಾಡುವ ಮರ್ಮವನು ಅರಿತವಗೆ । ಯೋಗವೆಂಟನುಮಿರಿದವಗೆ ನಿಗ । ಮಾಗಮವರಿಯದಾತ್ಮನ ಅರಿತವಗೆ ॥ ಬಲು ॥ ೨ ॥ ಮಾನುನಿಭ್ರಮೆಯಳಿದವಗೆ। ದಿವ್ಯ । ಜ್ಞಾನಪಂಚಾಮೃತಸಾರ ಸವಿದವಗೆ । ನಾನತ್ವವನುಆಳಿದವಗೆ । ನಿತ್ಯ । ಭಾನುವಿನಂದದಿ ಸಾಕ್ಷಿಯಾದವಗೆ ॥ ಬಲು ॥ ೩ ॥ ಚಿತ್ತವು ಬ್ರಹ್ಮದಿ ಬೆರತವಗೇ। ತಾನೆ । ಸತ್ತುಸಾಯದಪರಿ ಜೀವಿಸುವನಿಗೆ । ಮೃತ್ಯುಪಾಶವಗೆಲಿದವಗೆ । ಘನ । ಸತ್ತುಚಿತ್ತಾನಂದನಿತ್ಯಪೂರ್ಣನಿಗೆ ॥ ಬಲ ॥ ೪ ॥ ಯರಡೆಂಬ ಭೇದವನಳಿದವಗೆ । ಭಾನು । ವರಶಶಿಕಳೆಹೊಂದಿ ಪೂರ್ಣನಾದವಗೆ । ಗುರುರಂಗಲಿಂಗನಾದವಗೆ । ಚಿತ್ತ । ವರಚಿತ್ರದಿಪದಪರಿನಿಂತವನಿಗೆ ॥ ಬಲುಸುಲಭವು ಬ್ರಹ್ಮವಿದ್ಯ ॥ ೫ ॥

ರಾಗ—ಪಂತುವರಾಳಿ

೬೧. ವಿರತಿಬೋಧೆಯು ಪರತಿಯು । ಪರಮುಜೀವನ್ಮುಕ್ತರಿಂಗೆ । ನಿರುತಅಂಗವೆನಿಸಿ ರಾಜಿಸುತ್ತಲಿಪ್ಪವು ॥ ಪ ॥ ಧರೆಯುಸರ್ವಭೋಗದಾಸೆ ತೊರೆದು ಮನ

ಹಾರದಂತೇ l ಮರಳೀ ಮನದಿ ನೆನೆಯದಿಹುದೇವಿರತಿಎನಿಪೂದು ll ನಿರುತಶ್ರವಣಾ ಮನನ ಬಲದೀ l ಅರಿತೂ ಆತ್ಮಾನಾತ್ಮವಿವರ l ಶರೀರಸಾಕ್ಷೀತಾನೆಂದರಿಯುತ್ತಿಹುದಿ ಬೋಧಿಯು ll ವಿರತಿ ll ೧ ll ಕರಣಾವಿಷಯಂಗಳನುಜೈಸಿ l ನಿರುತಾಷ್ಟಾಂಗ ಯೋಗದಬಲದಿ l ಧರೆಯ ಕಾರ್ಯಗಳನುಮರೆಯಾಲು ಪರಿತೀಯದು l ಇರಲು ಮೂರಿಂತಹುದು ಮುಕ್ತಿವಿರತೀಯುಪರತಿಎರಡುಇರುತ ll ಪರಮಬೋಧೆಇಲ್ಲದವಗೆ ಪುಣ್ಯಲೋಕವುವಿರತಿ ll ೨ ll ಪರಮಬೋಧೆಯೊಂದೆಇರಲು l ಮರದಕೊಂಬೆಮುರಿಯೆ ಕೆಳಗೆ l ಭರದಿ ಬೀಳ್ವಂತಾಗುತಿಹುದು ಮುಕ್ತಿ ಇದರೊಳು l ಉರುಪ್ರಾರಬ್ಧದಿಂದ ಕೆಲರ l ಕರಣವೃತ್ತಿಯಭೇದವಿರಲು l ಗುರುರಂಗನೋಳ್ ಬೆರವರೆಲ್ಲಾರೊಂದೆಸಮನಾಗೀ ll ವಿರತಿಬೋಧೆಯು ಪರತಿಯು ll ೩ ll

ಜ್ಞಾನಾಗ್ನಿಪ್ರಭಾವ

ರಾಗ—ಭೈರವಿ

೬೨. ಜ್ಞಾನಾಗ್ನಿ ಸರ್ವಕರ್ಮಗಳಸುಟ್ಟು l ತಾನೆ ಪ್ರಜ್ವಲಿಸುತಿಹುದೈ l ವತ್ಸ ಜ್ಞಾನಾಗ್ನಿ ll ಪ ll ಗುರುಮುಖದಿ ಶಿವಯೋಗವುಂ l ಸಾಧಿಸುತೆ ಅರಿವರ್ಗಮೋಹ ಮನವಂಸುಟ್ಟು l ವರತುರ್ಯಪದವಿಯಲ್ಲಿ l ರಾಜಿಸುವ l ಉರುಹಿದಗ್ನಿಯಕುಂಡದಿ l ಉರಿವಂ ಜ್ಞಾನಾಗ್ನಿ ll೧ll ಭರದಿ ಅಡವಿಯೊಳಗ್ನಿಯು l ಮೃಗಪಕ್ಷಿತರು ಗುಲ್ಮಲತೆಯ ಸುಡುವ l ತರದಿ ವರಜಪತಪವ್ರತಗಳಂ l ಸುಟ್ಟುರುಹಿ l ನಿರುತ ಕಾಲಾಗ್ನಿಯಂತೆ ಉರಿವ ಜ್ಞಾನಾಗ್ನಿ ll ೨ ll ಪರಮಗುರುಮಹಲಿಂಗನೇ l ತಾನಾಗಿ l ಪರಬ್ರಹ್ಮ ಜ್ಞಾನವೆಂಬ l ಶಿಖಿಯಿಂ l ನೆರೆ ಸಂಚಿತಾದಿ ಕರ್ಮಗಳ ಸುಟ್ಟು l ನಿರುತ ಹೃತ್ಕುಂಡದಲ್ಲಿ l ಉರಿವ ಜ್ಞಾನಾಗ್ನಿ ll

ರಾಗ—ಭೈರವಿ

೬೩. ಕರ್ಮಕೋಟಲೆಗಳಿಲ್ಲಾ l ತನ್ನರಿತ l ನಿರ್ಮಳಾತ್ಮಜ್ಞಾನಿಗೇ l ವತ್ಸ ಕರ್ಮಕೋಟಲೆಗಳಿಲ್ಲ ll ಪಲ್ಲವಿ ll ನಾನೆಂಬಮಲವು ಮನಕೆ ಅಂಟಿದರೆ l ತಾನೆ ಸಾತ್ವಿಕಬುದ್ಧಿಯಿಂದರಿತು l ಜ್ಞಾನವೈರಾಗ್ಯವೆಂಬಾಗಂಗೆಯಿಂ l ತಾನೇ ತೊಳೆವುದರಿಂದಲೀ ಯತಿಗೆ ll ಕರ್ಮ ll ೧ ll ಮಲವತುಳಿದಡಿಯ ತೊಳೆಯೂಬೇಕೆಂದು l ಮಳಲುವಜ್ಞಾನಿಯಂತೇ ಮೂಢ್ಯ l ಹಲವುಕರ್ಮಂಗಳಿಲ್ಲಮರ್ತ್ಯದರ l ಫಲ ತ್ಯಾಗ ಮೊದಲಿಇಲ್ಲ ll ಯತಿಗೆ ll ೨ ll ತನುಮೋಹವೆಂಬಮಾತೇ l ಮೃತಳಾಗಿ l ಘನ ಬೋಧೆಯೆಂಬ ಪುತ್ರಾ ಜನಿಸಿ l ಜನಿಮೃತಿಯಸೂತಕೆರಡು l ಬರಲಾಗಿ l ಇನಿತು ಕರ್ಮಂಗಳಿಲ್ಲಾ l ಯತಿಗೆ ll ಜ್ಞಾನ ll ೩ ll ವಿನುತಹೃದಂಯಾಕಾಶದಿ l ಚಿತ್ತೆಂಬ ದಿನಮಣಿಯು ಉದಯವಾಗೀ ll ನಿತ್ಯ ಘನಪ್ರಕಾಶದೊಳಿರುತಿರೇ l ನಿತ್ಯವಿಧಿಮನದ ಕಲ್ಪನೆಗಳಿಲ್ಲಾ ಯತಿಗೆ ಜ್ಞಾನ ll ೪ ll ಏಕಮೇವಾತ್ಮನೀನೇ l ಎಂಬ ಶೃತಿ

ವಾಕ್ಯ ನಿಶ್ಚಯಪಡಿಸಿದಾ । ಮುದದಿ ಲೋಕೇಶ್ವರೆನಿಪ ಗುರುವು । ಮಹಲಿಂಗ । ಸಾಕಾರವಾಗಿ ಇರಲು ಯತಿಗೆ ॥ ಜ್ಞಾನ ॥ ೫ ॥

ಸಪ್ತಾವಸ್ಥೆ ವಿವರಣ

ರಾಗ—ಕೇತಾರಗೌಳ—ದ್ವಿಪದೆ

೬೪. ಮಿಥ್ಯಮಾಯೋಪಾಧಿಯೆನಿಸಿರುವ ಜೀವನಿಗೆ । ಮಿಥ್ಯಸಪ್ತಾವಸ್ಥೆಗಳು ತೋರುತಿಹವೈಸೆ ॥ ಪ ॥ ಒಗೆದು ಮೊದಲಜ್ಞಾನವಲ್ಲಿಂದಲಾವರಣ । ಮಿಗಿಲು ವಿಕ್ಷೇಪವು ಪರೋಕ್ಷಜ್ಞಾನಶೋಕನಿವೃತ್ತಿಯು । ಜಗಕಧಿಕ ಅಪರೋಕ್ಷಜ್ಞಾನಶೋಕ ನಿವೃತ್ತಿ । ಮಿಗೆ ನಿರಂಕುಶತೃಪ್ತಿ ಎನಿಸಿಹರವೆಂತೆನಲು ॥ ಮಿಥ್ಯ ॥ ೧ ॥ ವರಪ್ರತ್ಯಗಾತ್ಮನೇ ತಾನೆಂಬ । ಜ್ಞಾನವ । ಮರತನ್ಯ ಜಡದೇಹತಾನೆಂಬುದಜ್ಞಾನ । ಪರಬೊಮ್ಮನೇ ಯಿಲ್ಲ ಇರಲು ಕಾಣಿಪನೆಂಬ । ಎರಡು ವಿಧವಾದ ಮರವೆಯಾವರಣವೆನ್ನಿಸುವುದು ॥ ಮಿಥ್ಯ ॥೨॥ ನಿರುತ ಕರ್ಮಕೆ ಕರ್ತೃ ಭೋಕ್ತೃಜೀವನುಯೆನುತ । ಕೊರಗಿ ಸುಖದುಃಖದಾರಿದ್ರನೆಂಬುವದೆ ನಿಕ್ಷೇಪ । ಧರೆಗೆ ಕಾರಣನೊಬ್ಬನಿಹನೆಂದು ಗುರುವಿಂದ । ಅರಿತು ಅರ್ಚಿಸಲದು ಪರೋಕ್ಷಜ್ಞಾನವು ॥ ಮಿಥ್ಯ ॥ ೩ ॥ ಘನತತ್ವಮಸಿವಾಕ್ಯ ಗುರುಬೋಧೆಯಿಂ ತಾನೆ । ವಿನುತ ಬ್ರಹ್ಮೆಂದರಿಯಲಪರೋಕ್ಷಜ್ಞಾನವು । ಚಿನುಮಯಾತ್ಮಕನಾದ ಯನಗೆ ಕರ್ಮದ ಬಾಧೆ । ಇನಿತಂಟದೆಂದರಿಯಲದು ಶೋಕನಾಶವು ॥ ಮಿಥ್ಯ ॥ ೪ ॥ ಶೋಕವಳಿದಾನಂದಪದ ನಿರಂಕುಶತೃಪ್ತಿ । ಏಕಮೇವಾತ್ಮಗ್ರುರುರಂಗನೆನಿಸುವದು । ಶೋಕಹರವರನಿರಂಕುಶ ತೃಪ್ತಿಯರಡು । ಸಾಕಾರವೆಂದೆನಿಪ ವರ ಪರೋಕ್ಷಜ್ಞಾನಕೆ ॥ ಮಿಥ್ಯಮಾಯೋಪಾಧಿಯೆನಿಸಿ ॥ ೫ ॥

ತತ್ವಮಸಿಮಹಾವಾಕ್ಯ ನಿರೂಪಣೆ

ರಾಗ—ಕೇತಾರಗೌಳ—ದ್ವಿಪದೆ

೬೫. ತತ್ವಮಸಿ ಎಂಬ ವಾಕ್ಯತ್ರಯವ ಗುರುಮುಖದಿ ಚಿತ್ತವಗಲದೆ ಕೇಳಿ ತಿಳಿದವನೆ ಮುಕ್ತಂ ॥ ತತ್ವಮಸಿ ॥ ಪ ॥ ನೆರೆಯವಿದ್ಯೋಪಾದಿ ಪ್ರತಿಬಿಂಬ ಜೀವನುಯೆನಿಸಿ । ಕರಣವಿಂದ್ರಿಯಪ್ರಾಣತನುತ್ರಯಾದಿಗಳಿಂ । ಭರದಿ ಅಭಿಮಾನಿಸುವಂ ಅಲ್ಪಗುಣವಿಡಿದಿಹುದೆ । ನಿರುತತ್ವಂಪದಕೆ ವಾಚ್ಯಾರ್ಥವೆನ್ನಿಸುವುದು ॥ ತತ್ವ ॥ ೧ ॥ ತನುತ್ರಯವಿಲಕ್ಷಣವು ನೆರೆ । ಅವಸ್ಥಾತ್ರಯಕೆ । ದಿನವು ಸಾಕ್ಷಿಯು ಪಂಚಕೋಶವ್ಯತಿರಿಕ್ತೆನಿಪ । ಘನಸಚ್ಚಿದಾನಂದಕೂಟಸ್ಥಚೈತನ್ಯವೆ । ವಿನುತತ್ವಂಪದಕೆ ಲಕ್ಷ್ಯಾರ್ಥವೆಂದೆನ್ನಿಸುವುದು ॥ ತತ್ವ ॥ ೨ ॥ ಪರಮಸತ್ವಗುಣಾಖ್ಯಮಾಯೆ ಪ್ರತಿಬಿಂಬಿತದಿ । ವರ ಈಶನೆಂದಿಸಿ ಸರ್ವಜ್ಞ ಮೊದಲಾದ । ಪರಮಕಲ್ಯಾಣಗುಣಗಣಗಳಿಂದೊಪ್ಪುವದೆ । ನಿರುತತತ್ವದಕೆ ವಾಚ್ಯಾರ್ಥವೆನ್ನಿಸುವದು ॥ ತತ್ವ ॥ ೩ ॥ ನಿರುಪಮದ್ವಯ ನಿತ್ಯಸತ್ಯಸುವಿನ್ಮಾತ್ರ । ನಿರಘ ನಿರ್ಗುಣ ನಿತ್ಯಮುಕ್ತ ನಿರ್ಮಾಯ । ಪರಿಪೂರ್ಣ ವರ ತತ್ವವೆನಿಪ ಪರಬೊಮ್ಮವೆ । ನಿರುತತತ್ಪದಕೆ ಲಕ್ಷ್ಯಾರ್ಥವೆನ್ನಿಸುವದು ॥ ತತ್ವ ॥ ೪ ॥

ಅಳಿದು ಈ ಜೀವೇಶರು ಭಯವಾಚ್ಯಾರ್ಥಗಳ । ಉಳಿದ ನಿಜಚೈತನ್ಯವಸ್ತು ಅಸಿಪದ ವೆಂದು । ತಿಳಿಯಲಿದುವೆ ಅಖಂಡ ರಸಚಿತ್ತುನೀನೆಂದು । ಒಲಿದು ಬೋಧಿಪನು ಗುರುಮಹಾಲಿಂಗರಂಗಂ ॥ ತತ್ವ ॥ ೫ ॥

ರಾಗ—ಶಂಕರಾಭರಣ––ರೂಪಕತಾಳ

೬೬. ಆಗದಾಗದಾಗದು । ಎಲ್ಲರಿಂದ । ಯೋಗವೂಯಗಲುವೆನೆಂಬುದು ॥ಪ॥ ನೀಗಿತಾರಕಾದಿಯೋಗ । ಯೋಗರಾಜನೆಂಬಜ್ಞಾನ । ಯೋಗಮುದ್ರೆ ಬಲಿದು ತೂರ್ಯ । ನಾಗಿ ತನ್ನ ವೈಯ್ಯ ಮರೆವುದ] ಏ ವಿ ತತ್ವಮಸಿಯವಾಕ್ಯನ] ವಾಚ್ಯ ಲಕ್ಷ್ಯ] ತಾ ವಿವೇಕದಿಂದಲರಿಯುತ] ಜೀವಗಣಗಳುಡುಗಿ ಮನದಿ] ಸಾವಧಾನ ದಿಂದ ಬ್ರಹ್ಮ] ಭಾವನೆಲಸಿಮನದಿ ಭಿನ್ನ] ಭಾವಬಯಲು ಆಗುವನ್ನ ॥ಆಗದಾಗದು ॥ ೧ ॥ ತತ್ವದೊಳಗೆ ತತ್ವವೆನಿಸುತ । ಬೆಳಗುವಂಥ ಅಸ್ತಿಭಾತಿಪ್ರಿಯವ ನರಿಯುತ ಮಿಥ್ಯನಾಮರೂಪವು ಅಡಗಿ । ಸತ್ಯ ಸಹಜಶಾಂತನಾಗಿ । ಚಿತ್ತಬ್ರಹ್ಮದಲ್ಲಿಮುಣುಗಿ। ನಿತ್ಯತೃಪ್ತನಾಗುವನ್ನ ॥೨॥ ಪರಮ ಶ್ರೀಗುರುರಂಗಲಿಂಗನ । ಕರುಣದಿಂದ । ದೊರೆತ ವಸ್ತು ನೆನೆಯುತನುದಿನ । ಮರೆದು ಜಗದ ಭ್ರಾಂತಿಯನ್ನು । ಬೆರತು ಜ್ಞಾನಶಕ್ತಿ ಯನ್ನು ಅರಿದು ಭವದ ಬಾಧೆಯನ್ನು । ನಿರುತ ಪೂರ್ಣನಾಗುವನ್ನ ॥ ಆಗದಾಗದು॥

ರಾಗ—ಆನಂದಭೈರವಿ

೬೭. ಜೀವ ಈಶರಿಗೈಕ್ಯದನುಭವದ ವಾಕ್ಯ । ತಾವಿವೇಕದೊಳರಿತುಕೊಂಡಾತ ಮುಕ್ತಾ ॥ ಪ ॥ ನಿರುತವ್ಯಷ್ಟಿ ಸಮಷ್ಟ್ಯುಪಾಧಿಯೆನಿಸಿರುವ । ವರಜೀವ ಈಶ್ವರರ ಜನನಿಯನಿಸಿರುವ । ದುರುಳಮಯಾವಿದ್ಯತ್ಯಜಿಸಲಾತುಮನು । ನಿರುಪಮದ್ವಯ ಪೂರ್ಣನಾಗಿ ರಾಜಿಪುದೂ ॥ ಜೀವ ॥ ೧ ॥ ಸ್ವರ್ಣಮೃದ್ಘಟೆಯುಗದಿತುಂಬಿರುವ ಬಯಲು । ಸ್ವರ್ಣಮೃದ್ಘಟಗಳಿಗೇಅಂಟದಿಹವೋಲು] ಪೂರ್ಣಬ್ರಹ್ಮನು ಅಂಡ ಬ್ರಹ್ಮಾಂಡದೊಳಗೆ । ನಿರ್ಣಯದಿ ತುಂಬಿಹನು ನಿಜಬೋಧೆಯೊಳಗೆ ॥ ಜೀವ ॥೨॥ ಧವಳಗಂಗೆಯು ಕೊಳಕುನೀರು ಯರಡರೊಳು । ರವಿಬೆಳಗುವಂತಾತ್ಮ ಸರ್ವದೇಹ ದೊಳು । ಅವಿರಳಾನಂದದಲಿ ತುಂಬಿತುಳುಕುವನು । ತವೆ ಜ್ಞಾನನೇತ್ರಕ್ಕೆ ಗೋಚರಿ ನಿಸುವನು ॥ ಜೀವ ॥ ವಿನುತ ಕಟಕವುಮಕುಟವೆನಿಸಿಬಹುಃ ಧದಿ । ಜನಿಪ ನಾಮಗಳ ಳಿಯೆ ಕನಕವುಳಿದಂತೆ । ಗುಣಕಲ್ಪಿತದೆ ಜೀವಈಶ್ವರನಾಮಾ ಅಣಗಲೆಂದಿಗು ತಾನೆ ಯೆನಿಪಾತ್ಮರಾಮಾ ॥ ಜೀವ ॥ ೪ ॥ ಮನೆಯಬೆಳಗುವ ದೀಪ ಕತ್ತಲಳಿಯುತ । ಬಿನುಗುವಿಷಯಗಳೊಂದು ತಲೆದೋರದಂತೆ । ತನುಮೋಹವಭಿಮಾನದಳಿದುನಿರ್ಮ ಲದಿ । ಮನವಿರಲು ಗುರುರಂಗನೆನಿಸುವನು ಜಗದಿ ॥ ಜೀವ ॥ ೫ ॥

ಜೀವಬ್ರಹ್ಮೈಕ್ಯ ನಿರೂಪಣೆ

ರಾಗ—ಭೋಗಷಟ್ಪದಿ

೬೮. ಬ್ರಹ್ಮತಾನೆಂದರಿಯಲಾಗೀ । ಹೆಮ್ಮೆಜೀವತ್ವಪಡಗೂವದು । ಒಮ್ಮೆ ಸೂರ್ಯನುದಿಸೆಕತ್ತಾಲಡಗುವಂದದಿ ॥ ಪ ॥ ಎಂದೀಗಿಲ್ಲದಪಗ್ಗದಿ ಸರ್ಪ । ಎಂದೀಗಿಲ್ಲದ ವಂಧ್ಯಾಪುತ್ರ । ಎಂದೀಗಿಲ್ಲದ ಮೊದಲಕೋಡು ತೋರಿದಂವದಿ । ಎಂದೀಗಿಲ್ಲದ ಮಾಯೆಯಿಂದ । ಎಂದೀಗಿಲ್ಲದ ಜೀವಭ್ರಾಂತಿ । ಬಂದುಮುಸಕೀತಾತ್ಮನಲ್ಲಿ ಬಹಳ ಚೋದ್ಯದಿ ॥ ಬ್ರಹ್ಮ ॥ ೧ ॥ ಭರದಿ ಶಕ್ತಿಯಲ್ಲಿ ಕಾಣು । ತ್ತಿರುವ ಬೆಳ್ಳಿಯಲ್ಲಿ ಗೆಜ್ಜೆ । ಸರಪಣಿಗಳು ಆಗುವವು ಸತ್ಯವಾದಲ್ಲಿ । ನಿರುಪಮದ್ವಯದೊಮ್ಮದಲ್ಲಿ । ಸ್ಫುರಿಪ ಮಾಯಾಕಲ್ಪಿತೆನಿಸಿ । ಮೆರೆವ ಜೀವತನವು ಸತ್ಯವೆನ್ನಬಹುದ್ಯೆಸೆ ॥ ಬ್ರಹ್ಮ ॥ ೨ ॥ ಜಗದಿಮೋಟಮರದೀಚೋರ ಗಗನದೊಳಗೆ ಅರವಿಂದಾವು । ಒಗೆದು ತೋರಿಯಡಗುವಂತೆ ಮಾಯೆಯಿಂದಲಿ । ಅಗರಾಣದ ಜೀವಗುಣವು । ಒಗೆದು ತೋರಿಯಡಗುತ್ತಿರಲು । ನಿಗಮಬೇಧ್ಯನಿಂಗೆ ಅದರಾಸಂಗವಿಲ್ಲಾವ್ಯೆ ॥ ಬ್ರಹ್ಮ ॥ ೩ ॥ ತಾನೆ ತನ್ನ ಮರತು ಎಣಿಸಿ । ತಾನಿಲ್ಲೆಂದು ಬಳಲುತ್ತಿರಲು ನೀನೆ ದಶಯನೆಂದು ಓರ್ವನು ಮರಲರಿತಂಕೆ । ನೀನು ಕಲ್ಪಿತಜೀವನಲ್ಲ । ನೀನೆ ಪೂರ್ಣಬ್ರಹ್ಮನೆನುತ । ಜ್ಞಾನಿವಾಕ್ಯದಿಂದಲರಿಯೆ ಭ್ರಾಂತಿಲ್ಯೆಸುಗು ॥ ಬ್ರಹ್ಮ ॥ ೪ ॥ ಉರಿವಜ್ಯೋತಿಯಿಂದ ಜ್ಯೋತಿ । ಮೆರೆವ ಸೂರ್ಯನಿಂದ ಸೂರ್ಯ। ಅರಿಯುವಂತೆ ತನ್ನ ತಾನೆ ಅರಿವಜ್ಞಾನಿಯು॥ ನಿರುಪಾಮದ್ವಯಬ್ರಹ್ಮನಾಗಿ । ನಿರುತಾಖಂಡೈಕರಸಮಯನಾಗಿ । ಪರಮ ಶ್ರೀಗುರು ರಂಗನೆನಿಸಿಚರಿಸುತಿಪ್ಪನು ॥ ಬ್ರಹ್ಮ ॥ ೫ ॥

ಪಂಚಕೋಶ ವಿಲಕ್ಷಣತ್ವಂ

ರಾಗ—ಭೋಗಷಟ್ಪದಿ

೬೯. ತನುವೂ ಇಂದ್ರಿಯಂಗಳೊಂದು । ಅನುಪಮಾತ್ಮನಲ್ಲೆಂಬುದನು । ವಿನುತ ಸೂಕ್ಷ್ಮಲಕ್ಷದಿಂದ ಅರಿಯಬೇಕ್ಯೆಸೆ ॥ ಪ ॥ ಹಿರಿಯ ಅನ್ನಮಯದಿಕೋಶ ಕಿರಿಯ ಪ್ರಾಣಮಯದಕೋಶ । ಚರಿಪಮನವಿಜ್ಞಾನಮಯವು ಎಂಬ ಕೋಶವು । ಉರುತರಾನಂದವು ಎನಿಸಿ । ಸ್ಫುರಿಸುವ್ಯೆದುಕೋಶಂಗಳಿಗೆ । ನಿರುತವ್ಯತಿರಿಕ್ತನಿಸಿ ಪೊಳೆಯುತ್ತಿರುವನಾತ್ಮನು ॥ ತನು ॥ ೧ ॥ ಘಟವನೋಡ್ವ ಪುರುಷತಾನೆ । ಘಟವು ಅಲ್ಲದೆ ಬೇರಿರುವಂತೆ । ಕುಟಿಲಮಾಯಕೃತಕನಾಮರೂಪು ಉಳ್ಳಂಥ । ಘಟವ ನೋಡುತಿರುವ ಆತ್ಮ । ಘಟವೆಂದಿಗು ಅಲ್ಲವೆನಿಸಿ । ಘಟಕೆ ಸಾಕ್ಷಿಯಾಗಿ ನಿತ್ಯ ಬೆಳಗುತಿಪ್ಪನು ॥ ತನು ॥ ೨ ॥ ಎನ್ನಮನೆಯು ಪಶುವುಪಕ್ಷಿ । ಚಿನ್ನಾಬೆಳ್ಳಿಯು ಯನ್ನದೆಂಬ । ಮಾನ್ನವತದ್ವಸ್ತು ಒಂದೂ ಅಲ್ಲದಿರುವಂತೆ । ಎನ್ನತನುವೀದೆಂಬನುವಾತ । ಕುನ್ನಿದೇಹತಾನೆಲ್ಲೆನುತ । ಮುನ್ನವೇಹೇಂದ್ರಿಯಕೆ ಸಾಕ್ಷಿಯಾಗಿ ಇರುವನು ॥ ತನು ॥ ೩ ॥ ನೆರೆದಶೇಂದ್ರಿಯಂಗಳದ್ವಾರ । ಅರಿತು ಶಬ್ದ ಸ್ಪರ್ಶ ರೂಪು । ಭರದಿರಸವು ಗಂಧ ಮತ್ತೆ

ನುಡಿಯು ದಾನವು । ಚರಿಪುದಳಿಪುದೊಮ್ಮೆ ಮಲಪ । ಪರ ಆಸಂಪಾದೀಗಳನ್ನು ಅರಿವ ನಿತ್ಯಮನದ ಮುಖದಿ ಆತ್ಮಾರಾಮನು ॥ ತನು ॥ ೪ ॥ ರವಿಪ್ರಕಾಂತಿಯಿಂದ ಜಗದಿ ವಿವಿಧಕರ್ಮ ನಡೆಸುತ್ತಿರಲು । ರವಿಯು ಸರ್ವಸಾಕ್ಷಿಯಾಗಿ ಬೆಳಗುತ್ತಿರುವಂತೆ। ಜನದಿ ಇಂದ್ರಿಯಕರಣಂಗಳು । ವಿವಿಧಕಾರ್ಯಗೈಯ್ಯುತ್ತಿರಲು । ಭುವನಕೊಡೆಯ ಗುರುರಂಗನು ಸಾಕ್ಷಿಯನಿಸಿಹನು ॥ ತನು ॥ ೫ ॥

ದೃಗ್ದೃಶ್ಯವಿವೇಕವು

ರಾಗ—ಭೋಗಷಟ್ಪದಿ

೭೦. ತೋರಿಯಡಗುವಂಥ ಜಳ್ಳು । ತೂರಿ ಘಟ್ಟಿಯಾಗಿ ಉಳಿದ । ಸಾರ ಬ್ರಹ್ಮವೆ ತಾನೆಂದರಿಯುವಾತಜ್ಞಾನಿಯು ॥ ಪ ॥ ಮೆರೆವದಶೇಂದ್ರಿಯಂಗಳಂ ಸ್ಫುರಿಪ ವಿಷಯಂಗಳು ದೃಶ್ಯ । ಪರಿಪೂರ್ಣಾನಂದಾತ್ಮದೃಕ್ಕು ಎನಿಸಿ । ಮೆರೆವನು ಶರೀರ ತ್ರಯಾತ್ರಿಗುಣಾದಿಗಳು । ಅರಿಯೆ ಜೀವತ್ರಯವು ದೃಶ್ಯ । ನಿರುತಾಖಂಡಬ್ರಹ್ಮದೃಕ್ಕೆ ನ್ನಿಸೀ ಮೆರೆವನು ॥ ತೋರಿ ॥ ೧ ॥ ಶರೀರದೃಶ್ಯತೆಯನೇಂದ್ರಿಯಕೆಸ್ಫುರಿಪನೇತ್ರವು ದೃಶ್ಯಮನಕೆ । ಚರಿಪಮನವು ದೃಶ್ಯ ನಿಶ್ಚಲವಾದ ಬುದ್ಧಿಗೆ । ಅರಿವಾಬುದ್ಧಿಯು ದೃಶ್ಯವಾತ್ಮ । ನಿರುತದೃಕ್ಕು ಎನಿಸಿ ಪೊಳೆವ । ನಿರುಪಮದ್ವಯ ಬ್ರಹ್ಮನಲ್ಲದೆ ಬೇರೆ ದೃಕ್ಕಿಲ್ಲ ॥ ತೋರಿ ॥ ೨ ॥ ಸ್ಫುರಿಪಕರಣಗಳಂತಃದೃಶ್ಯ । ವರಭೂತಂಗಳು । ಬಾಹ್ಯಾ ದೃಶ್ಯ । ಎರಡು ವಿಧದಿ ದೃಶ್ಯವೆನಿಸುವೀಪ್ರಪಂಚವ । ನಿರುತ ಸಾಕ್ಷಿಯಾಗಿ ನೋಡು । ತ್ತಿರುವ ಸಂವಿನ್ಮಾತ್ರನಾದ । ಪರಮಶ್ರೀಗುರುರಂಗ ಸರ್ವಕ್ಕೆ ಧೃಕ್ಕಾಗಿರುವನು ॥ ತೋರಿ ॥ ॥ ೩ ॥

ಪರಮಹಂಸಲಕ್ಷಣ

ರಾಗ—ಸುವ್ವಾಲೆ—ರೂಪಕತಾಳ

೭೧. ಹಂಸನಾಗಲೋ । ಪರಮಹಂಸನಾಗಲೋ ॥ ಪ ॥ ಹಂಸೊಹಂಸೊ ಹಂಸೊ ಎನುತ । ಧ್ವಂಸಗೈದುದ್ವೈಭಾವ । ಹಂಸನಾಗಲೋ ಪರಮಹಂಸನಾಗಲೋ ॥ ಅ ॥ ಮಾಯೆ ಮೂಲವನ್ನು ತಿಳಿದು । ಮಾಯೆ ಗುಣಗಳನ್ನು ಅಳಿದು ಮಾಯೆ ಕಳೆಯೆ ಶಳದುಮುದದಿ । ಮಾಯೆಕಳೆಗತೀತನಾಗಿ ॥ ಹಂಸ ॥ ೧ ॥ ನೀರನುಳಿದು ರಾಜಹಂಸ । ಕ್ಷೀರಸಪಿಯುವಂತೆ ಜಗದಿ । ಮೂರು ದೇಹವುಳಿದು ಪೊಳೆವ । ಸಾರ ತತ್ವಸಾರಸವಿವ ॥ ಹಂಸ ॥ ೨ ॥ ನಿರುತಬ್ರಹ್ಮಚರ್ಯಶಾಂತಿ । ಕರವೆನಿಪ್ಪ ಬ್ರಹ್ಮ ಪುರದೊಳಿರುವ । ಅಮೃತಕೊಳದಿ ಮುಳುಗಿ । ಪರಮ ಅಮೃತರಸವ ಸವಿವ ॥ ಹಂಸ ॥ ೩ ॥ ನಿರುತಪಾಪಪುಣ್ಯವೆಂಬ । ಮೆರೆವ ಕಮಲವನವ ಮೆಲುತ । ಸ್ಫುರಿಪ ಜ್ಞಾನ ವೆಂಬ ಬನದಿ । ಪರಮಸುಖದಿ ಚರಿಸುವಂಥ ॥ ಹಂಸ ॥ ೪ ॥ ಪೂರ್ಣಬ್ರಹ್ಮದಲ್ಲಿ ಆಡಿ । ಪೂರ್ಣಬೋಧನಾಗಿ । ಉಂಡ ಅನ್ನ ಅಮೃತ ಮಾಡಿ ಸವಿದ।ಚನ್ನ ಶ್ರೀಗುರು ರಂಗನೆಂಬ ॥ ಹಂಸನಾಗಲೊ ॥ ೫ ॥

ರಾಗ—ಶ್ಯಾಮಕಲ್ಯಾಣಿ—ದ್ವಿಜಾವಂತಿ

೭೨. ಪರಮಬ್ರಹ್ಮಾನಂದಭರಿತದಿ । ಧರೆಯೊಳಿಹ ಯೋಗೀಶ್ವರಂ । ಮೆರವ ಸೂರ್ಯನಪರಿ ವಿರಾಜಿಸಿ । ನಿರುತ ಸಾಕ್ಷಿಕನೆನಿಸುವಂ ॥ ಪ ॥ ಪರಮಮಂಗಳ ಶಾಂತಿ ಸ್ನಾನವು । ವಿರತಿಧರ್ಮವಧರಿಸುವಂ । ವರಪತಿವ್ರತೆ ಭಿಕ್ಷಕೊಳ್ಳುತ । ಕರುಣಕರಪಾತ್ರೆ ನಿಸುವಂ ॥ ಪರ ॥ ೧ ॥ ನಿರುತತತ್ವವು ಎಂಬದೇಶಧಿ । ಚರಿಸುತಾತನಪೂರ್ವದ । ವರಕುಲರಳಿಪ್ಪತ್ತುವೊಂದನು । ಭರದಿಪಾವನಗೈಯ್ಯುವಂ ॥ ಪರ ॥ ೨ ॥ ಭಾವಿಸಲಿ ಕಿಂತಿರುವ ಯೋಗಿಯು । ಯಾವರೋಗವು ದುಃಖದಿಂ । ಯಾವ ವಿಧದಿಂಬಿಡಲು ಘಟರನು । ಓಷತಾಬಯಲಾಗುವಂ ॥ ಪ ॥ ೩ ॥ ಕ್ಷೀರ ಕ್ಷೀರವ ಘೃತವು ಘೃತವಂ । ಸೇರುವಂದದಿ ಯತಿವರಂ ।ಪ್ರಾರಬಂಧ ಉಣ್ಣುತಲಿ । ಅಂತ್ಯಕೆ ಸೇರುವನು ಕೈವಲ್ಯ ವಂ ॥ ಪರ ॥ ಆತಗಿಲ್ಲವು ಶ್ರಾದ್ಧಕರ್ಮ । ಗಳಾತಗಿಲ್ಲವು ದಹನವು । ಆತ ಗುರು ಮಹಲಿಂಗನೆನ್ನಿಸಿ । ಖ್ಯಾತಿಪೂಜೆಯಗೊಂಬುವಂ ॥ ಪರಮ ॥ ೪ ॥

ಜೀವನ್ಮುಕ್ತಿಲಕ್ಷಣ

ಶ್ರುತಿ ॥ ದ್ವಿವಿಧಶ್ಚಿತ್ತನಾಶೋಸ್ತಿ । ಸರೂಪೋ ರೂಪ ಏವಚ ॥ ಜೀವನ್ಮುಕ್ತೌ ಸರೂಪಸ್ಯಾತ್ । ಅರೂಪೋದೇಹಮುಕ್ತಿದಃ ॥

೭೩. ವಚನ ॥ ಸರೂಪಮನೋನಾಶ ಅರೂಪಮನೋನಾಶವೆಂದು ಎರಡು ವಿಭವು ಅಂದರೆ ಜೀವನ್ಮುಕ್ತಿಯಲ್ಲಿ ಸರೂಪಮನೋನಾಶವು ವಿದೇಹಮುಕ್ತಿಯಲ್ಲಿ ಅರೂಪಮನೋನಾಶವು ಎನಿಸುವದು ಇದರೊಳ್ (ಸರೂಪಮನೋನಾಶವೆಂತೆಂದೊಡೆ.)

೭೪. ಸೀಸಪದ್ಯ ॥ ಪರಬ್ರಹ್ಮನಿಷ್ಟನಾಗಿರುವ ಜ್ಞಾನಿಯಮನಂ, ಜ್ಞಾನಾಗ್ನಿಯಿಂ ಸುಟ್ಟುಭಸ್ಮವಾಗಿ । ದುರಿತ ದುರ್ಗುಣಗರ್ವಹಂಕಾರ ಮೊದಲಾದ ಕೆಟ್ಟ ವಾಸನೆಯುನಿಟ್ಟೊರಸಿಹೋಗಿ ।ಪರಮಶಾಂತಿಯು ಭೂತದಯ ಸತ್ಯ ಮೊದಲಾದ ಕಲ್ಯಾಣ ಗುಣದಿ ಶೋಭಿಸುವದಾಗಿ । ವರ ಅಗ್ನಿಯಿಂ ಸುಟ್ಟವಸ್ತ್ರ ಕೈರೂಪಿರಲು ಧರಿಸಿಕೊಳ್ಳಲು ಬಾರದಿರುವಂದದಿ ॥

ಗೀತೆ ॥ ಇರುತೆಲ್ಲರೊಳು ನಿತ್ಯ ವ್ಯವಹರಿಸುವಾತ । ಸರ್ವ ಸಂಕಲ್ಪಂಗಳಳಿದುಯಿರುವದರಿಂ । ಧರೆಯೊಳಿದು ಸರೂಪ ಮನೋನಾಶವೆನಿಸಿ । ಯೋಗಿಜೀವನ್ಮುಕ್ತನೆನಿಸಿ ರಾಜಿಸುವಂ ॥

೭೫. ಸೀಸಪದ್ಯ । ನಾನುಕುಂಟನು ಕುರುಡಾಪಾಪಿ ಕ್ಷಯರೋಗಿಯು । ನಾನು ಬ್ರಾಹ್ಮಣ ಕ್ಷತ್ರಿ ವೈಶ್ಯ ಶೂದ್ರ । ನಾನು ಪಂಡಿತಶಾಸ್ತ್ರಿಯೋಗಿಶ್ವರೆಂಬುವಹೀನ ದೇಹದ ನಾಮರೂಪವಳಿದು । ನಾನು ಇಪ್ಪತ್ನಾಲ್ಕು ತತ್ವಗಳಿಗಧಿನಾಥ ನಾನು ಪ್ರಕೃತಿಗೆಪರಮಪ್ರತ್ಯಗಾತ್ಮ । ನಾನೆ ಪರಮೇಶ್ವರಂ ನಾನೆ ಪುರುಷೋತ್ತಮಂನಾನದ್ವಯಾನಂದನಪ್ರತರ್ಕ್ಯ ॥

ಗೀತೆ ॥ ತಾನೈದುಕೋಶಕ್ಕೆ ವೈಲಕ್ಷಣನೆನಿಸಿ, ತಾನವಸ್ಥಾತ್ರಯಕೆ ನಿಜಸಾಕ್ಷಿಯೆನಿಸಿ । ಮಾನಾಭಿಮಾನೆಂಬ ಕಲ್ಪನೆಯನುಳಿದ ॥ ಜ್ಞಾನಿಜೀವನ್ಮುಕ್ತನೆನಿಸಿಕೊಂಬುವನು ॥

ಶ್ರುತಿ ॥ ಯತ್ರಯತ್ರ ಮನೋಯಾತಿ । ತತ್ರ ತತ್ರ ಪರಂಪದಂ ॥ ತತ್ರತತ್ರ ಪರಂಬ್ರಹ್ಮ ॥ ಸರ್ವತ್ರಸಮವಸ್ಥಿತಂ ॥

೭೬. ಕಂದ ॥ ಎಲ್ಲೆಲ್ಲಿಯು ತುಂಬಿರುತಿಹ । ಸಲ್ಲೀಲೆಯು ಬ್ರಹ್ಮದಲ್ಲಿ ಮುಳುಗಿದಯತಿಮನ । ಎಲ್ಲೆಲ್ಲಿಗೆ ಚರಿಸುತ್ತಿರಲಲ್ಲಿಯೆ ಪರಮಪದವು ಯೆನಿಸಿರುತಿರ್ಕುಂ ॥

೭೭. ಕಂದ ॥ ನೋಡಿದುದೆಲ್ಲವು ಲಕ್ಷ್ಯವು ॥ ಮಾಡಿದುದೆಲ್ಲಾತ್ಮಪೂಜೆ ನುಡಿಗಳೆ ಮಂತ್ರವು ॥ ಕೂಡಿದುದೆಲ್ಲವು ಯೋಗವು ॥ ರೂಢಿಯೊಳಮನಸ್ಕ ಯೋಗಿಯ ನಡೆಯಿದುಸತ್ಯಂ ॥

ರಾಗ—ಕೇತಾರಗೌಳ—ದ್ವಿಪದೆ

೭೮. ಶಿವಜೀವರೈಕ್ಯದನುಭವರಿತ ಸಂಮ್ಯಜ್ಞಾನಿ ॥ ವಿವಿಧ ಮಾಯಾಭ್ರಮಣೆಗೊಳಗಾಗದಿಹನು ॥ಪ ॥ ಸವಿಪಾಲುಥದಿತಕ್ರನವನೀತವಾಗಿರಲು ॥ ನವನೀತವಾತಕ್ರ ಬೆರೆಯದುದಂದಲಿ ॥ ಅವಿರಳಾತ್ಮ ಸಮಾಧಿಯಲ್ಲಿಪ್ಪಶಿವಯೋಗಿ । ವಿವಿಧಸಂಸ್ಮೃತಿ ಬೆರೆಯದಂತಿಹನು ॥ ಶಿವ ॥ ೧ ॥ ವರ ಇಂದ್ರಜಾಲದವ ಪರಿ ಪರಿ ಚಿತ್ರಗಳ । ವಿರಚಿಸುತ ಪುಸಿಯೆಂದು ಅರಿತಿರುವತೆರದಿ । ಹಿರಿಯಮಾಯಾಕೃತಜಗವಿಂದ್ರಜಾಲದ ಪರಿಯ । ನಿರುತಪುಸಿಯೆಂದರಿತು ತಾ ಸಾಕ್ಷಿಯಾಗಿಹನು ॥ ಶಿವ ॥ ೨ ॥ ಧರೆಯೊಳಿಂತಿಹಮುಕ್ತ ಮರಳಿ ಪುಟ್ಟುವನೆಂದು । ಅರಸಿ ತಪವಂಗೈಯ್ಯೆ ಜನಿಸೆಜ್ಞಾನಾಗ್ನಿಯಿಂ । ದುರಿತ ಚಣಕದಪರಿಯುಸುಟ್ಟಿರುವತನುಧರಿಸಿ । ಗುರುರಂಗನಾಗಿರುತ ಪ್ರಾರಬುಧಕಳೆಯುವನು ॥ ಶಿವ ॥ ೩ ॥

ರಾಗ—ಪಂತುವರಾಳಿ—ಅಟತಾಳ

೭೯. ಸಂಸಾರದೊಳು ಮುಕ್ತಿ ಸಿದ್ಧ ॥ ನಿತ್ಯ ॥ ಸಂಸಾರಯೋಗಿಯು ಲೋಕಪ್ರಸಿದ್ಧ ॥ ಸಂಸಾರದೊಳು ॥ ಪ ॥ ಜಲದೊಳಗುದಿಸಿ ರಾಜಿಸುತಿಪ್ಪ ಕಮಲವು ॥ ಜಲವಿನಿತಾದರುಅಂಟದಿರುವಂತೆ ॥ ಮಲಿನಸಂಸಾರದಿ ಮುಳುಗಿತಾನಿದ್ದರು ॥ ಸಲೆ ಮಾಯವಶವಾಗದಾತ್ಮನುಭವಿಗೆ ॥ ಸಂಸಾರ ॥ ೧ ॥ ತೊರದು ಮೋಹವುಯಂಬ ಮನೆಕ್ಷೇತ್ರವನ್ನು ॥ ಹರಿದು ಮಮತೆ ಎಂಬ ಸತಿ ಸಂಗವನ್ನು ॥ ಮರೆದು ಹಂಕಾರವೆಂಬುವ ಮಗನನ್ನು ವರಶಾಂತಿ ಎಂಬುವ ದೇಶನೊಳಿಪ್ಪಗೆ ॥ ಸಂಸಾರ ॥ ೨ ॥ ಇರಿಸಿ ತನ್ನಯ ಚಿತ್ತಪರಪುರುಷನೊಳು ॥ ತ್ವರಿತದಿ ತನಗೃಹಕೃತ್ಯನಡಿಸುವ ॥ ಉರುವ್ಯಭಿಚಾರಿಣಿರಿಯಲ್ಲಿಚಿತ್ತವ ॥ ನಿರುತಾತ್ಮನೊಳಗಿರಿಸಿರುವ ಸತ್ಪುರುಷಂಗೆ ॥ ಸಂಸಾರ ॥ ಹವಿಯಂತೆ ಭಕ್ಷಿಪ ವಿಷಯಂಗಳೆಲ್ಲವ ॥ ರವಿಯಂತೆ ಸರ್ವಕ್ಕೆ ಸಾಕ್ಷಿಯಾಗಿರುವ ॥ ತವೆಪುಣ್ಯಪಾಪಂಗಳಂಟಾದೆಯಿರುವ ॥ ಭವಿಯೊಳಗಿದ್ದು ಇಲ್ಲದಮಹಾತ್ಮನಿಗೆ ॥

ಸಂಸಾರ ॥ ೪ ॥ ಕುಲಕೊಬ್ಬಭಕ್ತ ಕೋಟಿಗೆ ಒಬ್ಬ ಶರಣನು । ಇಳೆಯೊಳು ಪಾವನ ನಾಗುತಿಹನು । ಸಲೆಗುರುಮಹಲಿಂಗನ ಕಾರುಣ್ಯದಿಂದ । ಮಲಹರನಡಿದಾವರೆಯ ಬಿಡದಿಹನು ॥ ಸಂಸಾರ ॥೫॥

ವಿದೇಹಮುಕ್ತಿ ಲಕ್ಷಣವು

ಶ್ರುತಿಃ ॥ ಅರೂಪಸ್ತುಮನೋನಾಶೊ । ವೈದೇಹಿಮುಕ್ತಿಗೋಭವೇತ್ ॥

೮೦. ವಚನ ॥ ಪೆಸರಡಗಿದ ಅರೂಪಮನೋನಾಶವಿವರ.

೮೧. ಸೀಸ ॥ ತೋರುತ್ತಲಿಹ ದಗ್ಧವಸ್ತ್ರ ಹಸ್ತದಿ ತಿಕ್ಕಿ, ಉರುಹಲಾರೂಪ ಡಗಿ ಪೋಗುವಂತೆ । ಆರಬ್ಧವಂದಳಿಯೆ ಮನಪ್ರಾಣ ಮೊದಲಾದ ತತ್ವಗಳ ನಾಮ ರೂಪಡಗುತಿಹುದು । ಚಾರುಮೃದ್ಘಟಹೊಡಿಯಲುದರೊಳಿದ್ದಂಬರವು, ಮಹದಂಬರದಿ ಶೇರಿಕೊಂಡಂತೆ । ಭೂರಿಬ್ರಹ್ಮದಿಐಕ್ಯವಾಗುವನು ತ್ರೈಲೋಕ್ಯನಪೂಜ್ಯನೆನಿಸುವ ರಾಜಯೋಗಿವರ್ಯ ॥

ಗೀತೆ ॥ ಧಾರುಣಿಯೊಳಿದು ವಿದೇಹಮುಕ್ತಿಯೆಂದು । ಪೆಸರಡಗಿದರೂಪು ಮನೋನಾಶವೆಂದು । ಸೂರಿಗಳು ಶೃತವಾಕ್ಯಸಮ್ಮತವಿದೆನಿಸಿ । ಪೇಳುವರು ತಮ ಸ್ವಾನುಭವ ಸಿದ್ಧವೆಂದು ॥

ಮೌನಮುದ್ರೆಯ ಲಕ್ಷಣವು

೮೨. ಕವಿರಾಜ ರಾಜಿತವೃತ್ತ ॥ ಮಾತಿಗೆತಗಲದೆ ಮನಸಿಂಗಂಟದೆ, ರಾಜಿಪ ಅದ್ವಯಬೊಮ್ಮವಿದು । ಮಾತುಗಳಡಗುತ ಲಾಡಿದಮಾತನು ಅಡಿದನೆಂಬುರುವಿಲ್ಲ ದಲೆ । ಆತ್ಮನ ಅಗಲದೆ ನಿರ್ಮಳಸೌಖ್ಯ ಸುಧಾರಸದೊಳು ಮುಳುಗಿಹುದಂ । ನೀ ತಿಳಿವುದು ನಿಜನಿಷ್ಕ್ರಿಯ ನಿರ್ಮಳ ಮೌನ ಸಮಾಧಿಯಬೆಡಗೆಂದು ॥

ರಾಗ—ಕಲ್ಯಾಣಿ—ಅಟತಾಳ

೮೩. ಮೌನದೊಳಿರುಯೆಂದನು । ಗುರುದೇವನು ಮೌನದೊಳಿರುಯೆಂದನು ॥ ಪ ॥ ಮೌನದಿ ಬ್ರಹ್ಮತತ್ವವ ಸಾಧಿಸೆನ್ನುತ । ಜ್ಞಾನಮುದ್ರೆಯಕರಕಂಜದಿ ತೋರಿಸಿ ॥ಮೌನ॥ ಅ ॥ ಸತ್ತುಚಿತ್ತಾನಂದವೆನಿಸಿ ರಾಜಿಸುವಂಥ । ತತ್ವವತಿಳಿದಾತ ಸತ್ತಂತೆ ಇರುವನು । ಸತ್ಯದನುಡಿಗೆ ಗೋಚರವಲ್ಲವೆನಿಸುವ । ತತ್ವವ ತಿಳಿದೆನೆಂಬಾ ತನೆ ಮೂರ್ಖನು ॥ಮೌ ॥ ೧ ॥ ಅರುವಿನೊಳಿರುವನು ಅರಿತಸಂಮ್ಯಜ್ಞಾನಿ । ಅರಿ ಯದಂಥಕಮೂಕ ಬಧಿರನಂತಿರುವನು । ಪರನಿಂದ್ಯಸ್ತುತಿಗೆ ತಾ ಹಿಗ್ಗದೆ ತಗ್ಗದೆ । ಪರಿ ಕಿಸೆ ಬಾಲಕನಂತಿರುವ ಜಗದೊಳು ॥ ಮೌನ ॥ ೨ ॥ ನಾನುನೀನೆಂಬುವದ್ವೈತಭಾ ವನೆಪೋಗಿ । ತಾನೆತಾನಾದ ಶುದ್ಧಾದ್ವೈತಸಿದ್ಧಿಸಿ । ಸ್ವಾನುಭಾವದಿನ್ನಿನ್ನನಿನ್ನೊಳಗರಿ ತರೆ । ನೀನೆ ಶ್ರೀಗುರುಮಹಲಿಂಗನಾಗುವ ನಿತ್ಯ ॥ ಮೌನದೊಳಿರು ॥ ೩ ॥

ಮಾನಸರಾಜನ ಶ್ರೀಗುರುಸ್ತೋತ್ರಗೈದ ದಂಡಕವು

೮೪. ಶ್ರೀ ದೇಶಿಕೇಂದ್ರಾ ಸುಹೃತ್ಕುಮುದ ಚಂದ್ರಾ ಮಹಾಬೋಧರತ್ನಾಕರಪೂರ್ಣಚಂದ್ರ ಪ್ರಶಾಂತ್ಯಾದಿ ಕಲ್ಯಾಣಗುಣಸಾಂದ್ರ ಸುಜ್ಞಾನಸಂಬೋಧ್ಯ ಕರುಣಾಸಮುದ್ರ ಸದಾಯೋಗಮುದ್ರಾನ್ವಿತಂ ಚಿನ್ಮೂಲಾದ್ರಿಸ್ಥಿತಂ ಸ್ವಪ್ರಕಾಶಂ ಪರಾಕಾಶಲೋಕೇಶ ಅಜ್ಞಾನನಾಶಾ ಅನಾಕಾಶ ಆತ್ಮೇಶ ಅಮೃತೇಶ ವಿಧೂತ ಆಶಾಪಿಶಾಚಾಲಸದ್ಭಕ್ತಂ ಸಂಪೂಜ್ಯ ಸಸಾಯುಜ್ಯ ನಿಜಮುಕ್ತಿಕೋಶ ಚಿದಾಕಾಶ ಸರ್ವೇಶ ವಿಶ್ವೇಶ ನಿತ್ಯಾತ್ಮಸತ್ಯಾತ್ಮ ಶುದ್ಧಾತ್ಮ ನಿರ್ಲೇಪನೀನದ್ವಯಾನಂದ ಖಂಡಂ ಮಭೇದ್ಯಂ ಮಬೋಧ್ಯಂ ಮವಾಚ್ಯಂ ಮಚಿಂತ್ಯಂ ಮಸಾಧ್ಯಂ ಮಸಂಗಂ ಮನಾದ್ಯಂತಶೂನ್ಯಂ ಮವಿಚ್ಛಿನ್ನ ಮೇಣಪ್ರಮೇಯಂ ನಿರಾಕಾರ ಸಕಾರ ಮೂರ್ತಿ ಚಿದಾನಂದಮೂರ್ತಿ ಸದಾ ಸತ್ಯಕೀರ್ತಿ ಜಗತ್ಕೀರ್ತಿ ಯುಷ್ಮತ್ಕೃಪಾವೀಕ್ಷಣಜ್ಯೋತಿ ಇಂದೆನ್ನ ಹೃತ್ತಾಮಸಾಜ್ಞಾನ ಸಂಸಾರಗಾಢಾಂಧಕಾರಖಿಳ ದೇಹೇಂದ್ರಿಯಪ್ರಾಣ ಹೃದ್ಬುದ್ಧ್ಯಹಂಕಾರ ಚಿತ್ತಾದಿದೃಶ್ಯ ಪ್ರಪಂಚಾಭಿಮಾನಂಗಳೆಂತೆಂಬ ಶಲಭಂಗಳೊಂದಿರದೆ ಉರಿದೋಗಿ ಚಿತ್ತಕ್ಕೆ ವಿಶ್ರಾಂತಿಯಾಯ್ತಿನ್ನು ತ್ರಿಗುಣಂಗಳುರು ಕ್ಲೇಶ ಅರಿವರ್ಗ ವ್ಯಸನಷ್ಟಮದಪಾಶವೆಂತೆಂಬ ಗಿರಿಗೊಜ್ರವೆಂದೆನಿಸಿ ಅಜ್ಞಾನ ತಾಮಸಕೆ ಮಧ್ಯಾಹ್ನಮಾರ್ತಾಂಡನೆಂತ್ಯಸದು ರಾಜಿಸುವವಸ್ಥಾತ್ರಯ- ಸಾಕ್ಷಿ ಶ್ರೀಮನ್ ಮಹಾದೇವ ದೇವೇಶ ತವದಿವ್ಯ ಚರಣಾಬ್ಜಯುಗ್ಮಕ್ಕೆ ಅಭಿವಂದನಂಗೈದಕ್ಷಣದಿ ಸಂವಿಸುತ್ತಮುದದಿಂದ ದಯದಿಂದ ವಿಷ್ಣುವಿಂ ಜಿಷ್ಣುವಿಂ ಬೊಮ್ಮನಿಂ ರುದ್ರನಿಂ ಚಂದ್ರನಿಂ ಸೂರ್ಯನಾಗೇಂದ್ರನಿಂದ್ಯಕ್ಷರಿಂ ಸಿದ್ಧರಿಂ ಸಾಧ್ಯರಿಂ ದಾರಿಗುಂ ಛೇದಿಸಲ್ ಸಾಧುವೆಂದೆಂದಿಗುಂ ಆಗದುದ್ಘಟದ ಅಜ್ಞಾನಸಂಜನಿತ ಮಲಪಾಶಕರ್ಮಾಖ್ಯಮುಪ್ಪುರಿಯ ಪಗ್ಗಮಂ ಒಂದೆ ನಿಮಿಷಾರ್ಧದೋಳ್ ವರಜ್ಞಾನಖಡ್ಗದಿಂ ಛೇದಿಸಿ ಭೇದಿಸಿ ಘನತತ್ವಮಸಿವಾಕ್ಯ ಬೋಧಾಮೃತ ವೃಷ್ಟಿಯಿಂದೆನ್ನ ಹೃತ್ತಾಪಮಂ ತಣಿಸಿನೀ ಸರ್ವವೇದಾರ್ಥ ತತ್ವಾರ್ಥ ಮಂತ್ರಾರ್ಥ ಸೂತ್ರಾರ್ಥ ವಾಚ್ಯಾರ್ಥ ಲಕ್ಷ್ಯಾರ್ಥ ಗುಹ್ಯಾತಿಗುಹ್ಯಂಗಳ ದಗಾಹಿಸುತ್ತಖಿಳ ದೇಹೇಂದ್ರಿಯಾತೀತ ಜಗದಾದಿ ಮಧ್ಯಾಂತಪರಿಪೂರ್ಣಸ್ವಗತಾದಿ ಭೇದಂಗಳೊಂದೊಗೆಯದದ್ವೈತವೆಂದೆನಿಪ ಪರವಸ್ತು ನಿನೆಯೆಂದು ಕರತಲಾಮಲಕವೆಂದೆನಿಸಿ ಮಾಯಾಂಗನಾಮೋಹ ನಾಮಾದಿ ರೂಪಳಿದು ಮುಕ್ತಾಂಗನಾಕೂಟವೆಂದೆನಿಸಿ ರಾಜಿಸುವ ಬ್ರಹ್ಮೇಂದ್ರ ಸಂಸ್ತುತ್ಯಮಾಗಿರ್ಪ ಶಾಶ್ವತೆಂದೆನಿಪ ವರಮೋಕ್ಷ ಸಾಂಬ್ರಾಜ್ಯ ಪಟ್ಟಾಭಿಷೇಕವಂ ಗೈದೆನ್ನ ಧನ್ಯನೆಂದೆನಿಸಿದೇ ಓ ಪ್ರಭೋ ನಿನ್ನ ಪ್ರಭಾ ನಿನ್ನ ಕೃಪಾ ನಿನ್ನ ಕೀರ್ತಿ ನಿನ್ನ ಮಹಿಮೆ ಪೊಗಳಲ್ಕೆ ಧರಣಿಪೊತ್ತಿರುವಗುಂ ಪುಸ್ತುಕದ ಮುತ್ತೈದೆಗುಂಮಸದಳೆಂದೆನಿಸುತ್ತೆ ಮೌನವಂಗೊಂಡಿರಲ್ಕಾನೇಸರವನೆನಿಪೆ ದೇವಚೂಡಾಮಣೀ ತಾಮಸಂಬರಮಣೀ ಜ್ಞಾನತೇಜೋಮಣೀ ತ್ವಂ ಸದಾನಂದಸಿಂಧು ಸದಾಭಕ್ತಬಂಧು ನಮಸ್ತೇ ನಮಸ್ತೇ ನಮಃ ॥

೮೫. ಸೀಸ ॥ ಶ್ರೀದಕ್ಷಿಣಾಮೂರ್ತಿ ಕರುಣಾಸಾಗರ ಮೂರ್ತಿಯನ್ನ ಹೃತ್ಪದ್ಮ ದೋಳ್ಕುಳಿತು ಮುದದಿ । ವೇದಾಂತ ತತ್ವಾರ್ಥ ಅರುವಿತ್ತಪರಿಯಲ್ಲಿ ಉಸುರಿಪ್ಪೆನೀ ದಿವ್ಯ ಗ್ರಂಥದಲ್ಲಿ । ಆದರದಿ ಸುಶ್ರವ ಮನನವಗೈಯ್ಯುವ ಮೋಕ್ಷಕಾಮಿಗಳಿಗುನ್ನ ತದ ಮೊಕ್ಷವನ್ನು । ಓದಿ ಕೇಳುತ ಭಕ್ತಿಯನುಗೈವ ಸರ್ವರಿಗು ಪುತ್ರ ಪೌತ್ರಾ ಯುಸ್ಸು ಕೀರ್ತಿಯನ್ನು ॥

ಗೀತೆ ॥ ಆಂಧೋಳಿಕವಧ್ಯಾನ್ನವಸ್ತ್ರ ಭೂಷಣವನು ಅತುಲಿತಾಷ್ಟೈಶ್ವರ್ಯ ಭೋಗಕಾವ್ಯುವನ್ನು । ಮೋದದಿಂದಿತ್ತು ಪೊರೆವ ಬೆಂಬಿಡದೆ ನಿಂದು । ಇದಕೊಡೆಯ ಸಾಂಬಶಿವ ತನ್ನ ಪುತ್ರರೆಂದು ॥

ಮೋಕ್ಷ ಲಕ್ಷ್ಮಿಯ ಮಂಗಳಾರತಿ

ರಾಗ—ಕಲ್ಯಾಣಿ—ಆದಿತಾಳ

೮೬. ಮಂಗಳಾರತಿ । ಬೆಳಗಿರೀ । ಯೋಗೀಣಿಯಾರೂ । ಹಿಂಗಾದೆ ಮಹಾ ದೇವಿಗೆ ॥ ಪ ॥ ಮಂಗಳಾಂಗಿ ಶಿವನರಶಿಯು ಮುನಿಯತಿ । ಕಂಗಳಪ್ರಿಯೆ ಹೃದ ಯಾಂಗಣವಾಸಿಗೆ ॥ ಮಂಗಳಾರತಿ ಬೆಳಗಿರೀ ॥ ಅ ॥ ಕರುಣಾಸಾಗರೀ ಶುಭಕರೀ । ತ್ರಿಪುರಸುಂದಾರೀ । ಪರವುಬೋಧೈಕಾಚಾತುರೀ । ವರಿಯೂವಳ್ । ಪರವು ತತ್ವ ರಸ ಪೂರ್ಣ ಚಂದ್ರನಾ ! ಕಿರಣದಂತೆ ಸುರಿವಸೊಂಪಿನಾಧರಿ । ಆತ್ಮ ವಿಚಾರದ ಝುರೀ । ಮುಗುಳ್ನಗೆ ತೋರುವ ಶಿರಿ । ಆಗಮ ಶೃತಿಕುಚವೂ । ಜ್ಞಾನಕರ್ಮವೇ ಕರವು । ಮೋಹವೆ ನಡುವು ! ಈಕೆಯ ಚಲುವು । ಕವಿಯು ಹರಿಯೂ । ವಿಧಿಯೂ ಫಣಿಯೂ ವರ್ಣಿಸಲಾರದೆಕರಗಳ್ಮುಗಿವರು । ಶರ್ವನರಾಣಿಗೆ ಸರ್ವಮಂಗಳೆಗೇ । ಮಂಗಳಾರತಿ ಬೆಳಗಿರೀ ॥ ೧ ॥ ಪ್ರಣವಜ್ಯೋತಿಯೇ ತಿಲಕವೂ ತ್ರೈಜಗನ್ಮೋಹಿ ನಿಗೇ ವಿನುತಾನಂದಾವದನವು । ಅನುಪಾಮಾಶುದ್ಧ ಸತ್ವಗುಣಮಾಂಗಲ್ಯ ರಚನ ಜಿನುಗದಂತೆ ಚಿತ್ಕಳೆ ಪೀತಾಂಬರಧರೀ । ಕಾಮವಿಕಾರದಪುರಿ ಬಿಗಿದೊಡ್ಯಾಣದಶಿರೀ। ಸಾತ್ವಿಕಮುತ್ತಿನಮಣಿಯೂ ರಾಜಸಗುಣರುಳಿಯೂ । ತಾಮಸವೇಣಿಯೂ ಈಶನರಾಣಿಯೂ ಜಪದಾ ತಪದಾ ವ್ರತದಾ ಯಜ್ಞದಾ ಫನಪದಪಾಲಿಪ ಶ್ರೀಪರ ಬ್ರಹ್ಮಿಗೆ ಮುನಿಗಳಭಾಗ್ಯದಕೌಂಸ್ತುಭಮಣಿಗೇ ॥ ಮಂಗಳಾರತಿ ಬೆಳಗಿರೀ ॥ ೨ ॥ ನಿರುತಮೂಲೆ ಭಕ್ತರ ಪೊರೆಯುವಾ । ತ್ರೈಮೂರ್ತಿಗಳಿಂದ ಭರದಿಸೇವೆಯಾ ಗೊಂಬುವ । ಗರುವೇಯೂ ಭಕ್ತಹೃದಯಫನಸಿಹ್ಮಾಸನದೊಳು । ಹರುಷದಿಂದ ಚಿನ್ನದಪುತ್ಥಳಿಯಾಪರೀ । ರಾಜಿಪಓಂಕಾರೇಶ್ವರೀ ಕಾವ್ಯುವಪಾಲಿಪಶಿರೀ ನೀಗುವ ಭವರುಜೆಗೆ ಭೋಗ ಮೋಕ್ಷದಾನಿಧಿಗೇ ನಿರ್ವಚನೀಕೆಗೆ ಈಶನರಾಣಿಗೆ ತನುವೂ ಮನವೂ ಧನವೂ ಗುಣವೂ ಒಪ್ಪಿಸಿ ಅರುವಿನ ಜ್ಯೋತಿಯಮುಟ್ಟಿಸಿ । ಗುರುಮಹ ಲಿಂಗನಾ । ಶ್ರಿತೆ ಮೋಕ್ಷಲಕ್ಷ್ಮಿಗೆ । ಮಂಗಳಾರತಿ ಬೆಳಗಿರೀ ॥ ೩ ॥

ಮಂಗಳಾರತಿ

೮೭. ಮಂಗಳಂ ಮಂಗಳಂ । ಶ್ರೀಗುರುವಿಗೆ । ಮಂಗಳಂ ಮಂಗಳಂ ॥ ಪ ॥ ಗುರುಶುಕ್ರಶಿಖಿಧೃವತಾರಣಂಗಳು । ವರಚಂದ್ರಭಾಸ್ಕರಕೋಟಿ ಮಿಂಚುಗಳಿಗು । ನಿರುತಕಾಂತಿಯನಿತ್ತುಮಿಗೆ ಸ್ವಪ್ರಕಾಶದಿ । ಪರಮ ಆನಂದದಿರಾಜಿಸುವಾತ್ಮಗೆ ॥ ೧ ॥ ವರಭ್ರಾಂತದೊರಹೊಳಗೆಲ್ಲ ತುಂಬಿರುವಂಥ । ವರವ್ಯೋಮದಂತೆಲ್ಲ ಭೂತಂಗಳಲಿ ತುಂಬಿ । ನಿರುನಿರ್ಲೇಪದಿ ಬೆಳಗುತ್ತ ಭುವನದಿ । ಪರಿಪೂರ್ಣವಾಗಿಹ ಪರಬ್ರಹ್ಮ ಲಿಂಗಕ್ಕೆ ॥೨॥ ವಿಧಿ ಹರಿ ರುದ್ರ ಈಶ್ವರ ಸದಾಶಿವರನ್ನು । ಪದುಳದಿ ಶಿಶುಗಳಪರಿಯು ಲಾಡಿಸುವಂಥ । ಚದುರೆಯ ಹಸ್ತದ ಬುಗುರಿಯ ತಾಡಿಪ । ಸದಮಲಗುರುಮಹ ಲಿಂಗರಂಗಗೆ ನಿತ್ಯ ॥ ಮಂಗಳಂ ॥ ೩ ॥

ಇತಿ ಪಂಚಮ ಪ್ರಕರಣ ಸಮಾಪ್ತಂ.

ಗದ್ಯ ॥ ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪರಮಗುರು
ಸ್ವಾರ್ವಭೌಮ ಶ್ರೀದತ್ತಾತ್ರೇಯ ಕರಕಮಲಸಂಜಾತ ಶ್ರೀಶಂಕರಾನಂದ
ಗುರುಮಹಲಿಂಗರಂಗ ಯತಿವರೇಣ್ಯ-ಚರಣಕಮಲ ಭೃಂಗಾಯ
ಮಾನ ಶ್ರೀಶಂಕರಾನಂದಯೋಗಿ ವಿರಚಿತ ಕೈವಲ್ಯನವನೀತವೆಂಬ
ಗ್ರಂಥದಲ್ಲಿ ಅಮನಸ್ಕ ರಾಜಯೋಗವೆಂಬ ಪಂಚಮ ಪ್ರಕರಣ
ದೊಳು ಪದ್ಯಗಳು ೮೮-೨೧೫ ವೃತ್ತಗಳು ೫ ಸೀಸಗಳು
೭ ಕಂದಗಳು ೨೭ ಶ್ಲೋಕಗಳು ೫ ಅಂತೂ ವಚನಗಳು
೯೧-೩೫೮ ಅಂತು ಪಂಚ ಪ್ರಕರಣಗಳಿಂದ ತತ್ವಂ
ಗಳು ೧೨೭-೫೮೧ ವೃತ್ತಗಳು ೨೦ ಸೀಸಗಳು
೨೦ ಕಂದ ವಚನ ಮುಂತಾಗಿ ೮೩ ಶ್ಲೋಕ
೨೧ ಕ್ಕೆ ಒಪ್ಪುವ ೨೬೫-೭೩೫ ವಚನಂ
ಗಳಿಗೆ ಮಂಗಳಮಸ್ತು. ಶ್ರೀ. ಶ್ರೀ.

ಮ ಂ ಗ ಳ ಮ ಸ್ತು.

ಕೈವಲ್ಯನವನೀತವು ಸಂಪೂರ್ಣಂ.

ಶ್ರೀ ಸತ್ಯಾನಂದ ಪ್ರೆಸ್ ಭಾಷ್ಯಂ ರೋಡ್, ಬೆಂಗಳೂರು 2. — 1250 ಪ್ರತಿಗಳು.

ಬಿಕರಿಗೆ ಸಿದ್ಧವಾಗಿರುವ ಕಾದಂಬರಿಗಳು

2-00 ರೂ.ಗಳ ಕಾದಂಬರಿಗಳು

ಪತಂಗ ಪ್ರಣಯ	ಪಾಣಿಗ್ರಹಣ
ಕಾಲಮೇಘ	

1-50 ನ.ಪೈ. ಕಾದಂಬರಿಗಳು

ಮೋಹಿನಿ ವಿಲಾಸ	ಪ್ರೇತವನದ ಪುಷ್ಪ
ಏಳು ಘಂಟೆ ಏಳು ನಿಮಿಷ	ಹಂತಕರ ಗುರೂಜಿ
ಅವಳಲ್ಲ ಅಪರಾಧಿ	ಅರಬ್ಬಿ ಅಬ್ದುಲ್ಲಾ
ಅರಗು ಮಾಳಿಗೆ	ಜರಾಕ್ ಖಾನ್
ಪ್ರೇತವರ್ತನ	ಕಬ್ಬಿಣದ ಕರಡಿ
ಭುವನ ಗಾಂಧಾರಿ	ಚರ್ಚ್ ಗೇಟ್
ರತ್ನಸಿಂಹಾಸನ	ಗುಮಾನಿ ಹೆಂಗಸು
ಆಸ್ಥಾನ ಪುರೋಹಿತ	48ನೇ ನಂ. ವೀಧಿ
ಒ.ಸಿ. 56	ಕಾಮಿನಿಯ ಕಠಾರಿ
ಸತ್ತವಳು ಯಾರು ?	ಕಡಲ್ಗಳ್ಳರು
ಜಾಹಿರಾತಿನ ಮರ್ಮ	ಮಾಯವಾದ ಪತ್ತೇದಾರ
ಡಬ್ಬಲ್ ಮರ್ಡರ್	ಪ್ರಚಂಡ ಮಾರ್ತಾಂಡ

65 ನಯಾಪೈಸಾ ಕಾದಂಬರಿಗಳು

ಟೈಪಿಸ್ಟ್ ಗರ್ಲ್	ಕುಟುಂಬ ಕಾಟ
ಓಡಿಹೋದ ಹುಡುಗಿ	ಪ್ರೇಯಸಿಯಲ್ಲ ಪಿಶಾಚಿ
ಬಿನ್ನಾಣದ ಸುಂದರಿ	ಢಕಾಯಿತಿ ನಂ. 1

10 ಆಣೆ ಕಾದಂಬರಿಗಳು

ಢಾಕು ಸರ್ದಾರ್	ಮನೆಯ ಕಳ್ಳ
ಸರ್ಕಲ್ ಗರ್ಲ್	ಹೇಡಿಯೋ ? ಹೆಮ್ಮಾರಿಯೋ ?
ಮಹಾಬಲಿ	ನಿರಪರಾಧಿನಿ
ಕೊಲೆಯ ಪೂರ್ವಕಥೆ	

ಟಿ. ನಾರಾಯಣ ಅಯ್ಯಂಗಾರ್
ಬುಕ್-ಸೆಲ್ಲರ್ ಅಂಡ್ ಪಬ್ಲಿಷರ್
ಬಳೇಪೇಟೆ § § ಬೆಂಗಳೂರು-2.